
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 29 | ಜುಲೈ 16–22, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com




ಹಿರಿಯ ಸೆಕ್ಯುಲರ್ ನಾಯಕ

ಬಿವಿ ಮೊಯಿದಿನ್ ಇನ್ನಿಲ್ಲ



ಶಿಕ್ಷಣದಲ್ಲಿ 'ಶ್ರೇಷ್ಟತೆಯ ವ್ಯಸನ'



'ಸ್ವಸ್ಥ ಭಾರತ' ಕಾರ್ಪೊರೇಟ್ ಆಸ್ಪತ್ರೆಗಳಿಗೆ ಮಾತ್ರ



ಪೌರ ಕಾರ್ಮಿಕನ ಆತ್ಮಹತ್ಯೆ 'ಸರಣಿ ಹತ್ಯೆ'ಯಾಗದಿರಲಿ

ಬಂಗಾಳ–ತ್ರಿಪುರಾಗಳಲ್ಲಿ ಪ್ರಜಾಪ್ರಭುತ್ವದ ಕೊಲೆಯ ವಿರುದ್ಧ ರಾಷ್ಟ್ರೀಯ ಪ್ರತಿಭಟನೆ : ಜುಲೈ 24

ಕೇರಳ ನಿಫಾ ತಡೆ ಕ್ರಮ: ಅಂತರಾಷ್ಟ್ರೀಯ ಮನ್ನಣೆ





'ICDS ಉಳಿಸಿ' ದೇಶದಲ್ಲಿ ಮೊಳಗಿದ ಕೂಗು

ಚಮಚಾಗಳಿಗೆ ಉತ್ಕೃಷ್ಟತೆಯ ಬೋಗಸ್ ಮನ್ನಣೆ –ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಮೋದಿ ಸರಕಾರ ಇನ್ನೂ ಅಸ್ತಿತ್ವಕ್ಕೇ ಬಂದಿರದ, ಕಾಗದದ ಯೋಜನೆಯಲ್ಲೇ ಇರುವ ರಿಲಯಂಸ್ ಫೌಂಡೇಷನ್ ನ ಜಿಯೋ ಇನ್ಸ್ಟಿಟ್ಯೂಟ್‌ಗೆ 'ಉತ್ಕೃಷ್ಟತೆ'ಯ ಸಂಸ್ಥೆ' ಎಂಬ ಮನ್ನಣೆ ಕೊಟ್ಟಿರುವ ನಡೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ವಿರೋಧಿಸಿದೆ.

ಕೆಲವು ಸಮಯದ ಹಿಂದೆ ಸರಕಾರ ತಲಾ ಹತ್ತು ಸಾರ್ವಜನಿಕ ನಿಧಿಯಿಂದ ನಡೆಯುವ ಮತ್ತು ಖಾಸಗಿ ವಲಯದ ಶೈಕ್ಷಣಿಕ ಸಂಸ್ಥೆಗಳನ್ನು ಉತ್ಕೃಷ್ಟತೆಯ ಸಂಸ್ಥೆಗಳಾಗಿ ಆರಿಸಲಾಗುವುದು ಎಂದು ಪ್ರಕಟಿಸಿತ್ತು. ಮಾಜಿ ಮುಖ್ಯ ಚುನಾವಣಾ ಆಯುಕ್ತ ಎನ್. ಗೋಪಾಲಸ್ವಾಮಿಯವರ ಅಧ್ಯಕ್ಷತೆಯ ಒಂದು ಸಮಿತಿಗೆ ಈ ಸಂಸ್ಥೆಗಳನ್ನು ಗುರುತಿಸುವ ಕೆಲಸವನ್ನು ಹಚ್ಚಲಾಯಿತು. ಈ ಇಡೀ ಕಸರತ್ತು ಮತ್ತು ಪರಿಗಣನೆಗಳು ಬಹುಪಾಲು ಸಾರ್ವಜನಿಕ ವ್ಯಾಪ್ತಿಯ ಹೊರಗೇ ಇದ್ದವು. ಈಗ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ಒಂದು ಪ್ರಕಟಣೆಯನ್ನು ಮಾಡಿದೆ. ಇಂತಹ ಸಂಸ್ಥಗಳ ಸಂಖ್ಯೆಯನ್ನು 20ರಿಂದ ಕೇವಲ 6ಕ್ಕೆ ಇಳಿಸಲಾಗಿದೆ. ಖಾಸಗಿ ವಲಯದಿಂದ ಆರಿಸಿದ ಮೂರು ಸಂಸ್ಥೆಗಳಲ್ಲಿ ರಿಲಯಂಸ್ ಫೌಂಡೇಷನ್‌ನ ಜಿಯೊ ಇನ್ಸ್ಟಿಟ್ಯೂಟ್ ಕೂಡ ಒಂದು.

ಒಂದು ಸಂಸ್ಥೆ ಸಮಯದ ಒರೆಗಲ್ಲಿನಲ್ಲಿ ನಿಲ್ಲುವುದು ಮತ್ತು ನಿಜವಾಗಿಯೂ 'ವಿಶ್ವ ದರ್ಜೆ'ಯ ಉನ್ನತ ಅಧ್ಯಯನ ಮತ್ತು ಸಂಶೋಧನೆಯ ಸಂಸ್ಥೆಯಾಗಿ ವಿಕಾಸಗೊಳ್ಳುವದು ಒಂದು ಸವಾಲಿನ ಪ್ರಕ್ರಿಯೆ. ಉತ್ಕೃಷ್ಟತೆಯ ಮನ್ನಣೆ ಗಳಿಸಲು ಅಪಾರ ಅವಿರತ ಶ್ರಮ ಮತ್ತು ಸೃಜನಾತ್ಮಕತೆ ಬೇಕಾಗುತ್ತದೆ. ಅಸ್ತಿತ್ವದಲ್ಲೇ ಇರದ, ಕೇವಲ ಕಲ್ಪನೆಯಲ್ಲೇ ಇರುವ ಜಿಯೋ ಇನ್ಸ್ಟಿಟ್ಯೂಟ್ ಗೆ ಆ ಮನ್ನಣೆಯನ್ನು ಕೇವಲ ಕಾಗದದ ಮೇಲಿನ 'ರೂಪುರೇಷೆ'ಯ ಆಧಾರದಲ್ಲೇ ಕೊಟ್ಟಿರುವುದು ತಬ್ಬಿಬ್ಬು ಮಾಡಿರುವ ಸಂಗತಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವರ್ಣಿಸಿದೆ.

ಇದನ್ನು ಭಂಡ ಚಮಚಾಗಾರಿಕೆ ಎಂದಲ್ಲದೆ ಬೇರೆ ಯಾವ ರೀತಿಯಲ್ಲೂ ವ್ಯಾಖ್ಯಾನಿಸಲು ಸಾಧ್ಯವಿಲ್ಲ ಎಂದು ಪೊಲಿಟ್‌ಬ್ಯುರೊ ಇದನ್ನು ಖಂಡಿಸಿದೆ. ಇದು ಸಮಸ್ತ ಉನ್ನತ ಶಿಕ್ಷಣ ವಲಯವನ್ನು ಕುಗ್ಗಿಸುವ ಪರಿಣಾಮ ಬೀರುತ್ತದೆ, ಸಾರ್ವಜನಿಕ ನಿಧಿಯಿಂದ ನಡೆಸುವ ಉನ್ನತ ಶಿಕ್ಷಣವನ್ನು ಬುಡಮೇಲು ಮಾಡಿ ಖಾಸಗೀಕರಣವನ್ನು ಪ್ರೋತ್ಸಾಹಿಸುವ ಗೀಳಿನಲ್ಲೇ ಈ ಸರಕಾರ ಮುಳುಗಿದೆ ಎಂಬುದನ್ನು ಎತ್ತಿ ತೋರುತ್ತಿದೆ ಎಂದು ಅದು ಟಿಪ್ಪಣಿ ಮಾಡಿದೆ.

ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು " ಒಂದು ಕಾರ್ಪೊರೇಟ್‌ನ ಅಸ್ತಿತ್ವದಲ್ಲೇ ಇರದ ವಿಶ್ವವಿದ್ಯಾಲಯಕ್ಕೆ 'ಉತ್ಕೃಷ್ಟತೆ'ಯ ಪಟ್ಟ ನೀಡಿರುವುದು ಕಳೆದ ನಾಲ್ಕು ವರ್ಷಗಳಲ್ಲಿ ತಮ್ಮ ಪ್ರಿಯ ಕಾರ್ಪೊರೇಟ್‌ಗಳಿಗೆ 3ಲಕ್ಷ ಕೋಟಿ ರೂ.ಗಳಷ್ಟು ಸಾಲ ಮಾಫಿ ಕೊಟ್ಟಿರುವುದಕ್ಕೆ ಅನುಗುಣವಾಗಿಯೇ ಇದೆ" ಎಂದು ಹೇಳಿದ್ದಾರೆ.

ಸಾರ್ವಜನಿಕ ಶಿಕ್ಷಣ ಸಂಸ್ಥೆಗಳನ್ನು ಕಳಚಿ ಹಾಕುವುದನ್ನು, ಕಾರ್ಪೊರೇಟ್‌ಗಳಿಗೆ ಜನಸಾಮಾನ್ಯರ ಸಂಪನ್ಮೂಲಗಳನ್ನು ಉಣಬಡಿಸುವುದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ–ಎಸ್‌ಎಫ್‌ಐ

ಎಸ್‌ಎಫ್‌ಐನ ಕೇಂದ್ರೀಯ ಕಾರ್ಯಕಾರಿ ಸಮಿತಿ ಕೂಡ ಜಿಯೋ ಇನ್‌ಸ್ಟಿಟ್ಯೂಟ್‌ಗೆ ಉತ್ಕೃಷ್ಟತೆಯನ್ನು ಕೊಡಮಾಡಲು ನಿರ್ಧರಿಸಿರುವುದರ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದೆ. ರಿಲಯಂಸ್ ಪ್ರಕಾರವೇ ಇದು ಅಸ್ತಿತ್ವಕ್ಕೆ ಬರಲು 3 ವರ್ಷಗಳು ಬೇಕು. ಸಾರ್ವಜನಿಕ ಶಿಕ್ಷಣ ಸಂಸ್ಥೆಗಳನ್ನೆಲ್ಲ ತಿರಸ್ಕರಿಸಿ ಇಂತಹ ಪ್ರಶಸ್ತಿಯನ್ನು ಅಸ್ತಿತ್ವದಲ್ಲಿರದ ಸಂಸ್ಥೆಗೆ ಕೊಟ್ಟಿರುವುದು, ಮೇಲಿಂದ ಕೆಳಗೆ ಸಾರ್ವಜನಿಕ ಶಿಕ್ಷಣವನ್ನು ಕಳಚಿ ಹಾಕಲು ಗುರಿಯಿಟ್ಟಿಕೊಂಡಿರುವುದನ್ನು ತೋರಿಸುತ್ತದೆ ಎಂದು ಅದು ಹೇಳಿದೆ.

ಈ ಉತ್ಕೃಷ್ಟತೆಯ ಮನ್ನಣೆ ಪಡೆದ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆ, ಸರಕಾರದ ಅನುಮತಿಯಿಲ್ಲದೆ ವಿದೇಶಿ ಅಧ್ಯಾಪಕರುಗಳನ್ನು ನೇಮಿಸಿಕೊಳ್ಳಲು, ವಿದೇಶಿ ಸಂಸ್ಥೆಗಳೊಡನೆ ಜತೆಗೂಡಲು, ಮತ್ತು ತಮಗೆ ಸರಿಕಂಡಂತೆ ಶುಲ್ಕ ವಿಧಿಸಲು ಅವಕಾಶವಿರುತ್ತದೆ ಎಂದು ಹೇಳಲಾಗಿತ್ತು. ಅಲ್ಲದೆ ಇವಕ್ಕೆ 1000 ಕೋಟಿ ರೂ.ಗಳನ್ನು ಕೊಡುವುದಾಗಿಯೂ ಹೇಳಲಾಗಿತ್ತು. ಒಬ್ಬ ಅತ್ಯಂತ ಶ್ರೀಮಂತ ವ್ಯಕ್ತಿಗೆ ತೆರಿಗೆದಾರರ ಈ ಹಣವನ್ನು ಕೊಡುವುದು ಕ್ರಿಮಿನಲ್ ಕೃತ್ಯವಲ್ಲದೆ ಇನ್ನೇನು ಎಂದು ಅದು ಕೇಳಿದೆ. ಈ ಹಿಂದೆ ಜೆಎನ್‌ಯು ಮತ್ತು ಜಾಧವ್‌ಪುರ್ ವಿವಿಗಳ ವಿದ್ಯಾರ್ಥಿಗಳು ಜನ–ವಿರೋಧಿ ಧೋರಣೆಗಳನ್ನು ಪ್ರತಿರೋಧಿಸುತ್ತಿದ್ದಾಗ ತೆರಿಗೆದಾರರ ಹಣವನ್ನು ಈ ಸಂಸ್ಥೆಗಳಲ್ಲಿ ಪೋಲು ಮಾಡಲಾಗುತ್ತಿದೆ, ಇವು ರಾಷ್ಟ್ರ–ವಿರೋಧಿಗಳು ಎಂದು ಕೇಸರಿ ಪಡೆಗಳು ಬೊಬ್ಬಿಟ್ಟಿದ್ದವು. ಆದರೆ ಈಗ ಈ ಶ್ರೀಮಂತನ ಸಂಸ್ಥೆಗೆ ಸಾರ್ವಜನಿಕ ಸಂಪನ್ಮೂಲಗಳನ್ನು ಕೊಡಮಾಡುವುದನ್ನು ಇದೇ ಮಂದಿ ಹಾಡಿ ಹೊಗಳುತ್ತಿದ್ದಾರೆ ಎಂದಿರುವ ಎಸ್‌ಎಫ್‌ಐ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳನ್ನು ಕಳಚಿ ಹಾಕುವುದನ್ನು, ಕಾರ್ಪೊರೇಟ್‌ಗಳಿಗೆ ಜನಸಾಮಾನ್ಯರ ಸಂಪನ್ಮೂಲಗಳನ್ನು ಉಣ ಬಡಿಸುವುದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ, ಸಾರ್ವಜನಿಕರು ಕಾರ್ಪೊರೇಟ್‌ಗಳಿಗಾಗಿ ಇಂತಹ ಲೂಟಿ ಮತ್ತು ಸರ್ವಜನಿಕ ಶಿಕ್ಷಣದ ಮೇಲೆ ಈ ದಾಳಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಬೇಕು ಎಂದು ಮನವಿ ಮಾಡಿದೆ.

ಜಾಧವ್‌ಪುರ್ ವಿವಿ ವಿದ್ಯಾರ್ಥಿಗಳ ಹೋರಾಟಕ್ಕೆ ಎಸ್‌ಎಫ್‌ಐ ಬೆಂಬಲ

ಜಾಧವ್‌ಪುರ ವಿಶ್ವವಿದ್ಯಾಲಯದ ಕಲಾವಿಭಾಗದ ಪದವಿ ಕೋರ್ಸುಗಳಿಗೆ ಪ್ರವೇಶಕ್ಕೆ ವಿವಿಯ ಪ್ರವೇಶ ಸಮಿತಿ, ಮತ್ತು ಕಾರ್ಯಕಾರಿ ಸಮಿತಿ ಪರೀಕ್ಷೆಗಳನ್ನು ನಡೆಸಲು ನಿರ್ಧರಿಸಿದ್ದವು. ಆದರೆ ಇದಕ್ಕೆ ಎಲ್ಲರೂ ಸಿದ್ಧಗೊಳ್ಳುತ್ತಿದ್ದಾಗ ಇದ್ದಕ್ಕಿದ್ದಂತೆ ಪರೀಕ್ಷೆಗಳನ್ನು ರದ್ದು ಮಾಡಲಾಯಿತು. 12ನೇ ತರಗತಿಯ ಮಾರ್ಕುಗಳ ಆಧಾರದಲ್ಲೇ ಪ್ರವೇಶ ನೀಡಲಾಗುವುದು ಎಂದು ಪ್ರಕಟಿಸಲಾಯಿತು.

ಇದನ್ನು ಹೊರಗಿನವರ ಒತ್ತಡದಿಂದ ಮಾಡಲಾಗಿದೆ ಎಂದು ತಿಳಿದ ಕಲಾವಿಭಾಗದ ವಿದ್ಯಾರ್ಥಿಗಳು ಬಲವಾಗಿ ವಿರೋಧಿಸಿದರು. ಏಕೆಂದರೆ ದೇಶದ ವಿವಿಧ ಸ್ಥಳಗಳಿಂದ ಮತ್ತು ವಿದೇಶಗಳಿಂದಲೂ 18000 ಪ್ರವೇಶ ಅರ್ಜಿಗಳು ಬಂದಿದ್ದು, ಇಂತಹ ನಿರ್ಣಯ ಅವರಿಗೆಲ್ಲ ತೊಂದರೆ ಉಂಟು ಮಾಡಿತ್ತು. ವಿದ್ಯಾರ್ಥಿಗಳು ಜುಲೈ 4 ರಿಂದ ಧರಣಿ ಆರಂಭಿಸಿದರು, ನಂತರ 20 ವಿದ್ಯಾರ್ಥಿಗಳು ಅನಿರ್ದಿಷ್ಟ ಕಾಲದ ಮುಷ್ಕರ ಆರಂಭಿಸಿದರು.

ಪ್ರವೇಶದ ವಿಧಾನ ಹೇಗಿರಬೇಕು ಎಂದು ಹೇಳಲು ವಿದ್ಯಾರ್ಥಿಗಳಿಗೆ ಅಧಿಕೃತ ಹಕ್ಕಿಲ್ಲ ಎಂಬುದೇನೋ ನಿಜ. ಆದರೆ ಈ ಕುರಿತು ನಿರ್ಧಾರವನ್ನು ಸಂಬಂಧಪಟ್ಟವರು ಮಾಡಬೇಕು ಎಂದಿರುವ ಎಸ್‌ಎಫ್‌ಐ ಟಿಎಂಸಿ ಸರಕಾರ ಹೇರಿರುವ ನಿರ್ಣಯವನ್ನು ಪ್ರತಿರೋಧಿಸುತ್ತಿರುವ ವಿದ್ಯಾರ್ಥಿಗಳಿಗೆ ಬೆಂಬಲ ವ್ಯಕ್ತಪಡಿಸಿದೆ.

ಈ ಹೋರಾಟದಿಂದಾಗಿ ಜುಲೈ 19ರಂದು ಮತ್ತೆ ಸಭೆ ಸೇರಿದ ವಿವಿ ಕಾರ್ಯಕಾರಿ ಸಮಿತಿ ಪ್ರವೇಶಕ್ಕೆ ಪರೀಕ್ಷೆ ನಡೆಸಲು, ಇದಕ್ಕೆ 50% ಹಾಗೂ 12ನೇ ತರಗತಿಯ ಮಾರ್ಕುಗಳಿಗೆ 50% ಒತ್ತು ನೀಡಲು ನಿರ್ಧರಿಸಿದೆ. ಇದು ವಿದ್ಯಾರ್ಥಿಗಳ ಹೋರಾಟಕ್ಕೆ ಸಂದ ವಿಜಯವಾಗಿತ್ತು. ಆದರೆ ಇದರಿಂದ ಕುಪಿತರಾದ ಉಪಕುಲಪತಿ ರಾಜೀನಾಮೆ ಕೊಡುವುದಾಗಿ ಹೇಳಿದ್ದಾರಂತೆ.

ಜುಲೈ 24: ಪಶ್ಚಿಮ ಬಂಗಾಲ ಮತ್ತು ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಹತ್ಯೆಯ ವಿರುದ್ಧ ಎಡಪಕ್ಷಗಳ ರಾಷ್ಟ್ರೀಯ ಪ್ರತಿಭಟನೆ

ಪಶ್ಚಿಮ ಬಂಗಾಲ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಹಾಡಹಗಲೇ ಪ್ರಜಾಪ್ರಭುತ್ವದ ಹತ್ಯೆ ನಡೆಯುತ್ತಿದೆ. ಮಾನವ ಹಕ್ಕುಗಳು ಮತ್ತು ರಾಜಕೀಯ ಸ್ವಾತಂತ್ರ್ಯದ ಮೇಲೆ ತೀವ್ರ ಒತ್ತಡಗಳು ಬೀಳುತ್ತಿವೆ. ಇದು ದೇಶದೆಲ್ಲೆಡೆಗಳಲ್ಲೂ ಹೆಚು ಹೆಚ್ಚಾಗಿ ಕಾಣಲಾರಂಭಿಸಿದೆ. ಉದಾಹರಣೆಗೆ, ದಲಿತರ ಪ್ರತಿಭಟನೆಗಳ ರಾಕ್ಷಸೀ ದಮನ, ಹಾಗೂ ಮಾನವ ಹಕ್ಕುಗಳ ಕಾರ್ಯಕರ್ತರ ವಿರುದ್ಧ ಕರಾಳ ಕಾಯ್ದೆಗಳ ಬಳಕೆ. ಆದರೆ, ಇದು ದೇಶದಲ್ಲಿ ಎಡಶಕ್ತಿಗಳ ಶಕ್ತಿಯುತ ನೆಲೆಗಳಾದ ಪಶ್ಚಿಮ ಬಂಗಾಲ ಮತ್ತು ತ್ರಿಪುರಾದಲ್ಲಿ ತೀಕ್ಷ್ಣ ರೀತಿಯಲ್ಲಿ ಎದ್ದು ಕಾಣುತ್ತಿದೆ. ಹಿಂಸಾಚಾರ ಮತ್ತು ಭಯೋತ್ಪಾದನೆಯ ರಾಜಕೀಯವನ್ನು ತ್ರಿಪುರಾದ ಬಿಜೆಪಿ–ಐಪಿಎಫ್‌ಟಿ ಸರಕಾರ ಮತ್ತು ಪಶ್ಚಿಮ ಬಂಗಾಲದ ಟಿಎಂಸಿ ಸರಕಾರ ಮುಂದುವರೆಸುತ್ತಿವೆ.

ಇದರ ವಿರುದ್ಧ ಜುಲೈ 24ರಂದು ರಾಷ್ಟ್ರೀಯ ಪ್ರತಿಭಟನೆ ನಡೆಸಲು ಎಡಪಕ್ಷಗಳು ನಿರ್ಧರಿಸಿವೆ.


ತ್ರಿಪುರಾದಲ್ಲಿ ವಿಧಾನಸಭಾ ಚುನಾವಣೆಗಳ ನಂತರ ನಾಲ್ವರು ಸಂಗಾತಿಗಳ ಕೊಲೆಯಾಗಿದೆ, 100 ಮಹಿಳೆಯರೂ ಸೇರಿದಂತೆ 1000 ಎಡಪಕ್ಷಗಳ ಕಾರ್ಯಕರ್ತರು ಗಾಯಗೊಂಡಿದ್ದಾರೆ. ಸುಮಾರು 750 ಸಿಪಿಐ(ಎಂ) ಮತ್ತು ಎಡಪಕ್ಷಗಳ ಕಚೇರಿಗಳನ್ನು ಸುಟ್ಟು ಹಾಕಲಾಗಿದೆ, ದಾಳಿ ಮಾಡಲಾಗಿದೆ ಅಥವ ವಶಪಡಿಸಿಕೊಳ್ಳಲಾಗಿದೆ. ಸಾಮೂಹಿಕ ಸಂಘಟನೆಗಳ ಸರಿಸುಮಾರು 200 ಕಚೇರಿಗಳ ಮೇಲೆ ದಾಳಿಗಳು ನಡೆದಿವೆ ಮತ್ತು ಸುಮಾರು 150 ಕಚೇರಿಗಳನ್ನು ಬಲವಂತದಿಂದ ಆಕ್ರಮಿಸಿಕೊಳ್ಳಲಾಗಿದೆ. ಎಡ ಪಕ್ಷಗಳ ಹಿತೈಷಿಗಳ 2100 ಮನೆಗಳಿಗೆ ನುಗ್ಗಿ ಲೂಟಿ ಮಾಡಲಾಗಿದೆ. ಪಕ್ಷದ ಸದಸ್ಯರ ಅಂಗಡಿಗಳು, ಕೋಳಿಸಾಕಣೆ/ ಮೀನುಗಾರಿಕೆಯಂತಹ ಇತರ ಚಟುವಟಿಕೆಗಳ ಸ್ಥಳಗಳನ್ನೂ ಲೂಟಿ ಮಾಡಲಾಗಿದೆ. ರಬ್ಬರ್ ತೋಟಗಳನ್ನು ಸುಟ್ಟು ಹಾಕಲಾಗಿದೆ. ಇಂತಹ ಅವ್ಯಾಹತ ದಾಳಿಗಳಿಂದಾಗಿ ಸುಮಾರು 500 ಸಂಗಾತಿಗಳು ತಮ್ಮ ಮನೆಗಳನ್ನು ಬಿಟ್ಟು ಬಂದು ಸದ್ಯಕ್ಕೆ ಪಕ್ಷದ ವಿವಿಧ ಕಚೇರಿಗಳಲ್ಲಿ ತಾತ್ಕಾಲಿಕ ಕ್ಯಾಂಪುಗಳಲ್ಲಿ ಆಶ್ರಯ ಪಡೆದಿದ್ದಾರೆ.

ಎಡಪಕ್ಷಗಳ ಕಾರ್ಯಕರ್ತರ ಮೇಲೆ ದೈಹಿಕವಾಗಿ ಗುರಿಯಿಡುವುದಲ್ಲದೆ, ಎಡಪಕ್ಷಗಳು ನಡೆಸುವ

ಪುಟ 7 ನೋಡಿ

ಮಾತೆಂದರೆ ಇದು

ಭಾರತದಲ್ಲಿ ಭಕ್ತಿ ಮತ್ತು
ನಾಯಕರ ಆರಾಧನೆ
ಮತ್ತು ವ್ಯಕ್ತಿಕೇಂದ್ರಿತವಾದ
ಪೂಜೆಗಳು ಸರ್ವೇ ಸಾಮಾನ್ಯ.
ಈ ವ್ಯವಸ್ಥೆ
ರಾಜಕೀಯದಲ್ಲೂ
ಪ್ರಭಾವವನ್ನು
ಬೀರುತ್ತದೆ.
ಧಾರ್ಮಿಕವಾಗಿ
ಭಕ್ತಿಯು
ಮುಕ್ತಿಯ
ಮಾರ್ಗವನ್ನು
ತೋರಿದರೆ ರಾಜಕೀಯದಲ್ಲಿ
ವ್ಯಕ್ತಿ ಆರಾಧನೆ ಪ್ರಜಾಪ್ರಭುತ್ವದ
ಅಧಃಪತನ ಮತ್ತು
ಸರ್ವಾಧಿಕಾರಕ್ಕೆ
ದಾರಿಯಾಗುತ್ತದೆ.



–ಡಾ.ಬಿ.ಆರ್. ಅಂಬೇಡ್ಕರ್

ಜುಲೈ10: 22 ರಾಜ್ಯಗಳ ಲಕ್ಷಾಂತರ ಅಂಗನವಾಡಿ ಕಾರ್ಯಕರ್ತೆಯರಿಂದ 'ಅಖಿಲ ಭಾರತ ಬೇಡಿಕೆ ದಿನಾಚರಣೆ'

22 ರಾಜ್ಯಗಳ ಲಕ್ಷಾಂತರ ಅಂಗನವಾಡಿ ಕಾರ್ಯಕರ್ತೆಯರು ಜುಲೈ 10ರಂದು ಕೇಂದ್ರ ಮಂತ್ರಿಗಳ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಿ 'ಅಖಿಲ ಭಾರತ ಬೇಡಿಕೆ ದಿನಾಚರಣೆ' ನಡೆಸಿದ್ದಾರೆ. ಅಖಿಲ ಭಾರತ ಅಂಗನವಾಡಿ ನೌಕರರು ಮತ್ತು ಸಹಾಯಕಿಯರ ಒಕ್ಕೂಟದ ಕರೆಯ ಮೇರೆಗೆ ಈ ಅಖಿಲಭಾರತ ಪ್ರತಿಭಟನೆ ನಡೆದಿದೆ. ದಿಲ್ಲಿಯಲ್ಲಿ ಜುಲೈ 20ರಂದು ಈ ಪ್ರತಿಭಟನೆ ನಡೆಯಲಿದೆ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎ.ಆರ್.ಸಿಂಧು ತಿಳಿಸಿದ್ದಾರೆ.

ಅಂಗನವಾಡಿ ನೌಕರರ ವೇತನಗಳನ್ನು ಹೆಚ್ಚಿಸುವ ಆಶ್ವಾಸನೆ ನೀಡಿದ್ದ ಬಿಜೆಪಿ, ಅಧಿಕಾರಕ್ಕೆ ಬಂದ ನಂತರ ಈ ಆಶ್ವಾಸನೆಯನ್ನು ಈಡೇರಿಸಿಲ್ಲ ಮಾತ್ರವಲ್ಲ, ಐಸಿಡಿಎಸ್‌ಗೆ ಹಣನೀಡಿಕೆಯನ್ನು ಕಡಿತ ಮಾಡಿರುವುದನ್ನು, ಪೂರಕ ಪೋಷಣಾಂಶಗಳ ಬದಲು ನೇರ ವರ್ಗಾವಣೆ ತರುತ್ತಿರುವುದನ್ನು ಮತ್ತು ಅಂಗನವಾಡಿಗಳನ್ನು ಮುಚ್ಚುವ ಅಥವ ಕಾರ್ಪೊರೇಟ್ ಎನ್‌ಜಿಒಗಳಿಗೆ ಕೊಡುವ ಯೋಚನೆ ಮಾಡುತ್ತಿರುವುದನ್ನು ಪ್ರತಿಭಟಿಸಿ ಈ ಲಕ್ಷಾಂತರ ಕಾರ್ಯಕರ್ತೆಯರು ಸುರಿವ ಮಳೆಯನ್ನೂ ಲೆಕ್ಕಿಸದೆ ಪ್ರತಿಭಟನೆ ನಡೆಸಿದ್ದಾರೆ.

ಎಐಕೆಎಸ್ ಮತ್ತು ಸಿಐಟಿಯು ಆಗಸ್ಟ್ 9ರಂದು ನಡೆಸಲಿರುವ ಜೈಲ್ ಭರೋ ಕಾರ್ಯಾಚರಣೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಲಿದ್ದಾರೆ. ನಂತರ ಆಗಸ್ಟ್14ರ ರಾತ್ರಿ ಸಿಐಟಿಯು ಕರೆ ನೀಡಿರುವ ಸಾಮೂಹಿಕ ಜಾಗರಣೆಯಲ್ಲಿಯೂ ಅಂಗನವಾಡಿ ಕಾರ್ಯಕರ್ತೆಯರು "ಅಪೌಷ್ಟಿಕತೆಯಿಂದ, ಅನಕ್ಷರತೆಯಿಂದ ಮತ್ತು ಅನಾರೋಗ್ಯದಿಂದ ಸ್ವಾತಂತ್ರ್ಯ" ಎಂಬ ಘೋಷಣೆಯೊಂದಿಗೆ ಭಾಗವಹಿಸಲಿದ್ದಾರೆ ಎಂದು ಎ.ಆರ್ ಸಿಂಧು ಹೇಳಿದ್ದಾರೆ.

ಸಪ್ಟಂಬರ್ 5 ರಂದು ದಿಲ್ಲಿಯಲ್ಲಿ ಕಾರ್ಮಿಕ–ರೈತ ಸಂಘರ್ಷ ರ‍್ಯಾಲಿಯಲ್ಲಿ 50 ಸಾವಿರ ಅಂಗನವಾಡಿ ಕಾರ್ಯಕತೇಯರು ಭಾಗವಹಿಸಲಿದ್ದಾರೆ ಎಂದೂ ಅವರು ಹೇಳಿದ್ದಾರೆ.



ಸಂಪಾದಕೀಯ

ಪೌರ ಕಾರ್ಮಿಕರ ಆತ್ಮಹತ್ಯೆ: 'ಸರಣಿ ಹತ್ಯೆ'ಯಾಗದಿರಲಿ


ಆರು ತಿಂಗಳುಗಳಿಂದ ಸಂಬಳ ಸಿಗದಿದ್ದರಿಂದ ಹತಾಶೆಯಿಂದ ಬೆಂಗಳೂರಿನ ಪೌರ ಕಾರ್ಮಿಕ 38 ವರ್ಷ ವಯಸ್ಸಿನ ಎಸ್. ಸುಬ್ರಮಣಿ ಜುಲೈ 8ರಂದು ಆತ್ಮಹತ್ಯೆಗೆ ಶರಣಾಗಿದ್ದಾರೆ. 'ಆರು ತಿಂಗಳುಗಳಿಂದ ಸಂಬಳ ಕೊಟ್ಟಿರಲಿಲ್ಲ. ಆ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರನ್ನು ವಿಚಾರಿಸಿದರೂ ಪ್ರಯೋಜನವಾಗಿರಲಿಲ್ಲ. ಅದರಿಂದ ನೊಂದು ಸುಬ್ರಮಣಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಆತನ ಪತ್ನಿ ಕವಿತಾ, ವೈಯಾಲಿಕಾವಲ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ವಿಷಯ ತಿಳಿಯುತ್ತಲೇ ಆಸ್ಪತ್ರೆಯ ಸುತ್ತ ಜಮಾಯಿಸಿದ್ದ ಪೌರ ಕಾರ್ಮಿಕರು ಪ್ರತಿಭಟನೆ ಮಾಡಿದ್ದಾರೆ. ಬಿಬಿಎಂಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು, 'ಸುಬ್ರಮಣಿಯವರ ಸಾವಿಗೆ ಬಿಬಿಎಂಪಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರೇ ಕಾರಣ' ಎಂದು ಆಪಾದಿಸಿದ್ದಾರೆ. ಆಗ ಆಸ್ಪತ್ರೆಗೆ ಬಂದ ಮೇಯರ್ ಸಂಪತ್‌ರಾಜ್, ಸುಬ್ರಮಣಿ ಅವರ ಕುಟುಂಬಕ್ಕೆ ಸಾಂತ್ವನ ಹೇಳಿ, ಸ್ಥಳದಲ್ಲೇ ರೂ. 10 ಲಕ್ಷ ಪರಿಹಾರದ ಚೆಕ್ ವಿತರಿಸಿದರು. ಚೆಕ್ ವಿತರಿಸಿ ಆಕ್ರೋಶ ಸ್ಫೋಟಗೊಳ್ಳುವ ತಕ್ಷಣದ ಬಿಕ್ಕಟ್ಟು ನಿವಾರಿಸಿ ಕೈತೊಳೆದುಕೊಂಡಿದ್ದಾರೆ.

ಆದರೆ ಈ ಸಂಕಟ ಮತ್ತು ಹತಾಶೆ ಸುಬ್ರಮಣಿಯವರದ್ದು ಮಾತ್ರವಲ್ಲ. ಸಾವಿರಾರು ಪೌರ ಕಾರ್ಮಿಕರದ್ದು. ಸಾವಿರಾರು ಕಾರ್ಮಿಕರು ಫೆಬ್ರುವರಿಯಿಂದ ಈ ವರೆಗೆ ವೇತನವಿಲ್ಲದೆ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಕಳೆದ ತಿಂಗಳು ಪೌರ ಕಾರ್ಮಿಕರು ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ, ಮೂರು ದಿನಗಳಲ್ಲಿ ಬಾಕಿ ವೇತನ ನೀಡುವುದಾಗಿ ಬಿಬಿಎಂಪಿ ಆಯುಕ್ತರು ಭರವಸೆ ನೀಡಿದ್ದರು. ಅವರೂ ತಮ್ಮ ಮಾತು ಉಳಿಸಿಕೊಂಡಿಲ್ಲ. ಈ ಸಮಸ್ಯೆಯ ಮೂಲ ಇರುವುದು ಜೂನ್ 2017ರಲ್ಲಿ ಗುತ್ತಿಗೆದಾರರ ಅಡಿಯಲ್ಲಿ ಕೆಲಸ ಮಾಡುತ್ತಿದ್ದ ಪೌರ ಕಾರ್ಮಿಕರಿಗೆ ನೇರವಾಗಿ ವೇತನ ಪಾವತಿ ಮಾಡುವ ಸ್ವಾಗತಾರ್ಹ ಉತ್ತಮ ನಿರ್ಣಯವನ್ನು ಒಂದು ವರ್ಷದ ನಂತರವೂ ಪ್ರಾಮಾಣಿಕವಾಗಿ ಜಾರಿ ಮಾಡದಿರುವುದು. ಇದು ಬಿ.ಬಿ.ಎಂ.ಪಿ. ಆಡಳಿತಕ್ಕೆ ಮತ್ತು ರಾಜ್ಯ ಸರಕಾರಕ್ಕೆ ಅತ್ಯಂತ ನಾಚಿಕೆಗೇಡಿನ ಸನ್ನಿವೇಶ. ಇದಕ್ಕೆ ಕಾರಣ ಗುತ್ತಿಗೆದಾರರ ಅಡಿ ಕೆಲಸ ಮಾಡುತ್ತಿದ್ದ ಪೌರ ಕಾರ್ಮಿಕರ ನಿಜವಾದ ಸಂಖ್ಯೆ ಬಗ್ಗೆ ಬಿ.ಬಿ.ಎಂ.ಪಿ ಹಾಗೂ ಗುತ್ತಿಗೆದಾರರ ನಡುವೆ ವಿವಾದ ಮತ್ತು ವಾರ್ಡ್ ಮಟ್ಟದಲ್ಲಿ 700 ಜನಸಂಖ್ಯೆಗೆ ಒಂದರಂತೆ ಪೌರಕಾರ್ಮಿಕರ ಸಂಖ್ಯೆಯನ್ನು ಮಿತಿಗೊಳಿಸಲು ಸರಕಾರ ನಿರ್ಧರಿಸಿದ್ದು.

ಗುತ್ತಿಗೆದಾರರು ಮೇ 2017ರಲ್ಲಿ ಸಲ್ಲಿಸಿದ್ದ 32 ಸಾವಿರ ಪೌರ ಕಾರ್ಮಿಕರ ಪಟ್ಟಿಯನ್ನು ಬಿ.ಬಿ.ಎಂ.ಪಿ. ನೇರ ವೇತನ ಪಾವತಿಗೆ ಒಪ್ಪಿಕೊಳ್ಳಲಿಲ್ಲ. ಸರಕಾರದ ನಿರ್ದೇಶನದ ಪ್ರಕಾರ ಬೆಂಗಳೂರಿನ ಜನಸಂಖ್ಯೆಗೆ ಕೇವಲ 18 ಸಾವಿರ ಪೌರ ಕಾರ್ಮಿಕರು ಸಾಕು. ಗುತ್ತಿಗೆದಾರರು ಬೋಗಸ್ ಪಟ್ಟಿಯನ್ನು ಸಲ್ಲಿಸುತ್ತಿದ್ದಾರೆ ಎಂದು ಬಿ.ಬಿ.ಎಂ.ಪಿ. ಆಪಾದಿಸಿತು. ಆದ್ದರಿಂದ ನೇರ ವೇತನ ಪಾವತಿ ಮಾಡುವ ಮೊದಲು ಇರುವ ಕಾರ್ಮಿಕರ ಬಯೋಮೆಟ್ರಿಕ್ ರಿಜಿಸ್ಟ್ರೇಶನ್ ಮಾಡಲೂ, ಒಟ್ಟು ಸಂಖ್ಯೆಯನ್ನು 18 ಸಾವಿರಕ್ಕೆ ಮಿತಿಗೊಳಿಸಲು ನಿರ್ಧರಿಸಿತು. ಆದರೆ ಗುತ್ತಿಗೆದಾರರು ಹೊಸ ಕಾರ್ಮಿಕರನ್ನು ಸೇರಿಸಿ ಈ ಪ್ರಕ್ರಿಯೆಯನ್ನು ಬುಡಮೇಲು ಮಾಡಲು ಪ್ರಯತ್ನಿಸಿದರು. ಎರಡು ವರ್ಷಗಳಿಗಿಂತ ಹೆಚ್ಚು ಕೆಲಸ ಮಾಡಿದ ಕಾರ್ಮಿಕರನ್ನು ಮಾತ್ರ ತೆಗೆದುಕೊಳ್ಳುವ ನಿರ್ಣಯ ಮಾಡಿದ ಬಿ.ಬಿ.ಎಂ.ಪಿ. ತನ್ನ ಎಲ್ಲಾ ಮಾನದಂಡಗಳನ್ನು ಬಳಸಿ ಕಾರ್ಮಿಕರ ಪಟ್ಟಿ ಅಂತಿಮಗೊಳಿಸುವವರೆಗೆ ನೇರ ವೇತನ ಪಾವತಿ ಜಾರಿ ಮಾಡದಿರಲು ಫೆಬ್ರುವರಿಯಲ್ಲಿ ನಿರ್ಧರಿಸಿತು. ಆ ಪ್ರಕ್ರಿಯೆ ಇನ್ನೂ ಪೂರ್ಣವಾಗಿಲ್ಲ ಎಂದು ಬಿ.ಬಿ.ಎಂ.ಪಿ. ಅಧಿಕಾರಿಗಳು ಹೇಳುತ್ತಾರೆ. ಪೌರಕಾರ್ಮಿಕರ ಯೂನಿಯನ್ 700 ಜನಸಂಖ್ಯೆಗೆ ಒಬ್ಬರಂತೆ ಮಿತಿ ಹೇರುವ ಸರಕಾರದ ನಿರ್ದೇಶನವನ್ನೂ ಪ್ರಶ್ನಿಸಿದೆ. 1976ರ ಐಪಿಡಿ ಸಾಲಪ್ಪ ಸಮಿತಿಯ ಶಿಫಾರಸು ಪ್ರಕಾರ 500 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕ ಇರಬೇಕು ಎಂದು ಒತ್ತಾಯಿಸಿದೆ.

ಗುತ್ತಿಗೆದಾರರು ಕೊಟ್ಟಿರುವ ಬೋಗಸ್ ಕಾರ್ಮಿಕರ ಹೆಸರುಗಳನ್ನು ಗುರುತಿಸಿ ಪಟ್ಟಿ ಅಂತಿಮಗೊಳಿಸಲು ತಿಂಗಳುಗಟ್ಟಲೆ ಬೇಕಾಗಿಲ್ಲ. ಈ ಸಮಸ್ಯೆಯನ್ನು ಚುನಾಯಿತ ಪ್ರತಿನಿಧಿಗಳು, ಬಿ.ಬಿ.ಎಂ.ಪಿ. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಜಂಟಿಯಾಗಿ ಬೇಕೆಂತಲೇ ಸೃಷ್ಟಿಸಿದ್ದಾರೆ. ನೇರವಾಗಿ ಪೌರ ಕಾರ್ಮಿಕರಿಗೆ ವೇತನ ಕೊಡುವುದು ಈ ಮೂವರಿಗೂ ಬೇಕಾಗಿಲ್ಲ. ಪೌರ ಕಾರ್ಮಿಕರಿಗೆ ಪೂರ್ಣ ವೇತನ ಕೊಡದೆ ಕಮಿಶನ್ ಮುರಿದುಕೊಳ್ಳುವುದರಲ್ಲಿ ಮತ್ತು ಬೋಗಸ್ ಕಾರ್ಮಿಕರ ವೇತನ ಹೊಡೆಯುವುದರಲ್ಲಿ ಈ ಮೂವರಿಗೂ 'ಪಾಲು' ಇದೆ. ಅದಕ್ಕಾಗಿ ಈ ಬಿಕ್ಕಟ್ಟು ಸೃಷ್ಟಿಸಿ, ಗುತ್ತಿಗೆದಾರರ ಮೂಲಕ ವೇತನ ಕೊಡುವ ವ್ಯವಸ್ಥೆ ಮುಂದುವರೆಯುವಂತೆ ಮಾಡಲು ಈ ಹುನ್ನಾರ ಎಂದು ಪೌರ ಕಾರ್ಮಿಕರು ಮತ್ತು ಅವರ ಯೂನಿಯನ್ ಆಪಾದಿಸುತ್ತಿವೆ. ಒಟ್ಟು ಘಟನಾವಳಿ ನೋಡಿದರೆ ಅದು ನಿಜವೆನ್ನಿಸುತ್ತದೆ.

ಸಾಮಾನ್ಯವಾಗಿ ಆತ್ಮಹತ್ಯೆ ವ್ಯಕ್ತಿ–ವಿಶೇಷ ಪ್ರಕರಣವೆಂದು ಪರಿಗಣಿಸಲಾಗುತ್ತದೆ. ಆದರೆ ಮೇಲೆ ಹೇಳಿದ ಸಮಸ್ಯೆಯ ಮೂಲಕಾರಣಗಳನ್ನು ನೋಡಿದರೆ ಇದೊಂದು ಸಾಮೂಹಿಕ ಸಮಸ್ಯೆ. ಆದ್ದರಿಂದ ಇದು ಇನ್ನೊಂದು 'ಸರಣಿ ಹತ್ಯೆ'ಯತ್ತ ಹೋಗುತ್ತಿರುವ ಲಕ್ಷಣಗಳು ಕಾಣುತ್ತಿವೆ. ಚುನಾಯಿತ ಪ್ರತಿನಿಧಿಗಳು, ಬಿ.ಬಿ.ಎಂ.ಪಿ. ಅಧಿಕಾರಿಗಳು ಮತ್ತು ಗುತ್ತಿಗೆದಾರರು ತಮ್ಮ ಹಿತಾಸಕ್ತಿ ರಕ್ಷಣೆಗಾಗಿ ಈ 'ಸರಣಿ ಹತ್ಯೆ'ಯಲ್ಲಿ ತೊಡಗಿದ್ದಾರೆ.



ಗ್ರಾಮೀಣ ಶ್ರೀಮಂತರು ಮತ್ತು ದೇಶೀ–ವಿದೇಶೀ ಕಾರ್ಪೊರೇಟ್ ಹಿತಾಸಕ್ತಿಗಳ ರಕ್ಷಣೆಗೆ ಬದ್ಧವಾದ ಸರಕಾರದ ನವ–ಉದಾರವಾದಿ ಕೃಷಿ ನೀತಿಗಳು ರೈತರನ್ನು ಆತ್ಮಹತ್ಯೆಗಳತ್ತ ತಳ್ಳಿ 'ಸರಣಿ ಹತ್ಯೆ'ಗೆ ಈಗಾಗಲೇ ಕಾರಣವಾಗಿವೆ. ಕಾರ್ಮಿಕರ ಇದ್ದ ಬದ್ದ ಹಕ್ಕುಗಳನ್ನು ಕಸಿದುಕೊಳ್ಳುವ, ಸಾಮಾಜಿಕ ಸೇವೆಗಳನ್ನು ಖಾಸಗೀಕರಿಸುವ ವ್ಯಾಪಾರೀಕರಿಸುವ ನವ–ಉದಾರವಾದಿ ನೀತಿಗಳೇ ಪೌರ ಕಾರ್ಮಿಕರ ಈ 'ಸರಣಿ ಹತ್ಯೆ'ಗೆ ಪ್ರಯತ್ನದ ಹಿಂದೆ ಇದೆ.

ಪೌರ ಕಾರ್ಮಿಕರ ಈ 'ಸರಣಿ ಹತ್ಯೆ'ಗೆ ಪ್ರಯತ್ನದ ವಿರುದ್ಧ ಪೌರ ಕಾರ್ಮಿಕರು ಮಾತ್ರವಲ್ಲ, ಇಡೀ ಕಾರ್ಮಿಕ ವರ್ಗ, ಎಲ್ಲಾ ದುಡಿಯುವ ಜನತೆ ಮತ್ತು ಪ್ರಜ್ಞಾವಂತ ನಾಗರಿಕರು ದನಿಯೆತ್ತಬೇಕಾಗಿದೆ. ●

ಫೇಸ್ ಬುಕ್ಕಾಣ



ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರದ ಬಗೆಗಿನ ಕುತೂಹಲ ಕಾತರ ಇಷ್ಟು ಬೇಗ ಕ್ಷೀಣಿಸುತ್ತೆ ಅನ್ಕೊಂಡಿರಲಿಲ್ಲ..
ಇದೀಗ ಒಂದು ಸಾಲಿನ ಸುದ್ದಿಯ ಮಟ್ಟಿಗೆ ಬಂದಿದೆ.
ವೀರಣ್ಣ ಮಡಿವಾಳ ಮತ್ತು ಆರಿಫ್ ರಾಜಾ ರಿಗೆ ಬಂದಾಗ ಇದ್ದ ಸಂಭ್ರಮ ಬರುಬರುತ್ತಾ ಇಳಿಮುಖವಾಯಿತು. ಈಚೆಗೆ ಒಂದೇ ಪ್ರಕಾಶನದ* ಮೂವರಿಗೆ ಈ ಪುರಸ್ಕಾರ ಬರುತ್ತೆ ಅನ್ನೋದನ್ನು ಹೇಗೆ ಗ್ರಹಿಸುವುದು..?
ಈ ಕೃತಿಗಳು ಅನರ್ಹ ಎಂದು ಹೇಳುತ್ತಿಲ್ಲ, ಆದರೆ ಇದಕ್ಕಿಂತ ಗಟ್ಟಿಯಾದ ಅರ್ಹರು ಹೊರಗುಳಿಯುವುದು ಹೇಗೆ? ಎನ್ನುವ ಪ್ರಶ್ನೆ ಎದುರಾಗುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ಹುಡುಕಬೇಕಿದೆ.
ಕಳೆದಬಾರಿ ಹನಮಂತ ಹಾಲಿಗೇರಿ ಎತ್ತಿದ ಇಂಥಹದ್ದೆ ಪ್ರಶ್ನೆ ವಿವಾದ ಹುಟ್ಟಿಸಿತ್ತು.
ಹೊಸ ತಲೆಮಾರು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಂದ, ಪುಟ್ಟ ಪುಟ್ಟ ಸಮುದಾಯಗಳಿಂದ ಬಂದವರು ತೀರಾ ಭಿನ್ನ ಸಂವೇದನೆಗಳಿಂದ ಬರೆಯುತ್ತಾರೆ. ಅವರ ಕೃತಿಗಳನ್ನು ಎಷ್ಟೋ ಬಾರಿ ಸ್ಥಳೀಯ ಪ್ರಕಾಶನಗಳು ಮುದ್ರಿಸುತ್ತವೆ. ಅಥವಾ ಪ್ರಕಾಶನ ಸಿಗದೆ ಅವರೇ ಪ್ರಕಟಿಸಿಕೊಳ್ಳುತ್ತಾರೆ. ಕೆಲವೊಮ್ಮೆ ರಾಜ್ಯಮಟ್ಟದ ಪ್ರಕಾಶಕರೂ ಪ್ರಕಟಿಸಿದ್ದಿದೆ. ಇಂತಹ ಕೃತಿಗಳ ಬಗೆಗೆ ಪತ್ರಿಕೆಗಳಲ್ಲಿ ಸಣ್ಣ ವಿಮರ್ಶೆ ಯೂ ಬರದಿರುವ ಸಾಧ್ಯತೆಯಿದೆ. ಹೀಗಿರುವಾಗ ಕೇಂದ್ರ ಸಾಹಿತ್ಯ ಅಕಾಡೆಮಿಯ ಕದ ತಟ್ಟುವುದು ದೂರವೆ ಉಳಿಯಿತು.
ಆದರೆ ಈಚಿನ ವರ್ಷಗಳ ಆಯ್ಕೆಗಳನ್ನು ಗಮನಿಸಿದರೆ, ನಿಚ್ಚಳವಾಗಿ ಯುವ ಪುರಸ್ಕಾರ ಕೆಲವು ಪ್ರಭಾವಗಳಲ್ಲಿ ದ್ವೀಪದಂತೆ ಕೇಂದ್ರೀಕೃತವಾಗುತ್ತಿದೆಯಾ ಎನ್ನುವ ಆತಂಕ ನನ್ನದು.
ಆಯಾ ವರ್ಷ ಪ್ರಶಸ್ತಿಗೆ ಆಯ್ಕೆಯಾದ ಹೆಸರಿನ ಜತೆ, ಆ ವರ್ಷ ಪ್ರಶಸ್ತಿಗೆ ಅರ್ಜಿ ಸಲ್ಲಿಸಿದವರ, ಮತ್ತು ಅಂತಿಮ ಪಟ್ಟಿಯಲ್ಲಿ ಆಯ್ಕೆಯಾದವರ ಕೃತಿ ಅಥವಾ ಹೆಸರುಗಳನ್ನು ಬಹಿರಂಗ ಪಡಿಸಿದರೆ, ಆಯಾ ವರ್ಷದ ಆಯ್ಕೆಯ ಪಾರದರ್ಶಕತೆ ಸಾರ್ವಜನಿಕವಾಗಿಯೂ ತಿಳಿಯುತ್ತೆ ಅನ್ಸುತ್ತೆ...
ಇದು ಯಾವುದೋ ಒಂದು ಪ್ರಕಾಶನ, ಒಬ್ಬಿಬ್ಬರು ಪುರಸ್ಕೃತರ ನೆಲೆಯಲ್ಲಿ ನಡೆಯಬೇಕಾದ ಚರ್ಚೆಯಲ್ಲ, ಬದಲಾಗಿ ಇಡೀ ಪ್ರಕ್ರಿಯೆಯ ಹಿಂದಿನ ಲಾಬಿಯ ಬಗ್ಗೆ ಚರ್ಚಿಸಬೇಕಾಗಿದೆ. ಹಾಗಾಗಿ ಯಾರನ್ನೂ ಗುರಿಮಾಡಿ ಬರೆದದ್ದಲ್ಲ. ಹೀಗೂ ಇರುವ ಬಗೆಗೆ ಗಮನಸೆಳೆಯುವ ಪ್ರಯತ್ನವಷ್ಟೆ.
(ವಿ.ಸೂ:ಸಿಗದಿರುವ ಹಣ್ಣು ಹುಳಿ ಎಂದುಕೊಳ್ಳುವುದು ಬೇಡ..ನಾನು ಈ ಪ್ರಶಸ್ತಿ ವ್ಯಾಪ್ತಿಯಿಂದ ಹೊರಬಂದು 5 ವರ್ಷವಾಗಿದೆ)
– ಅರುಣ್ ಜೋಳದಕೂಡ್ಲಿಗಿ

* ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ "ಛಂದ ಪುಸ್ತಕ" ಪ್ರಕಟಿಸಿದ ಮೂರು ಪುಸ್ತಕಗಳಿಗೆ – 2015 ರಲ್ಲಿ ಮೌನೇಶ ಬಡಿಗೇರ್ ಅವರ "ಮಾಯಾ ಕೋಲಾಹಲ", 2017ರಲ್ಲಿ ಶಾಂತಿ ಅಪ್ಪಣ್ಣ ಅವರ "ಮನಸ್ಸು ಅಭಿಸಾರಿಕೆ" ಮತ್ತು 2018ರಲ್ಲಿ ಪದ್ಮನಾಭ ಭಟ್ ಅವರ "ಕೇಪಿನ ಡಬ್ಬಿ" ಗೆ ಬಂದಿರುವುದು ವಿವಾದಕ್ಕೆ ಕಾರಣವಾಗಿದೆ (ಸಂ.)

ಬಿಎಸ್ಸೆನ್ನೆಲ್ ಕಚೇರಿ ಎದುರು ಸಿಐಟಿಯು ಪ್ರತಿಭಟನೆ:

ದ.ಕ.ಜಿಲ್ಲೆಯ ಬೇರೆ ಬೇರೆ ದೂರವಾಣಿ ವಿನಿಮಯ ಕೇಂದ್ರಗಳಲ್ಲಿ ದುಡಿಯುತ್ತಿರುವ 90 ಮಂದಿ ಗುತ್ತಿಗೆ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಿರುವ ಬಿಎಸ್ಸೆನ್ನೆಲ್ ಆಡಳಿತ ವರ್ಗದ ಕ್ರಮವನ್ನು ಖಂಡಿಸಿ ಬಿಎಸ್ಸೆನ್ನೆಲ್ ನಾನ್ ಪರ್ಮನೆಂಟ್ ವರ್ಕರ್ಸ್ ಯೂನಿಯನ್ (ಸಿಐಟಿಯು) ನೇತೃತ್ವದಲ್ಲಿ ಜುಲಾಯಿ 9 ರಂದು ಮಂಗಳೂರಿನಲ್ಲಿರುವ ಬಿಎಸ್ಸೆನ್ನೆಲ್ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ಸಂಘದ ಅಧ್ಯಕ್ಷ ಹಾಗೂ ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ವಸಂತ ಆಚಾರಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಕೆಲಸದಿಂದ ವಜಾಗೊಳಿಸಿರುವುದರಿಂದ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲಿ ಈ ಸಂಸ್ಥೆಗೆ ಉತ್ತಮ ಹೆಸರಿದ್ದು, ಇದರ ಗುತ್ತಿಗೆ ಕಾರ್ಮಿಕರು ಒಳ್ಳೆ ಸೇವೆ ನೀಡುತ್ತಿದ್ದಾರೆ. ಆದರೆ ಕೇಂದ್ರ ಸರಕಾರವು ಹೊಸ ಉದಾರೀಕರಣ ನೀತಿಯನ್ನು ಆಕ್ರಮಣಕಾರಿಯಾಗಿ ಜಾರಿ ಮಾಡುತ್ತಿರುವ ಹಿನ್ನೆಲೆಯಲ್ಲಿ ದೇಶದ ಉದ್ದಗಲಕ್ಕೂ ಖಾಯಂ ಕೆಲಸಗಳು ನಾಶವಾಗಿ ತಾತ್ಕಾಲಿಕ ಕೆಲಸಗಳು ಹೆಚ್ಚುತ್ತಿವೆ ಎಂದು ಹೇಳಿದರು.

ಕೆಲಸ ಕಳೆದುಕೊಂಡ ಕಾರ್ಮಿಕರನ್ನು ಪುನರ್ ನೇಮಕ ಮಾಡಬೇಕು. ಅನಿವಾರ್ಯವಾಗಿ ಕೈಬಿಡಬೇಕಾದ ಪರಿಸ್ಥಿತಿ ಬಂದಾಗ ಅವರಿಗೆ ಪರಿಹಾರ ನೀಡಿ ಕೆಲಸದಿಂದ ತೆಗೆಯಬೇಕು ಎಂದು ಅವರು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಕೂಡಾ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಯೂನಿಯನಿನ ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಉದಯ್ ಕುಮಾರ್, ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೋಹನ್ ಹಾಗೂ ಇತರ ಮುಖಂಡರು ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು.

ಕಾರ್ಕಳದಲ್ಲಿ ಅಕ್ಷರ ದಾಸೋಹ ನೌಕರರಿಂದ ಪ್ರತಿಭಟನೆ

ಕಾರ್ಕಳ ತಾಲೂಕಿನ ಕೆರ್ವಾಶೆ ಮೈನ್ ಹಿರಿಯ ಪ್ರಾಥಮಿಕ ಶಾಲೆಯ ಅಡುಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕಿರುವುದರ ವಿರುದ್ಧ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಉಡುಪಿ ಜಿಲ್ಲಾ ಸಮಿತಿಯ ವತಿಯಿಂದ ಕಾರ್ಕಳ ತಾಲೂಕು ಕಚೇರಿಯ ಎದುರು ಜುಲಾಯಿ 9ರಂದು ಪ್ರತಿಭಟನೆ ನಡೆಸಲಾಯಿತು.

ಕೆರ್ವಾಶೆ ಗ್ರಾಮದ ಮೈನ್ ಶಾಲೆಯಲ್ಲಿ ಅಡುಗೆ ಕೆಲಸ ಮಾಡುತ್ತಿದ್ದ ಸುನೀತಾ ಶೆಟ್ಟಿ, ಗುಲಾಬಿ ಹಾಗೂ ಸುಗಂಧಿ ಅವರನ್ನು ಜೂನ್ 12 ರಂದು ಯಾವುದೇ ಕಾರಣ ನೀಡದೆ ಕೆಲಸದಿಂದ ತೆಗೆದು ಹಾಕಲಾಗಿತ್ತು. ಸಂಘದ ಕಾರ್ಕಳ ತಾಲೂಕು ಅಧ್ಯಕ್ಷರಾಗಿರುವ ಸುನೀತಾ ಶೆಟ್ಟಿ, ಶಾಲೆಯ ಅಡುಗೆ ಸಾಮಾನುಗಳ ದುರುಪಯೋಗದ ವಿರುದ್ಧ ದನಿ ಎತ್ತಿದ್ದರು. ಇದೇ ಕಾರಣಕ್ಕೆ ಮುಖ್ಯೋಪಾಧ್ಯಾಯರು ಸೇಡಿನ ಕ್ರಮ ಕೈಗೊಂಡಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಆದುದರಿಂದ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಕೂಡಲೇ ಜಂಟಿ ಸಭೆಯನ್ನು ಕರೆದು ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಈ ಕುರಿತು ಮನವಿಯನ್ನು ಕಾರ್ಕಳ ತಾಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕರಿಗೆ ಸಲ್ಲಿಸಲಾಯಿತು.

ಸಂಘದ ಜಿಲ್ಲಾಧ್ಯಕ್ಷ ಯು.ದಾಸು ಭಂಡಾರಿ, ಕಾರ್ಯದರ್ಶಿ ಸುನಂದಾ, ಸಿಐಟಿಯು ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಕವಿರಾಜ್ ಎಸ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಿ.ಎ.ಮೊಯಿದಿನ್ ನಿಧನಕ್ಕೆ ಸಿಪಿಐ(ಎಂ) ಸಂತಾಪ



ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರೂ, ಕರ್ನಾಟಕ ರಾಜ್ಯ ಸರಕಾರದ ಸಚಿವರೂ, ದಕ್ಷಿಣ ಕನ್ನಡ ಜಿಲ್ಲೆಯಿಂದ ವಿಧಾನಸಭಾ ಸದಸ್ಯರೂ ಆಗಿ ಸಮಾಜ ಸೇವೆ ಮಾಡಿದ ಬಿ.ಎ.ಮೊಯಿದಿನ್ ಅವರು 10 ಜುಲಾಯಿ 2018ರಂದು ನಿಧನರಾಗಿದ್ದು, ದ.ಕ. ಜಿಲ್ಲೆ ಒಬ್ಬ ಹಿರಿಯ ರಾಜಕೀಯ ಮುತ್ಸದ್ದಿಯನ್ನು ಕಳೆದುಕೊಂಡಿದೆ.

ತಮ್ಮ ದೀರ್ಘ ರಾಜಕೀಯ ಜೀವನದಲ್ಲಿ ಕಾಂಗ್ರೆಸ್, ಜನತಾದಳ ಪಕ್ಷಗಳ ಮೂಲಕ ಶಾಸಕರಾಗಿ ಕಾರ್ಯನಿರ್ವಹಿಸಿದಾಗ, ನಿರ್ದಾಕ್ಷಿಣ್ಯವಾದ ಮತನಿರಪೇಕ್ಷ ನಿಲುವಿನಿಂದಾಗಿ ಕೋಮುವಾದಿಗಳ ಕೆಂಗಣ್ಣಿಗೂ ಅವರು ಗುರಿಯಾಗಿದ್ದರು. ಬಾಬ್ರಿ ಮಸೀದಿ ಧ್ವಂಸದ ಬಳಿಕದ ದ.ಕ.ಜಿಲ್ಲೆಯ ಖೇದಕಾರಕ ವಿದ್ಯಮಾನಗಳ ಸಂದರ್ಭದಲ್ಲಿ ಜಿಲ್ಲೆಯ ಜನರ ವಿವೇಕದ ಧ್ವನಿಯಾಗಿ ಗುರುತಿಸಲ್ಪಟ್ಟವರು ಅವರು. ಎಲ್ಲರನ್ನೂ ಪ್ರೀತಿಸುವ, ಯಾರೂ ದ್ವೇಷಿಸಲು ಇಚ್ಛೆ ಪಡದ ರಾಜ್ಯದ ವಿರಳ ರಾಜಕೀಯ ಸಜ್ಜನ ಮುಖಂಡರಲ್ಲಿ ಅವರು ಒಬ್ಬರಾಗಿದ್ದರು. ದ.ಕ. ಜಿಲ್ಲೆಯು ತನ್ನ ಹೆಮ್ಮೆಯ ಪುತ್ರನೊಬ್ಬನನ್ನು ಕಳೆದುಕೊಂಡಿದೆ.

ಜಗದ್ವಿಖ್ಯಾತ ಶಾಂತಿದೂತ ಬರ್ಟ್ರಾಂಡ್ ರಸಲ್ ಅವರ ಹೆಸರಲ್ಲಿ ನಡೆಯುತ್ತಿರುವ ಒಂದು ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಲ್ಲಿ ಅವರೂ ಒಬ್ಬರಾಗಿದ್ದಾರೆ. ತಮ್ಮ ಶಾಸಕತ್ವ, ಸಚಿವ ಸ್ಥಾನದ ಅವಧಿಯಲ್ಲಿ ದಕ್ಷ ಆಡಳಿತಗಾರನಾಗಿ ಜಿಲ್ಲೆಯ ಹಾಗೂ ರಾಜ್ಯದ ಜನರ ಪ್ರೀತಿಗೆ ಪಾತ್ರರಾದವರು ಬಿ.ಎ.ಮೊಯಿದಿನ್.

ರಾಜ್ಯದಲ್ಲಿ ಕಮ್ಯೂನಿಸ್ಟ್ ಚಳುವಳಿಗಾರರ ಮಿತ್ರರೂ ಆಗಿ, ಕೋಮುವಾದದ ವಿರುದ್ಧ ಅವರು ಕೈಗೂಡಿಸಿದ್ದರು. ದ.ಕ.ಜಿಲ್ಲೆಯಲ್ಲಿ ಹಿರಿಯ ಕಮ್ಯೂನಿಸ್ಟರಾದ ಬಿ.ವಿ.ಕಕ್ಕಿಲ್ಲಾಯ, ಕೆ.ಆರ್.ಶ್ರೀಯಾನ್, ಬಿ.ಮಾಧವ ಮೊದಲಾದವರ ಸಂಗಾತಿಯಾಗಿದ್ದರು. ಸಿಪಿಐ(ಎಂ) ದ.ಕ.ಜಿಲ್ಲಾ ಮುಖಂಡರಾದ ಕೆ.ಆರ್.ಶ್ರೀಯಾನ್, ವಸಂತ ಆಚಾರಿ, ಜೆ.ಬಾಲಕೃಷ್ಣ ಶೆಟ್ಟಿ ಅವರು ಬಿ.ಎ.ಮೊಯಿದಿನ್ ಅವರ ನಿಧನಕ್ಕೆ ಶೋಕ ವ್ಯಕ್ತಪಡಿಸಿದ್ದಾರೆ. ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿಯು ಅವರ ನಿಧನಕ್ಕೆ ತನ್ನ ಸಂತಾಪವನ್ನು ಸೂಚಿಸಿದೆ ಮತ್ತು ಅವರ ಕುಟುಂಬದ ಜೊತೆ ಸಹಾನುಭೂತಿಯನ್ನು ವ್ಯಕ್ತಪಡಿಸಿದೆ.

ಸ್ಕಿಲ್‌ಗೇಮ್ ಇತ್ಯಾದಿ ಜೂಜು ಕೇಂದ್ರಗಳನ್ನು ಮುಚ್ಚಲು ಡಿವೈಎಫ್.ಐ. ಒತ್ತಾಯ

ಮಂಗಳೂರು ನಗರದ ಹಲವೆಡೆ ಹಲವು ರೀತಿಯ ಗ್ಯಾಂಬ್ಲಿಂಗ್, ಜುಗಾರಿ ಅಡ್ಡೆಗಳು, ಡ್ಯಾನ್ಸ್ ಬಾರ್ ಹಾಗೂ ಮಸಾಜ್ ಪಾರ್ಲರ್‌ಗಳು ಮತ್ತೆ ಕಾರ್ಯಾಚರಿಸಲು ಆರಂಭಿಸಿವೆ. ರಿಕ್ರಿಯೇಶನ್ ಕ್ಲಬ್‌ಗಳ ಹೆಸರಿನಲ್ಲಿ ಅನುಮತಿಯನ್ನು ಪಡೆದು ಸ್ಕಿಲ್‌ಗೇಮ್, ವೀಡಿಯೋ ಗೇಮ್ ಕೇಂದ್ರಗಳು, ಜುಗಾರಿ ಅಡ್ಡೆಗಳನ್ನು ರಾಜಾರೋಷವಾಗಿ ನಡೆಸುತ್ತಿವೆ. ಇವುಗಳ ಹಾವಳಿಯಿಂದಾಗಿ ನಗರದಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗುವ ಅನೇಕ ರೀತಿಯ ಸಾಮಾಜಿಕ ಸಮಸ್ಯೆಗಳು ಉಂಟಾಗಲಿದೆ. ಕೂಲಿಕಾರರು, ಆಟೋಚಾಲಕರು ಹಾಗೂ ಸಣ್ಣ ಪುಟ್ಟ ವ್ಯಾಪಾರಿಗಳನ್ನೇ ಗುರಿಯಾಗಿಸಿ ಅವರ ದುಡಿಮೆಯ ಹಣವನ್ನು ಪೂರ್ಣವಾಗಿ ಕಿತ್ತುಕೊಳ್ಳುವ ಇಂಥ ಜೂಜುಗಳಿಂದಾಗಿ ಹಲವು ಕುಟುಂಬಗಳು ಬೀದಿಗೆ ಬಿದ್ದಿದೆ. ಮಾತ್ರವಲ್ಲದೆ ಕಾಲೇಜು ವಿದ್ಯಾರ್ಥಿಗಳೂ ಸಹ ಜೂಜಾಟದ ಚಟಕ್ಕೆ ಬಲಿಯಾಗುವ ಸಾಧ್ಯತೆ ಇದೆ.

ವಿಧಾನಸಭಾ ಚುನಾವಣಾ ಪೂರ್ವದಲ್ಲಿ ಇಂಥ ಜೂಜು ಕೇಂದ್ರಗಳನ್ನು ಮುಚ್ಚಲಾಗಿತ್ತು. ಆದರೆ ಇದೀಗ ಮತ್ತೆ ತಲೆ ಎತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಸ್ಥಳೀಯ ಪೊಲೀಸ್ ಅಧಿಕಾರಿಗಳು ಮತ್ತು ಮಾಫಿಯಾದವರ ಹೊಂದಾಣಿಕೆಯಿಂದಾಗಿ ಇಂಥ ಜೂಜು ಕೇಂದ್ರಗಳು ಮತ್ತೆ ಬೆಳೆಯಲು ಕಾರಣವಾಗಿದೆ. ಕೆಲವು ಪೊಲೀಸರು ನೇರವಾಗಿ ಶಾಮೀಲಾತಿ ಹೊಂದಿ ಮಾಫಿಯಾದವರೊಂದಿಗೆ ಕೈ ಜೋಡಿಸಿರುತ್ತಾರೆ ಎಂಬ ಆರೋಪಗಳು ಕೇಳಿ ಬರುತ್ತಿದೆ. ಇಂಥ ಅಕ್ರಮ ವ್ಯವಹಾರಗಳು ಕ್ರಿಮಿನಲ್ ಚಟುವಟಿಕೆಗಳನ್ನು ಕ್ರಿಯಾಶೀಲಗೊಳಿಸುವ ಅಪಾಯ ಇದ್ದು ನಗರದಲ್ಲಿ ಶಾಂತಿ ಸೌಹಾರ್ದತೆಗೂ ಧಕ್ಕೆ ಆಗಲಿದೆ.

ಜನತೆಯ ಬದುಕಿಗೆ ಕಂಟಕವಾಗಿರುವ ಮತ್ತು ಸಮಾಜದ ಹಿತಕ್ಕೆ ಮಾರಕವಾಗಿರುವ ಸ್ಕಿಲ್‌ಗೇಮ್, ವೀಡಿಯೋ ಗೇಮ್, ಜುಗಾರಿ ಅಡ್ಡೆಗಳು ಹಾಗೂ ಮಸಾಜ್ ಪಾರ್ಲರುಗಳ ಹೆಸರಿನಲ್ಲಿ ನಡೆಸುತ್ತಿರುವ ವೇಶ್ಯಾವಾಟಿಕೆಯಂತಹ ಅಕ್ರಮ ಚಟುವಟಿಕೆಗಳನ್ನು ಕಟ್ಟುನಿಟ್ಟಾಗಿ ನಿಗ್ರಹಿಸಬೇಕೆಂದು ಒತ್ತಾಯಿಸಿದೆ. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಹೋರಾಟಗಳನ್ನು ನಡೆಸಲಿವೆ ಎಂದು ಡಿವೈಎಫ್ಐ ಜಿಲ್ಲಾ ಸಮಿತಿ ಎಚ್ಚರಿಕೆಯನ್ನು ನೀಡಿದೆ.

ನಿಯೋಗದಲ್ಲಿ ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ಬಿ.ಕೆ. ಇಮ್ತಿಯಾಜ್, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ರಫೀಕ್ ಹರೇಕಳ, ನಿತಿನ್ ಕುತ್ತಾರ್, ಅಮಲ್ ಮುಂತಾದವರು ಉಪಸ್ಥಿತರಿದ್ದರು.

ನಾಳಿನ ಕಾರ್ಯಕ್ರಮಗಳು

*** ದಲಿತರ ವಿರುದ್ಧದ ಸುಪ್ರೀಂಕೋರ್ಟಿನ ತೀರ್ಪುಗಳು, ದಲಿತರ ಮೇಲಿನ ದೌರ್ಜನ್ಯಗಳು ಮತ್ತು ಭೂಮಿ ಪ್ರಶ್ನೆಗಳು: ರಾಜ್ಯ ಮಟ್ಟದ ವಿಚಾರ ಸಂಕಿರಣ**
ದಲಿತ ಹಕ್ಕುಗಳ ಸಮಿತಿ ಮತ್ತಿತರ ಸಂಘಟನೆಗಳು
ಜುಲೈ 15, 2018 ಗಾಂಧಿ ಭವನ, ಬೆಂಗಳೂರು

*** ಮಾರ್ಕ್ಸ್200–ಕ್ಯಾಪಿಟಲ್150 ಪುಸ್ತಕ ಬಿಡುಗಡೆ ಮತ್ತು ವಿಚಾರ ಸಂಕಿರಣ**
ನವಕರ್ನಾಟಕ ಮತ್ತು ಕ್ರಿಯಾ, ಕಲಬುರಗಿ, ಜುಲೈ 22

*** ಬಂಗಾಳ–ತ್ರಿಪುರಾಗಳಲ್ಲಿ ಪ್ರಜಾಪ್ರಭುತ್ವದ ಕೊಲೆಯ ವಿರುದ್ಧ ರಾಷ್ಟ್ರೀಯ ಪ್ರತಿಭಟನೆ**
ಜುಲೈ 24, ಎಡಪಕ್ಷಗಳ ಕರೆ

*** ಮಾರ್ಕ್ಸ್200–ಕ್ಯಾಪಿಟಲ್150 ಪುಸ್ತಕ ಬಿಡುಗಡೆ ಮತ್ತು ವಿಚಾರ ಸಂಕಿರಣ**
ನವಕರ್ನಾಟಕ ಮತ್ತು ಕ್ರಿಯಾ, ಧಾರವಾಡ, ಜುಲೈ 29

*** ಸಿಐಟಿಯು ಜಿಲ್ಲಾ ಜಾಥಾಗಳು** (ಜುಲೈ 2ನೇ ವಾರ – ಅಗಸ್ಟ್ 1ನೇ ವಾರ)

*** ರೈತರ ಜೈಲು ಭರೋ ಅಗಸ್ಟ್ 9**
ದೇಶವ್ಯಾಪಿ, ರೈತ ಕೃಷಿಕೂಲಿಕಾರ ಸಂಘಟನೆಗಳು

*** ಅಹೋರಾತ್ರಿ ಸಾಮೂಹಿಕ ಜಾಗರಣೆ ಅಗಸ್ಟ್ 14**
ಸಿಐಟಿಯು, ತಾಲೂಕು/ಜಿಲ್ಲಾ ಕೇಂದ್ರಗಳಲ್ಲಿ

*** ಮಜದೂರ್ ಕಿಸಾನ್ ಸಂಘರ್ಷ ರ‍್ಯಾಲಿ ಸೆಪ್ಟೆಂಬರ್ 5**
ನವದೆಹಲಿಗೆ ಪಾರ್ಲಿಮೆಂಟ್ ಚಲೋ, ಕಾರ್ಮಿಕ ರೈತ ಕೃಷಿಕೂಲಿ ಸಂಘಟನೆಗಳಿಂದ ಜಂಟಿ ಕರೆ

ಕೇಳಿಸಿದ್ದು

ಶಂಕರಾಚಾರ್ಯ ಜಯಂತಿ

ಸಮಾನತೆಯನ್ನು, ಜೀವಪರ ಮನಸ್ಸನ್ನು ಕಟ್ಟಿದ ವಚನ ಚಳವಳಿಯು ಎಲ್ಲಾ ಬಗೆಯ ಜಾತೀಯತೆಯನ್ನು ಧಿಕ್ಕರಿಸುತ್ತದೆ. ಹೀಗಿರುವಾಗ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯವನ್ನು ಪ್ರತಿಪಾದಿಸಿದ, ಬೋಧಿಸಿದ ಶಂಕರಾಚಾರ್ಯರ ಜಯಂತಿಯನ್ನು ವಚನ ಚಳವಳಿಯ ಕೇಂದ್ರಬಿಂದು ಬಸವಣ್ಣನ ಜಯಂತಿಯ ಜೊತೆ ಜೊತೆಗೆ ಆಚರಿಸಲು ತಾತ್ವಿಕವಾಗಿ ಮತ್ತು ವಾಸ್ತವದಲ್ಲಿ ಸಾಧ್ಯವಿಲ್ಲ. ಇದೆಲ್ಲ ಗೊತ್ತಿದ್ದೂ ಶಂಕರ ಜಯಂತಿ ಯಾಕೆ ಬೇಡ, ನಿಲ್ಲಿಸುವುದಿದ್ದರೆ ಎಲ್ಲವನ್ನೂ ನಿಲ್ಲಿಸಿ ('ವಾದ'ದ ಬಾಣ ಸರ್ಕಾರದ ಕಡೆ ತಿರುಗಲಿ', ಸಂಗತ, ಜುಲೈ 9) ಎಂಬರ್ಥದ ಬೀಸು ಹೇಳಿಕೆಗಳನ್ನು ಕೊಡುವುದು ಎಷ್ಟು ಸರಿ?

.. .. ..

ಸರ್ಕಾರವು ಯಾವ ಕಾರಣಕ್ಕೆ ಶಂಕರ ಜಯಂತಿ ಮಾಡಬಾರದು ಎನ್ನುವುದನ್ನು ಸ್ಪಷ್ಟಪಡಿಸಲು ಶಂಕರಾಚಾರ್ಯರ ಬ್ರಾಹ್ಮಣ್ಯ ಸಿದ್ಧಾಂತ, ಅವರ ಬ್ರಹ್ಮಸೂತ್ರದ ಟೊಳ್ಳುತನ, ಸಮಾಜಕ್ಕೆ ಯಾವುದೇ ಬಗೆಯಲ್ಲಿ ಸಹಾಯವಿಲ್ಲದ ಪಾಂಡಿತ್ಯ ಇತ್ಯಾದಿಗಳನ್ನೆಲ್ಲ ಹೇಳಬೇಕಾಗುತ್ತದೆ. ಇದರ ಹೊರತು ಶಂಕರಾಚಾರ್ಯರನ್ನು ಅನಗತ್ಯವಾಗಿ ಹೀಗಳೆಯುವ ತುಡಿತ ಯಾರಿಗೂ ಇಲ್ಲ.

ಶಂಕರಾಚಾರ್ಯರು ಪ್ರತಿಪಾದಿಸಿದ ಅನೇಕ ವಿಚಾರಗಳು ಸಂವಿಧಾನದ ಆಶಯಗಳಿಗೆ ವಿರುದ್ಧವಾದುವು. ಶಂಕರ ಜಯಂತಿ ಆಚರಿಸುವ ಮೂಲಕ ಈ ಸಿದ್ಧಾಂತವನ್ನು ಪುರಸ್ಕರಿಸಿದಂತಾಗುತ್ತದೆ ಎನ್ನುವುದು ಸರ್ಕಾರಕ್ಕೆ ಗೊತ್ತಿರಬೇಕಿತ್ತು. ಇದನ್ನು ಪ್ರಭುತ್ವಕ್ಕೆ ನೆನಪಿಸಿಕೊಟ್ಟರೆ ಅದು ವೈಯಕ್ತಿಕ ಹೀಗಳಿಕೆ ಹೇಗಾಗುತ್ತದೆ?

ಅಸ್ಪೃಶ್ಯತೆ, ಜಾತಿ ತಾರತಮ್ಯ ಪ್ರತಿಪಾದಿಸುವ ಶಂಕರಾಚಾರ್ಯರ ಜಯಂತಿ ಆಚರಿಸುವ ನಿರ್ಧಾರವೂ ಅಷ್ಟೇ, ಸಂವಿಧಾನವಿರೋಧಿ ನಿರ್ಧಾರ. ಇದು ಕಾರ್ಯರೂಪಕ್ಕೆ ಬಂದರೆ ಸಂವಿಧಾನದ ಆಶಯ ಉಳಿದೀತು ಹೇಗೆ? ಇದರಿಂದ ಶಂಕರ ಮಠಗಳ ಜಾತೀಯತೆ, ಸಂವಿಧಾನ–ವಿರೋಧಿ ನಡಾವಳಿಗಳನ್ನು ಸರ್ಕಾರವೇ ಪುರಸ್ಕರಿಸಿದಂತಾಗುವುದಿಲ್ಲವೇ ಎಂದು ಕಳಕಳಿಯಿಂದ ಪ್ರಶ್ನಿಸುವವರನ್ನೇ ಹೀಗಳೆಯುವುದು 'ಕಿಲ್ಲಿಂಗ್ ದ ಮೆಸೆಂಜರ್' ತರವಷ್ಟೆ.

.. ..

– ಬಿ. ಶ್ರೀಪಾದ ಭಟ್, ಬೆಂಗಳೂರು (ಪ್ರಜಾವಾಣಿ, ಸಂಗತ, ಜು.10)

ವಿಜ್ಞಾನವನ್ನು ರಾಷ್ಟ್ರೀಯವಾದದ ಹೆಸರಲ್ಲಿ ಚಪ್ಪಾಳೆ ಗಿಟ್ಟಿಸುವ ವೇದಿಕೆಯಾಗಿ ಪರಿವರ್ತಿಸುವ ಪ್ರಯತ್ನಗಳು ನಡೆಯುತ್ತಿವೆ : ಎಸ್.ಆರ್.ಪಿ



ಈ ಹಿಂದೆ ಕಲೆ, ಇತಿಹಾಸ, ಮತ್ತು ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿ ಮಾಡಿದಂತೆ, ಪ್ರಸ್ತುತ ಸರ್ಕಾರದ ಕೆಲವು ಮುಖಂಡರುಗಳು ವಿಜ್ಞಾನವನ್ನೂ ರಾಷ್ಟ್ರೀಯವಾದ ಮತ್ತು ಧರ್ಮದ ಹೆಸರಲ್ಲಿ ಚಪ್ಪಾಳೆ ಗಿಟ್ಟಿಸುವ ವೇದಿಕೆಯನ್ನಾಗಿ ಮಾರ್ಪಾಡು ಮಾಡಲು ಪ್ರಯತ್ನಿಸುತ್ತಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಮೇಲಿನ ಅವರ ದಾಳಿಯ ಪ್ರಸ್ತುತ ಪ್ರವೃತ್ತಿಯನ್ನು ತಡೆಯದೆ ಮುಂದುವರೆಸಲು ಬಿಟ್ಟರೆ ಭಾರತದ ಭವಿಷ್ಯವು ಇನ್ನಷ್ಟು ದೊಡ್ಡ ಅಪಾಯಕ್ಕೆ ಸಿಕ್ಕಿಕೊಳ್ಳಲಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಉಪಾಧ್ಯಕ್ಷರೂ, ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರೂ ಆಗಿರುವ ಎಸ್ ರಾಮಚಂದ್ರನ್ ಪಿಳ್ಳೆ ಎಚ್ಚರಿಸಿದ್ದಾರೆ. ಅವರು ಬೆಂಗಳೂರಿನಲ್ಲಿ ನಡೆದ 'ಫೌಂಡೇಷನ್ ಆಫ್ ಅಗ್ರೇರಿಯನ್ ಸ್ಟಡೀಸ್' **(FAS)** ನ ವಾರ್ಷಿಕ ಸಾರ್ವಜನಿಕ ಸಭೆಯಲ್ಲಿ ಅಧ್ಯಕ್ಷೀಯ ಭಾಷಣ ಮಾಡುತ್ತಿದ್ದರು. ವಿಶ್ವ ಪ್ರಸಿದ್ಧ ಕೃಷಿ ವಿಜ್ಞಾನಿ ಪ್ರೊಫೆಸರ್ ಎಂ.ಎಸ್.ಸ್ವಾಮಿನಾಥನ್ "ವಿಜ್ಞಾನ ಮತ್ತು ಕೃಷಿಯ ಭವಿಷ್ಯ" ಎಂಬ ವಿಷಯದ ಮೇಲೆ ಎಫ್.ಎ.ಎಸ್ ಪ್ರಥಮ ಸಾರ್ವಜನಿಕ ಉಪನ್ಯಾಸ ಏರ್ಪಡಿಸಿದ ಸಂದರ್ಭ ಇದಾಗಿತ್ತು.

ಮುಂದುವರೆದು ಮಾತನಾಡಿದ ಎಸ್.ಆರ್.ಪಿ ಯವರು, AIKS ಸಂಘಟನೆ 1936ದಲ್ಲಿ ಆರಂಭವಾದಂದಿನಿಂದಲೂ ನಿರಂತರವಾಗಿ ಕೃಷಿ ಉತ್ಪಾಧನೆ ಮತ್ತು ಕೃಷಿ ಉತ್ಪಾದಕತೆ ಹೆಚ್ಚಿಸಲು ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆ ಅತ್ಯಗತ್ಯವಾದದ್ದು ಎಂದು ವಾದಿಸುತ್ತಾ ಬಂದಿದೆ ಎಂದರು. ಇದು ಂಖಏಖ ಪ್ರಣಾಳಿಕೆಯ ಭಾಗವಾಗಿತ್ತು. ಭೂಮಾಲಕ ವ್ಯವಸ್ಥೆಯ ನಿರ್ಮೂಲನೆ ಮತ್ತು ಭೂಮಿಯ ವಿತರಣೆಯನ್ನು ಮಾಡುವುದರಿಂದ ಮಾತ್ರ ರೈತರ ಮತ್ತು ಕೃಷಿಯ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ ಎಂದು ನಾವು ಯಾವಾಗಲೂ ಅರ್ಥಮಾಡಿಕೊಂಡಿದ್ದೇವೆ. 2003 ರಲ್ಲಿ AIKS ಅಳವಡಿಸಿಕೊಂಡ ಪರ್ಯಾಯ ಕೃಷಿ ನೀತಿಯಲ್ಲಿ ಮತ್ತೆ ಕೃಷಿ ಸಂಶೋಧನೆಗೆ ಒತ್ತು ಕೊಡಲಾಗಿದೆ. ನವ-ಉದಾರವಾದಿ ಆರ್ಥಿಕ ನೀತಿಯನ್ನು ಅನುಸರಿಸಿದ ನಂತರ ಸರ್ಕಾರವು ಕೃಷಿ ಸಂಶೋಧನೆಗಳಲ್ಲಿ ಸಾರ್ವಜನಿಕ ಹೂಡಿಕೆಯನ್ನು ಕಡಿತಗೊಳಿಸಿದಾಗ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯ ಬೇಡಿಕೆಯನ್ನೂ ಎಐಕೆಎಸ್ ಅಳವಡಿಸಿಕೊಂಡಿತು. ಅನೇಕ ರೈತ ಚಳುವಳಿಗಳು 'ಟ್ರಾನ್ಸ್‌ಜೆನಿಕ್' ಅಂದರೆ ಜೀವಾಂತರ ಪ್ರಬೇಧಗಳ ಬಳಕೆಯನ್ನು ವಿರೋಧಿಸಿದಾಗ ಇದರ ಪರವಾಗಿ ಮತ್ತು ಕೃಷಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯನ್ನು ಬೆಂಬಲಿಸಿ ದೃಢ ನಿಲುವು ತಳೆದ ಎಐಕೆಎಸ್ ಲಾಭದಾಯಕ ಬೆಲೆಗಳು, ಸಾಲಮನ್ನಾ, ಅಗ್ಗದ ಸಾಲ ವಿತರಣೆ ಇತ್ಯಾದಿಗಳನ್ನು ಮಾತ್ರವಲ್ಲದೆ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿಶೇಷವಾಗಿ ಜೈವಿಕ ತಂತ್ರಜ್ಞಾನಕ್ಕೆ ಹೆಚ್ಚಿನ ಹಣದ ಹೂಡಿಕೆಗಾಗಿ ಒತ್ತಾಯಿಸುತ್ತಿದೆ.

ವಿಜ್ಞಾನ ಮತ್ತು ತಂತ್ರಜ್ಞಾನವಲ್ಲದೆ ವೈಜ್ಞಾನಿಕ ಮನೋಭಾವದ ಮೇಲೆ ಪ್ರಸ್ತುತ ಸರ್ಕಾರದ ಮುಖಂಡರು ನಡೆಸಿರುವ ದಾಳಿಯನ್ನು ಅವರು ಉಲ್ಲೇಖಿಸಿದರು. ಬಿ.ಜೆ.ಪಿ ಕೇಂದ್ರ ಮತ್ತು ರಾಜ್ಯ ಸಚಿವರುಗಳ ಅಂತಹ ಹೇಳಿಕೆಗಳಿಗೆ ನಾಲ್ಕು ಉದಾಹರಣೆಗಳನ್ನು ನೀಡಿದರು. ಜೊತೆಗೆ ಕೆಲವು ವಿಜ್ಞಾನಿಗಳ ಅವೈಜ್ಞಾನಿಕ ಮನೋಭಾವದ ಉದಾಹರಣೆಗಳನ್ನೂ ಕೊಟ್ಟರು. ಈ ದಾಳಿಗಳಿಂದ ವೈಜ್ಞಾನಿಕ ಮನೋಭಾವವನ್ನು ಉಳಿಸಲು ಮತ್ತು ಹಸಿವು ಮತು ಆಹಾರ ಅಭಾವದಿಂದ ಸಮಾಜವನ್ನು ಮುಕ್ತಗೊಳಿಸಲು ವಿಜ್ಞಾನಿಗಳು, ಸಮಾಜ ವಿಜ್ಞಾನಿಗಳು, ಸಾಮಾಜಿಕ ಕಾರ್ಯಕರ್ತರು, ಮತ್ತು ಸಾಮಾನ್ಯ ಜನರ ವಿಶಾಲ ಚಳುವಳಿಗೆ ಎಸ್.ಆರ್.ಪಿ. ಕರೆ ನೀಡಿದರು.

ಪ್ರೊ. ಸ್ವಾಮಿನಾಥನ್ ತಮ್ಮ ವಿಚಾರಪ್ರಚೋದಕ ಉಪನ್ಯಾಸದಲ್ಲಿ 1970 ಮತು 1985 ರ ನಡುವೆ ಭಾರತದಲ್ಲಿ ಸಾಮೂಹಿಕ ಹಸಿವಿನ ಸಾವುಗಳು ಸಂಭವಿಸುತ್ತದೆ ಎಂದು 1968 ರಲ್ಲಿ ಎಹ್ಲ್‌ರಿಕ್ ಭವಿಷ್ಯ ನುಡಿದುದನ್ನು ನೆನಪಿಸಿಕೊಂಡರು. 1942 ರ ಬಂಗಾಲ ಕ್ಷಾಮದಿಂದ ಹಸಿರು ಕ್ರಾಂತಿ, 2013 ರ 'ಆಹಾರ ಭದ್ರತಾ ಕಾಯ್ದೆ' ವರೆಗೆ ಆಹಾರ ಭದ್ರತೆಯ ಪ್ರಶ್ನೆ ನಡೆದು ಬಂದ ಹಾದಿಯನ್ನು ಸಂಕ್ಷಿಪ್ತವಾಗಿ ಗುರುತಿಸಿದರು. ತಮ್ಮ 'ಸದಾ ಹಸಿರು ಕ್ರಾಂತಿ'ಯ ಪರಿಕಲ್ಪನೆಯನ್ನು ವಿವರಿಸಿದರು. ಇದು 'ಶೂನ್ಯ ಹಸಿವು ಸವಾಲು' ಸ್ವೀಕರಿಸುವ ಒಂದು ತಾಳಿಕೆಯ ಕೃಷಿ ಬೆಳವಣಿಗೆಯ ಮಾದರಿ. ಇದರಲ್ಲಿ ಹಸಿವಿನ ಮೂರು ಆಯಾಮಗಳಾದ ಕ್ಯಾಲೋರಿ ಅಭಾವ,



ಪ್ರೋಟೀನ್ ಮತ್ತು ಪೋಷಣಾಂಶ ಕೊರತೆಯ ಪ್ರಶ್ನೆಗಳನ್ನು ಎದುರಿಸಬಹುದು ಎಂದರು.

'ಜೀನ್ ಎಡಿಟಿಂಗ್' ಮತ್ತು CRISPR(ಡಿ.ಎನ್.ಎ ಬದಲಿಸಲು ಅನುಕೂಲ ಮಾಡಿ ಕೊಡುವ) ತಂತ್ರಜ್ಞಾನ, ಮತ್ತಿತರ ಹೊಸ ತಂತ್ರಜ್ಞಾನಗಳನ್ನು ಬಳಸಬೇಕೆಂದು ಪ್ರೊ.ಸ್ವಾಮಿನಾಥನ್ ಪ್ರತಿಪಾದಿಸಿದರು. "ಇದನ್ನು ಸಸ್ಯಗಳಿಗೆ ವಿಸ್ತರಿಸಬಹುದು, ಇದರಲ್ಲಿ ಯಾವುದೇ ವಿದೇಶಿ ಡಿ.ಎನ್.ಎ ಇರುವುದಿಲ್ಲ ಮತ್ತು ನೈತಿಕ ಮಾನದಂಡಗಳನ್ನು ಹೊರತುಪಡಿಸಿ. ಕುಲಾಂತರಿ ಪ್ರದೇಧಗಳಂತೆ ಬೇರೆ ನಿಯಂತ್ರಕ ವ್ಯವಸ್ಥೆಯ ಅಗತ್ಯ ಇರುವುದಿಲ್ಲ" ಎಂದು ಅವರು ಹೇಳಿದರು.

ಅದೇ ರೀತಿ ಬೆಳೆಗಳೊಳಗೆ ಪೌಷ್ಟಿಕ ಮತ್ತು ಸೂಕ್ಷ್ಮ ಪೋಷಕಾಂಶಗಳನ್ನು ಹೆಚ್ಚಿಸಿರುವ ಜೈವಿಕ ಬಲವರ್ಧಿತ ಉತ್ಪನ್ನಗಳು, ಅಪೌಷ್ಟಿಕತೆ ಮತ್ತು ಸೂಕ್ಷ್ಮಪೌಷ್ಟಿಕಾಂಶ ಕೊರತೆಯಂತಹ ಕುತ್ತುಗಳನ್ನು ಎದುರಿಸಲು ಪ್ರಮುಖವಾಗುತ್ತವೆ. ಹವಾಮಾನ ಬದಲಾವಣೆಯು ಕೃಷಿಗೆ ಸಂಚಕಾರ ತರಬಹುದಾದ ಒಂದು ಸವಾಲಾಗಿ ಮುಂದುವರೆಯುತ್ತಿದ್ದು,. ಕಡಲ ನೀರಿನ ಕ್ರಷಿಯಂತಹ ಅಭ್ಯಾಸಗಳು ಕಡಲ ಕೊರೆತದಿಂದ ರೈತರನ್ನು ರಕ್ಷಿಸಬಲ್ಲವು ಮತ್ತು ಮಳೆಗಾಲದ ಅನಿರೀಕ್ಷಿತತೆಗಳನ್ನು ಎದುರಿಸಲು ನೆರವಾಗಬಲ್ಲವು ಎಂದು ಪ್ರೊ. ಸ್ವಾಮಿನಾಥನ್ ಹೇಳಿದರು.

ರೈತರ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ಪ್ರಕಟಣೆ ಮಾಡುವುದು ಒಂದು ವಿಷಯವಾದರೆ ಅವರಿಂದ ಖರೀದಿ ಮತ್ತೊಂದು ವಿಷಯವಾಗಿದೆ. ಅನೇಕ ಬಾರಿ ಪ್ರಕಟಿತ ಬೆಂಬಲ ಬೆಲೆಗಳಿಗಿಂತ ರೈತರಿಂದ ಖರೀದಿಸುವ ಬೆಲೆಗಳು ಕಡಿಮೆಯಾಗಿರುತ್ತದೆ. C2+ 50% ಕನಿಷ್ಟ ಬೆಂಬಲ ಬೆಲೆ ಸೂತ್ರ ಎಲ್ಲಾ ಬೆಳೆಗಳಿಗೆ ಏಕರೂಪವಾಗಿ ಅನ್ವಯಿಸುತ್ತದೆ ಎಂದು ನಾವು ಭಾವಿಸಿದ್ದೇವೆ. ಇದನ್ನು ಕಾನೂನಾತ್ಮಕವಾಗಿ ಅಥವಾ ಸಂಪ್ರದಾಯಿಕ ವಿಧಾನಗಳಿಂದ ಜಾರಿಗೆ ತರಬೇಕು ಎಂದು ಅವರು ಉಪನ್ಯಾಸದ ನಂತರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಹೇಳಿದರು. ಸರಿಯಾದ ಬೆಲೆಗಳ ಭರವಸೆಯ ವಿಧಾನವು ಮುಖ್ಯ, ವಿಶೇಷವಾಗಿ ಹೊಸ ಪೀಳಿಗೆಯ ರೈತರು ತಮ್ಮ ಹೂಡಿಕೆ ಮೇಲಿನ ಲಾಭವನ್ನು ತಿಳಿದುಕೊಳ್ಳ ಬಯಸುತ್ತಾರೆ ಎಂದು ಅವರು ಒತ್ತಿ ಹೇಳಿದರು. ●

ಕಾರ್ಮಿಕ ಕಾಯ್ದೆಗಳು ಸಂಹಿತೆಗಳಾಗುವುದು ಕಾರ್ಮಿಕರಿಗೆಸಗುವ ದ್ರೋಹ

ಹಲವು ಕಾರ್ಮಿಕ ಹೋರಾಟಗಳು ತ್ಯಾಗ ಬಲಿದಾನಗಳ ನಂತರ ರಚನೆಯಾಗಿರುವ ಕಾರ್ಮಿಕ ಕಾಯ್ದೆಗಳನ್ನು ಕಾರ್ಮಿಕರ ಹಿತ ಬಲಿಕೊಟ್ಟು ಕಾಯ್ದೆಗಳ ಆಶಯಗಳನ್ನು ತಿರುಚಿ ಸಂಹಿತೆಗಳನ್ನಾಗಿ ಬದಲಾಯಿಸುತ್ತಿರುವ ಕೇಂದ್ರ ಸರ್ಕಾರದ ನಡೆ ಕಾರ್ಮಿಕರಿಗೆ ಎಸಗುವ ದ್ರೋಹ ಎಂದು ಸಿಐಟಿಯುನ ಜಿಲ್ಲಾಧ್ಯಕ್ಷ ಸೈಯದ್‌ಮುಜೀಬ್‌ರವರು ಆರೋಪಿಸಿದರು.

ಅವರು ದಿನಾಂಕ 07-07-2018ರಂದು ತುಮಕೂರಿನ ಗಾಂಧಿನಗರದಲ್ಲಿನ ಜನಚಳುವಳಿ ಕೇಂದ್ರದಲ್ಲಿ ನಡೆದ ತುಮಕೂರು ಜಿಲ್ಲಾ ತಾಂತ್ರಿಕ ಸಂಸ್ಥೆಗಳ ಬೋಧಕೇತರರ ಸಂಘ (ಸಿಐಟಿಯು)ನ 32ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಮುಂದುವರಿದು ಮಾತನಾಡಿ ತಾಂತ್ರಿಕ ಕಾಲೇಜುಗಳು ಅಲ್ಲಿನ ಬೋಧಕೇತರ ನೌಕರರನ್ನು ಶೋಷಣೆಗೊಳಪಡಿಸುವುದರ ವಿರುದ್ಧ ಕಿಡಿಕಾರಿದ ಅವರು ಸರ್ಕಾರಗಳು ತಾಂತ್ರಿಕ ಕಾಲೇಜುಗಳಲ್ಲಿನ ಬೋಧಕೇತರ ನೌಕರರ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸಿ ಕಾಯ್ದೆ ಬದ್ಧ ಸೌಲತ್ತುಗಳನ್ನು ಕೊಡದೆ ಇರುವ ಆಡಳಿತ ಮಂಡಳಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಸಭೆಯಲ್ಲಿ ವರದಿ ಮಂಡಿಸಿದ ಸಂಘದ ಕಾರ್ಯದರ್ಶಿ ಟಿ.ಜಿ.ಶಿವಲಿಂಗಯ್ಯ ಇಂಜಿನಿಯರಿಂಗ್ ಮೆಡಿಕಲ್ ಮತ್ತು ವೃತ್ತಿಪರ ಕಾಲೇಜುಗಳಲ್ಲಿ ದುಡಿಯುವ ಕಾರ್ಮಿಕರು ಸಂಘಟಿತರಾಗಿ ತಮಗಾಗುತ್ತಿರುವ ಅನ್ಯಾಯಗಳ ವಿರುದ್ಧ ಧ್ವನಿ ಎತ್ತುವಂತೆ ಕರೆನೀಡಿದರು. ಸಭೆಯಲ್ಲಿ ಕಾರ್ಯದರ್ಶಿಗಳು ಮಂಡಿಸಿದ ವರದಿಯನ್ನು ಚರ್ಚಿಸಿ ಅಂಗೀಕರಿಸಲಾಯಿತು. ಸಂಘದ ಖಜಾಂಚಿ ಚಂದ್ರಶೇಖರಯ್ಯ ಲೆಕ್ಕಪತ್ರಗಳನ್ನು ಮಂಡಿಸಿ ಸಹಕಾರ್ಯದರ್ಶಿ ನಾಗರಾಜಯ್ಯನವರು ಕಾರ್ಯಕ್ರಮವನ್ನು ನಿರೂಪಿಸಿದರು ಆರಂಭದಲ್ಲಿ ಗೋವಿಂದಯ್ಯ ಸ್ವಾಗತಿಸಿ ಫಣಿರಾಜ್ ವಂದಿಸಿದರು.

ಇದೇ ಸಂದರ್ಭದಲ್ಲಿ ಮುಂದಿನ ಅವಧಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಮೀನಾಕ್ಷಿ ಸುಂದರಂ ಉಪಾಧ್ಯಕ್ಷರಾಗಿ, ಸ್ಯಯದ್‌ಮುಜೀಬ್ ಕಾರ್ಯದರ್ಶಿಯಾಗಿ, ಟಿ.ಜಿ.ಶಿವಲಿಂಗಯ್ಯ ಸಹಕಾರ್ಯದರ್ಶಿಯಾಗಿ ಎನ್.ನಾಗರಾಜಯ್ಯ ಖಜಾಂಚಿಯಾಗಿ ಚಂದ್ರಶೇಖರಯ್ಯ ಆಯ್ಕೆಯಾಗಿದ್ದು ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಟಿ.ಆರ್. ಬಾಲಕೃಷ್ಣ, ನಾಗರಾಜು ಜಿ, ಗೋವಿಂದಯ್ಯ ಹೆಚ್.ಕೆ ಹೆಚ್.ಎಂ.ಬಾಲಾಜಿ, ಕಿರಣ್ ಎಸ್ ಆಯ್ಕೆಯಾಗಿದ್ದಾರೆ.

ಅವೈಜ್ಞಾನಿಕ ನೇಮಕಾತಿ ಪ್ರಕ್ರಿಯೆಗೆ ಖಂಡನೆ

ಮಹಾನಗರ ಪಾಲಿಕೆಯಲ್ಲಿ ಅವೈಜ್ಞಾನಿಕ ನೇಮಕಾತಿ ಪ್ರಕ್ರಿಯೆ ಮಾಡಿದ್ದನ್ನು ಖಂಡಿಸಿ ಕರ್ನಾಟಕ ರಾಜ್ಯ ಮುನಸಿಪಲ್ ಕಾರ್ಮಿಕರ ಸಂಘ (ಸಿಐಟಿಯು) ವಿಜಯಪುರ ಜಿಲ್ಲಾ ಸಮಿತಿ ಪದಾಧಿಕಾರಿಗಳು ನಗರಾಭಿವೃದ್ಧಿ ಕೋಶದ ನಿರ್ದೇಶಕರಾದ ಮಹಾದೇವ ಮುರಗಿ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮುನಸಿಪಲ್ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ ಮಾತನಾಡಿ, ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕ ನೇಮಕಾತಿ ಸಲುವಾಗಿ 75 ಜನರನ್ನು ನೇರ ನೇಮಕಾತಿಯಾಗಿ ಅಂತಿಮಪಡಿಸಿದ ತಾತ್ಕಾಲಿಕ ಪಟ್ಟಿ ಪ್ರಕಟಿಸಿ ಆಕ್ಷೇಪಣೆಗಾಗಿ ದಿನಾಂಕ 10-7-2018 ರ ಒಳಗಾಗಿ ಸಲ್ಲಿಸಲು ತಿಳಿಸಿರುತ್ತಾರೆ. ಸಂಘವು ನೇರ ನೇಮಕಾತಿಯನ್ನು ಮಾಡುವುದನ್ನು ವಿರೋಧಿಸಿ 10, 15 ವರ್ಷಗಳಿಂದ ಹಾಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರನ್ನು ಕಾಯಂ ಮಾಡಬೇಕೆಂದು ಸರ್ಕಾರಕ್ಕೆ ಕೇಳಿಕೊಂಡಿದ್ದರೂ ಸರ್ಕಾರ ಮಾತ್ರ ಈ ಬೇಡಿಕೆಯನ್ನು ಮಾನ್ಯ ಮಾಡದೇ ಅವೈಜ್ಞಾನಿಕವಾಗಿ ನೇಮಕಾತಿ ಪ್ರಕ್ರಿಯೆ ಮುಂದುವರೆಸಿದೆ. ಇದು ಖಂಡನೀಯ ಎಂದರು.



ಕರ್ನಾಟಕ ರಾಜ್ಯ ಮುನ್ಸಿಪಲ್ ಕಾರ್ಮಿಕರ ಸಂಘವು ಸತತವಾಗಿ ಚಳುವಳಿ ಮಾಡುತ್ತಾ ಬಂದಿರುವ ಫಲವಾಗಿ ಮತ್ತು ಉಚ್ಚ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ಪೌರಕಾರ್ಮಿಕರನ್ನು ಹಂತ ಹಂತವಾಗಿ ಕಾಯಂಗೊಳಿಸಲು ಮುಂದಾಗಿದೆ. ಕಾಯಂಗೊಳಿಸುವಾಗ ನೇಮಕಾತಿ ನಿಯಮವನ್ನು ಪಾಲಿಸುವುದರಿಂದ ಅದರಂತೆ 45 ವರ್ಷಕ್ಕೂ ಕಡಿಮೆ ವಯಸ್ಸಿನ ನಿರ್ಬಂಧ ಕಾರ್ಮಿರಲ್ಲಿ ಗೊಂದಲ ಉಂಟುಮಾಡಿದೆ. ಒಬ್ಬ ಕಾರ್ಮಿಕ ತನ್ನ 20ನೇ ವಯಸ್ಸಿಗೆ ಪಾಲಿಕೆಯಲ್ಲಿ ಕಡಿಮೆ ವೇತನದಲ್ಲಿ ಗುತ್ತಿಗೆ ಕೆಲಸ ಮಾಡಲು ಬಂದವನಿಗೆ ನೇಮಕಾತಿ ಸಂದರ್ಭದಲ್ಲಿ 45 ವರ್ಷ ಮುಗಿದು ಹೋಗಿದೆ. ಆ 25 ವರ್ಷದ ಪೌರ ಕಾರ್ಮಿಕ ಈ ಪ್ರಕ್ರಿಯೆಯಿಂದ ಹೊರಗುಳಿಯುತ್ತಾನೆ. ಈ ನೇಮಕಾತಿಯು ಅವೈಜ್ಞಾನಿಕವಾಗಿದ್ದು ಸೇವಾ ಹಿರಿತನವನ್ನು ಕಡೆಗಣಿಸಿ ಕಿರಿಯರನ್ನು ನೇಮಕ ಮಾಡುವ ಪ್ರಕ್ರಿಯೆಯಾಗಿದೆ. ಹಾಗಾಗಿ ಸೇವಾಹಿರಿತನವನ್ನು ಪರಿಗಣಿಸಿ ತಮ್ಮ ಕಚೇರಿಯಲ್ಲಿನ ಮೊದಲಿನ ಮೂಲ ದಾಖಲೆಗಳನ್ನು ಪರಿಶೀಲಿಸಿ ಸದರಿ ನೇಮಕಾತಿ ಪಟ್ಟಿಯಲ್ಲಿ ಸೇವಾ ಹಿರಿತನವನ್ನು ಪರಿಗಣನೆಗೆ ತೆಗೆದುಕೊಂಡು ಪೌರಕಾರ್ಮಿಕರನ್ನು ಕಾಯಂ ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಶಂಕರ ಚಲವಾದಿ, ಜೀತೆಂದ್ರ ಕಾಂಬಳೆ, ಸಂಜೀವ ಕಾಂಬಳೆ, ಸುನಂದಾ ಗದ್ಯಾಳ, ಅನೀತಾ ಗೋಸಾವಿ, ಶೋಭಾ ಕಾಖಂಡಕಿ, ಮೀನಾಕ್ಷಿ ಪರಪ್ಪಗೋಳ, ದುಂಡವ್ವ ಕಾಖಂಡಕಿ, ಕಸ್ತೂರಿ ಕಾಖಂಡಕಿ, ರಮೇಶ ಶಾಹಪೂರ, ಬಲಭೀಮ ಕನ್ನೂರ, ಚಂದ್ರಶೇಖರ, ಜಟ್ಟೆಪ್ಪ ಕಾಂಬಳೆ ಸೇರಿದಂತೆ ನೂರಾರು ಕಾರ್ಮಿಕರು ಉಪಸ್ಥಿತರಿದ್ದರು. ●

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಭಾರತದಲ್ಲಿ ಆರ್.ಎಸ್.ಎಸ್. ಅತಿಯಾಗಿ ಹೆದರುವುದು ಅಭಿವ್ಯಕ್ತಿ ಸ್ವಾತಂತ್ರ್ಯ, ವೈಚಾರಿಕ ಸ್ವಾತಂತ್ರ್ಯವಿರುವ ಶಿಕ್ಷಣ ಸಂಸ್ಥೆಗಳಿಗೆ. ಹೀಗಾಗಿ ಅದು ಶಿಕ್ಷಣದ ಮೇಲೆ ನಿರಂತರವಾಗಿ ತನ್ನ ಜೆಹಾದ್ ನಡೆಸುತ್ತಲೇ ಬಂದಿದೆ. ಸಾಧ್ಯವಿದ್ದರೆ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಶಾಖಾಗಳನ್ನಾಗಿ ಪರಿವರ್ತಿಸುವ ಮಹಾತ್ವಾಕಾಂಕ್ಷೆ ಇರುವ ಬಲಪಂಥೀಯರು ಈಗ ಬಯಸುವುದು ವಿವೇಕ, ವಿವೇಚನೆ, ಚಿಂತನೆ ಇವುಗಳನ್ನು ಪೋಷಿಸುವ ಎಲ್ಲಾ ಸಂಸ್ಥೆಗಳನ್ನು ನಾಶಮಾಡಿ ಅತಾರ್ಕಿಕವಾಗಿ ಸರ್ವಾಧಿಕಾರವನ್ನು ಬೆಂಬಲಿಸುವ, ಅಲ್ಪಸಂಖ್ಯಾತರು ಹಾಗೂ ದಲಿತರ ಕೊಲೆಗಳನ್ನು ಸಮರ್ಥಿಸುವ ಮನಸ್ಸುಗಳನ್ನು. ಇದು ಸಾಧ್ಯವಾಗಬೇಕಾದರೆ ಶಿಕ್ಷಣವನ್ನು ನಾಶಮಾಡುವುದು ಅನಿವಾರ್ಯವಾಗಿದೆ. ಆದರೆ ಬಂಡವಾಳಶಾಹಿಯ ವಿನಮ್ರ ಸೇವಕರಾದ ಬಲಪಂಥೀಯರು ಇದನ್ನು ನೇರವಾಗಿ ಮಾಡಲಾರರು. ಹೀಗಾಗಿ ಅವರ ಮಾರ್ಗದರ್ಶನದಲ್ಲಿ ಕೇಂದ್ರ ಸರಕಾರವು ಕಂಡುಕೊಂಡಿರುವ ಉಪಾಯವೆಂದರೆ ಶ್ರೇಷ್ಠತೆಯ ವ್ಯಸನ. ಈ ವ್ಯಸನದಿಂದಾಗಿ ಅದು ಶಿಕ್ಷಣ ಕ್ಷೇತ್ರದಲ್ಲಿ ವರ್ಣವ್ಯವಸ್ಥೆ ಹಾಗೂ ಜಾತಿವ್ಯವಸ್ಥೆಗಳನ್ನು ಬೆಳೆಸುತ್ತಿದೆ.

ಹೀಗೊಂದು ಹೊಸ ‘ಶ್ರೇಷ್ಠತೆಯ ವ್ಯಸನ’

ತಮ್ಮ ವಿಶಿಷ್ಟವಾದ ನೋಟಕ್ರಮದಿಂದಾಗಿ ಕೆ.ವಿ.ಸುಬ್ಬಣ್ಣ ಅನಿರೀಕ್ಷಿತವಾದ ಆದರೆ ಸರಿಯಾದ ವಾದಗಳನ್ನು ಮಂಡಿಸಿ ಚರ್ಚೆಗಳನ್ನು, ವಿವಾದಗಳನ್ನು ಹುಟ್ಟು ಹಾಕುತ್ತಿದ್ದರು. ಬೆಂಗಳೂರಿನ ಪ್ರಸಿದ್ಧ ಜಾಗೃತ ಸಮಾವೇಶದಲ್ಲಿ ಅವರು ‘ಶ್ರೇಷ್ಠತೆಯ ವ್ಯಸನ’ ಎನ್ನುವ ಪರಿಕಲ್ಪನೆಯನ್ನು ಇದೇ ರೀತಿಯಲ್ಲಿ ಮಂಡಿಸಿದ್ದರು. ಸಮಾವೇಶವನ್ನು ಉದ್ಘಾಟಿಸಿದ್ದ ಕವಿ ಗೋಪಾಲಕೃಷ್ಣ ಅಡಿಗರು ‘ಸಾಹಿತ್ಯದಲ್ಲಿ ಶ್ರೇಷ್ಠತೆ ನನಗೆ ಜೀವನ್ಮರಣದ ಪ್ರಶ್ನೆ’ ಎಂದು ಹೇಳಿದ ನಂತರ ಸುಬ್ಬಣ್ಣ ಈ ವಾದವನ್ನು ಮಂಡಿಸಿದ್ದರಿಂದ ಚರ್ಚೆಗಳು ತಪ್ಪುದಾರಿ ಹಿಡಿದವು. ಶ್ರೇಷ್ಠತೆಯ ಹುಡುಕಾಟವು ಮೇಲು–ಕೀಳು, ಶ್ರೇಷ್ಠ–ಸಾಮಾನ್ಯವೆನ್ನುವ ಶ್ರೇಣಿಗಳನ್ನು, ಅವುಗಳ ಮೂಲಕ ಅಸಮಾನತೆ ಹಾಗೂ ಅಸಹನೆಯನ್ನು ಹುಟ್ಟುಹಾಕುತ್ತವೆಯೆನ್ನುವುದು ಅವರ ಸರಿಯಾದ ವಾದ. ಕೆಲವೇ ದಿನಗಳ ಹಿಂದೆ ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಮಾಡಿರುವ ಶಿಕ್ಷಣ ದ್ರೋಹದ ಕೆಲಸವನ್ನು ನೋಡಿದಾಗ ಶ್ರೇಷ್ಠತೆಯ ವ್ಯಸನವು ಬಂಡವಾಳಶಾಹಿಯ ಬೆಂಬಲಕ್ಕೆ ನಿಂತಾಗ ಆಗಬಹುದಾದ ಅನಾಹುತಗಳನ್ನು ಅರಿತುಕೊಳ್ಳಲು ಸುಬ್ಬಣ್ಣನವರ ಮಾತುಗಳು ಸಹಾಯವಾದವು.

ಈ ಮಂತ್ರಾಲಯ ಮಾಡಿದ ಎರಡು ಕೆಲಸಗಳಲ್ಲಿ ಒಂದು, ವಿಶ್ವವಿದ್ಯಾಲಯ ಧನಸಹಾಯ ಆಯೋಗವನ್ನು (ಯು.ಜಿ.ಸಿ.) ಬರಖಾಸ್ತು ಮಾಡಿ ಉನ್ನತ ಶಿಕ್ಷಣದ ಉಸ್ತುವಾರಿಗಾಗಿ ಭಾರತೀಯ ಉಚ್ಚ ಶಿಕ್ಷಣ ಮಂಡಳಿ(ಎಚ್.ಇ.ಸಿ.ಐ.)ಯನ್ನು ಸ್ಥಾಪಿಸುವ ಪ್ರಸ್ತಾಪ. ಎರಡನೇಯದು, ಶ್ರೇಷ್ಠ ವಿದ್ಯಾಸಂಸ್ಥೆಗಳೆಂದು ಕೆಲವನ್ನು ಆಯ್ಕೆ ಮಾಡಿ ಅವುಗಳಿಗೆ ಸಂಪೂರ್ಣವಾದ ಸ್ವಾಯತ್ತತೆಯನ್ನು ಕೊಡುವ ಹಾಗೂ ಅಪಾರವಾದ ಧನಸಹಾಯವನ್ನು ಕೊಡುವ ಪ್ರಸ್ತಾಪ. ಯು.ಜಿ.ಸಿ. ಬದಲಾಗಿ ಸ್ಥಾಪಿತವಾಗುವ ಸಂಸ್ಥೆಗೆ ಶಿಕ್ಷಣ ಸಂಸ್ಥೆಗಳಿಗೆ ಧನಸಹಾಯ ಮಂಜೂರು ಮಾಡುವ ಅಧಿಕಾರವಿರುವುದಿಲ್ಲ. ಆ ಅಧಿಕಾರವು ಮಾನವ ಸಂಪನ್ಮೂಲ ಸಚಿವಾಲಯಕ್ಕೆ ಅಂದರೆ ಕೇಂದ್ರ ಸರಕಾರಕ್ಕೆ ಇರುತ್ತದೆ. ಸರಳ ಮಾತಿನಲ್ಲಿ ಹೇಳುವುದಾದರೆ ಕೇಂದ್ರ ಸರಕಾರವು ಎಲ್ಲಾ ರಾಜ್ಯಗಳಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಮೇಲೆ ಪರೋಕ್ಷವಾಗಿ ಹತೋಟಿಯನ್ನು ಇಟ್ಟುಕೊಳ್ಳುತ್ತದೆ.

ಇದರ ಪರಿಣಾಮಗಳನ್ನು ಊಹಿಸುವುದು ತುಂಬಾ ಸುಲಭ. ಜೆ.ಎನ್.ಯು. ನಂಥ ವಿಶ್ವವಿದ್ಯಾಲಯಗಳಿಗೆ ಧನಸಹಾಯ ಕಡಿಮೆ ಮಾಡುತ್ತ ಅವನ್ನು ದುರ್ಬಲಗೊಳಿಸುವುದು. ಆ ಮೂಲಕ ಪ್ರಜಾಪ್ರಭುತ್ವವಾದಿ ಮಾದರಿಯಲ್ಲಿ ವಿಮರ್ಶೆ, ಅಸಮ್ಮತಿ, ವಿರೋಧಗಳಿಗೆ ಅವಕಾಶವಿರುವ ಶಿಕ್ಷಣ ಸಂಸ್ಥೆಗಳನ್ನು ಮುಗಿಸುವುದು. ಆರ್.ಎಸ್.ಎಸ್. ಸಿದ್ಧಾಂತಗಳನ್ನು ಸಮರ್ಥಿಸುವ ಮತ್ತು ಗೋವಿನ ಸೆಗಣಿಯ ಬಗ್ಗೆ ಸಂಶೋಧನೆ ಮಾಡುವ, ಜ್ಯೋತಿಷ್ಯ ಶಾಸ್ತ್ರವನ್ನು ಬೋಧಿಸುವ ಸಂಸ್ಥೆಗಳಿಗೆ ಅಪಾರ ಧನಸಹಾಯವನ್ನು ನೀಡುವುದು.


ಭಾರತದಲ್ಲಿ ಆರ್.ಎಸ್.ಎಸ್. ಅತಿಯಾಗಿ ಹೆದರುವುದು ಅಭಿವ್ಯಕ್ತಿ ಸ್ವಾತಂತ್ರ್ಯ, ವೈಚಾರಿಕ ಸ್ವಾತಂತ್ರ್ಯವಿರುವ ಶಿಕ್ಷಣ ಸಂಸ್ಥೆಗಳಿಗೆ. ಹೀಗಾಗಿ ಅದು ಶಿಕ್ಷಣದ ಮೇಲೆ ನಿರಂತರವಾಗಿ ತನ್ನ ಜೆಹಾದ್ ನಡೆಸುತ್ತಲೇ ಬಂದಿದೆ. ಸಾಧ್ಯವಿದ್ದರೆ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಶಾಖಾಗಳನ್ನಾಗಿ ಪರಿವರ್ತಿಸುವ ಮಹಾತ್ವಾಕಾಂಕ್ಷೆ ಇರುವ ಬಲಪಂಥೀಯರು ಈಗ ಬಯಸುವುದು ವಿವೇಕ, ವಿವೇಚನೆ, ಚಿಂತನೆ ಇವುಗಳನ್ನು ಪೋಷಿಸುವ ಎಲ್ಲಾ ಸಂಸ್ಥೆಗಳನ್ನು ನಾಶಮಾಡಿ ಅತಾರ್ಕಿಕವಾಗಿ ಸರ್ವಾಧಿಕಾರವನ್ನು ಬೆಂಬಲಿಸುವ, ಅಲ್ಪಸಂಖ್ಯಾತರು ಹಾಗೂ ದಲಿತರ ಕೊಲೆಗಳನ್ನು ಸಮರ್ಥಿಸುವ ಮನಸ್ಸುಗಳನ್ನು. ಇದು ಸಾಧ್ಯವಾಗಬೇಕಾದರೆ ಶಿಕ್ಷಣವನ್ನು ನಾಶಮಾಡುವುದು ಅನಿವಾರ್ಯವಾಗಿದೆ.

ಆದರೆ ಬಂಡವಾಳಶಾಹಿಯ ವಿನಮ್ರ ಸೇವಕರಾದ ಬಲಪಂಥೀಯರು ಇದನ್ನು ನೇರವಾಗಿ ಮಾಡಲಾರರು. ಹೀಗಾಗಿ ಅವರ ಮಾರ್ಗದರ್ಶನದಲ್ಲಿ ಕೇಂದ್ರ ಸರಕಾರವು ಕಂಡುಕೊಂಡಿರುವ ಉಪಾಯವೆಂದರೆ ಶ್ರೇಷ್ಠತೆಯ ವ್ಯಸನ. ಈ ವ್ಯಸನದಿಂದಾಗಿ ಅದು ಶಿಕ್ಷಣ ಕ್ಷೇತ್ರದಲ್ಲಿ ವರ್ಣವ್ಯವಸ್ಥೆ ಹಾಗೂ ಜಾತಿವ್ಯವಸ್ಥೆಗಳನ್ನು ಬೆಳೆಸುತ್ತಿದೆ. ಈ ಕಾರ್ಯಸೂಚಿಯ ಕ್ರಮಗಳು ಹೀಗಿವೆ. ಹಿಂದಿನಿಂದ ಇದ್ದ ನ್ಯಾಕ್ (NAAC) ಅಲ್ಲದೆ ಎನ್.ಐ.ಆರ್.ಎಫ್.(NIRF) ಮುಂತಾದ ಸಂಸ್ಥೆಗಳಿಂದ ರ್‍ಯಾಂಕ್ ಮಾಡಿಸುವುದು. ಈ ರ್‍ಯಾಂಕಿಂಗ್ ಹೇಗಿದೆಯೆಂದರೆ ಶಿಕ್ಷಣದ ಗುಣಮಟ್ಟ, ಸಂಶೋಧನ ಹಾಗೂ ಚಿಂತನೆಯ ಆರೋಗ್ಯ– ಇವುಗಳ ಹೊರತಾಗಿ ಇನ್ನೆಲ್ಲದ್ದಕ್ಕೂ ಅಂಕಗಳನ್ನು ಕೊಡಲಾಗುತ್ತದೆ! ಇವುಗಳ ಆಧಾರದ ಮೇಲೆ ಶಿಕ್ಷಣ ಸಂಸ್ಥೆಗಳ ಮಧ್ಯ ವರ್ಣವ್ಯವಸ್ಥೆಯನ್ನು ಹೇರಲಾಗುತ್ತಿದೆ. ಅತಿ ಹೆಚ್ಚು ಅಂಕಗಳನ್ನು ಪಡೆಯುವ ವಿಪ್ರ ಸಂಸ್ಥೆಗಳು ಶ್ರೇಷ್ಠ; ಕಡಿಮೆ ಅಂಕಗಳನ್ನು ಪಡೆಯುವ ಉಳಿದವು ಶೂದ್ರ ಸಂಸ್ಥೆಗಳು. ಮಾತ್ರವಲ್ಲ, ಅನುದಾನವೂ ಇಲ್ಲದ, ಶಿಕ್ಷಕರನ್ನು ನೇಮಕವೂ ಮಾಡದ ರಾಜ್ಯ ವಿಶ್ವವಿದ್ಯಾಲಯಗಳು ಈ ವರ್ಣವ್ಯವಸ್ಥೆಯ ಹೊರಗಿರುವ ಪಂಚಮರಂತೆ! ಹೀಗಾದ ಮೇಲೆ ವಿಪ್ರ ಸಂಸ್ಥೆಗಳು ಭೂಸುರರಾಗಿ ಸ್ವಾಯತ್ತತೆ ಹಾಗೂ ಧನಸಹಾಯ ಪಡೆಯುತ್ತೆ. ನೆನಪಿಡಿ. ಸ್ವಾಯತ್ತತೆಯೆಂದರೆ, ಇಂದಿನ ಸರಕಾರದ ಪ್ರಕಾರ ಆರ್ಥಿಕವಾಗಿ ಸರಕಾರದ ಮೇಲೆ ಅವಲಂಬಿಸದೇ ತಮ್ಮದೇ ಸಂಪನ್ಮೂಲಗಳನ್ನು ಹುಡುಕಿಕೊಳ್ಳುವುದು.

ಅಂದರೆ ಶ್ರೀಮಂತ ವಿದ್ಯಾರ್ಥಿಗಳು, ವಿದೇಶೀ ವಿದ್ಯಾರ್ಥಿಗಳು ಇವರಿಂದ ಅಗಾಧವಾದ ಹಣ ಪಡೆದುಕೊಳ್ಳುವುದು.

ಈ ವಿಪ್ರ ಸಂಸ್ಥೆಗಳಲ್ಲಿ ಬಹುಪಾಲು ಖಾಸಗಿ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳೇ ಇರುತ್ತವೆ. ಅನುಮಾನವೇ ಬೇಡ. ಏಕೆಂದರೆ ಜಾಗತಿಕ ಮಟ್ಟದ ಮೂಲಭೂತ ಸೌಕರ್ಯ ಹಾಗೂ ಖ್ಯಾತ ವಿದ್ವಾಂಸ–ಶಿಕ್ಷಕರನ್ನು ತರುವ ಧನಬಲವು ಖಾಸಗಿ ಬಂಡವಾಳಶಾಹಿ ಸಂಸ್ಥೆಗಳಿಗೆ ಮಾತ್ರವಿರುತ್ತದೆ. ಉದಾಹರಣೆಗೆ ನಮ್ಮ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಕಾಲೇಜುಗಳಲ್ಲಿ ಅನುಭವಿ, ಖಾಯಂ ಶಿಕ್ಷಕರ ತೀವ್ರ ಕೊರತೆ ಇದೆ. ಬದಲಾಗಿ ಬಹುಪಾಲು ಅತಿಥಿ ಉಪನ್ಯಾಸಕರೇ ಇದ್ದಾರೆ. ಇದಕ್ಕೆ ಕೇವಲ ಸರಕಾರವೇ ಸಂಪೂರ್ಣವಾಗಿ ಹೊಣೆಯಾಗಿದೆ. ಆದರೆ ಈ ಕಾರಣದಿಂದಾಗಿಯೇ ಈ ಯಾವ ಸಂಸ್ಥೆಗಳೂ ಉನ್ನತ ರ್‍ಯಾಂಕ್ ಪಡೆದು, “ಶ್ರೇಷ್ಠ” ಸಂಸ್ಥೆಗಳಾಗುವುದು ಸಾಧ್ಯವೇ ಇಲ್ಲ. ಅವುಗಳಿಗೆ ಯಾವುದೇ ಆರ್ಥಿಕ ಬೆಂಬಲವೇ ಇಲ್ಲ. ಆದರೆ ಶ್ರೀಮಂತರಲ್ಲದ ಲಕ್ಷಾಂತರ ವಿದ್ಯಾರ್ಥಿಗಳು ಇಲ್ಲಿ ಕಲಿಯುತ್ತಿದ್ದಾರೆ. ಎಲ್ಲಾ ಕೊರತೆಗಳ ಮಧ್ಯ ಅವರಲ್ಲಿ ಅನೇಕರು ಶ್ರೇಷ್ಠ ಪ್ರತಿಭೆ ಹಾಗೂ ವ್ಯಕ್ತಿತ್ವಗಳನ್ನು ಪಡೆದಿದ್ದಾರೆ. ಅವರಿಗೆ ಭವಿಷ್ಯವೇ ಇಲ್ಲ. ವರ್ಣಾಶ್ರಮದ ಜೊತೆಗೆ ಮನುಧರ್ಮಶಾಸ್ತ್ರವನ್ನೂ ಸರಕಾರವು ಅನುಷ್ಠಾನಕ್ಕೆ ತಂದಿರುವುದರಿಂದ ವಿಪ್ರ ಸಂಸ್ಥೆಗಳಲ್ಲಿ ಓದಿದವರು ಜಾಗತೀಕರಣದ ಫಲಗಳನ್ನು ಅನುಭವಿಸಿದರೆ, ಶೂದ್ರ ಹಾಗೂ ಪಂಚಮ ಸಂಸ್ಥೆಯಲ್ಲಿ ಓದುವ ವಿದ್ಯಾರ್ಥಿಗಳು ಅವರ ಸೇವಕರಾಗಿ ಅಥವಾ ಬೀದಿಯಲ್ಲಿ ಪಕೋಡಗಳನ್ನು ‘ಮೇಕ್ ಇನ್ ಇಂಡಿಯ’ ಸೂತ್ರದ ಪ್ರಕಾರ ಮಾಡುತ್ತಿರಬೇಕು.

ನಾನು ಅತಿಶಯೋಕ್ತಿ ಬಳಸುತ್ತಿದ್ದೇನೆ ಎಂದು ನಿಮಗೆ ಅನ್ನಿಸಬಹುದು. ಅಥವಾ ಈ ಶ್ರೇಷ್ಠ ಸಂಸ್ಥೆಗಳ ಪಟ್ಟಿಯಲ್ಲಿ ಐ.ಐ.ಎಸ್.ಸಿ., ಐ.ಐ.ಟಿ. ಯಂಥ ಶ್ರೇಷ್ಠ ಸಂಸ್ಥೆಗಳು ಇವೆಯಲ್ಲ ಎಂದು ನೀವು ಹೇಳಬಹುದು. ಸತ್ಯದ ದರ್ಶನವಾಗುವುದು, ಆ ಪಟ್ಟಿಯಲ್ಲಿ ಅಂಬಾನಿಯವರು ಜಿಯೋ ಸಂಸ್ಥೆಯೂ ಇದೆ ಎಂದಾಗ. ಇದೆಯೆಂದರೆ ಕಾಗದದ ಮೇಲಿದೆ. ಹಾಗೂ ಅಂಬಾನಿಯವರ ಬೊಕ್ಕಸದಲ್ಲಿದೆ! ವಿಷಯ ತುಂಬಾ ಗಂಭೀರವಾಗಿದೆ. ನಮ್ಮ ದೇಶದಲ್ಲಿ ಪರಿವರ್ತನೆ ಬಂದದ್ದು ಶಿಕ್ಷಣದ ಮೂಲಕ ಮಾತ್ರ. ಡಾ. ಅಂಬೇಡ್ಕರ್ ಅವರ ಮಂತ್ರವು “ಎಜುಕೇಟ್” ಆಗಿತ್ತು. ನಮ್ಮ ಯಾವ ಪ್ರಜಾಪ್ರಭುತ್ವದ ಸಂಸ್ಥೆಗಳು ಮಾಡಲಾಗದ ಪರಿವರ್ತನೆಯನ್ನು ಶಿಕ್ಷಣವು ಮಾಡಿದೆ. ಅಲ್ಲದೇ ಶಿಕ್ಷಣವು ಸಾಮಾಜಿಕ ನ್ಯಾಯ, ಸಮಾನತೆಯ ಮೌಲ್ಯಗಳನ್ನು ಬೆಂಬಲಿಸುತ್ತ ಬಂದಿದೆ. ಶಿಕ್ಷಣ ವ್ಯವಸ್ಥೆಯ ಸೋಲುಗಳು ಅಪಾರವಾಗಿವೆ. ಆದರೆ ಅದು ಸಾವಿರಾರು ವರ್ಷಗಳಿಂದ ಆಳುವ ವರ್ಗಗಳಿಂದಾಗಿ ವಂಚಿತರಾಗಿದ್ದವರಿಗೆ ಬಾಗಿಲುಗಳನ್ನು ತೆರೆದಿದೆ. ಈ ಚಾರಿತ್ರಿಕ ಕ್ರಿಯೆಯನ್ನು ಮನುವಾದಿ, ಬಂಡವಾಳಶಾಹಿ, ಜಂಟಿ ಶಕ್ತಿಗಳು ಈಗ ಹಿಂದಕ್ಕೆ ತಳ್ಳುತ್ತಿವೆ. ಬೆರಳೆಣಿಕೆಯ ‘ಶ್ರೇಷ್ಠ’ ಸಂಸ್ಥೆಗಳನ್ನು ಖಾಸಗೀಕರಣಗೊಳಿಸಿ ದೇಶದ ಬಹುಸಂಖ್ಯಾತರಿಗೆ ಕಳಪೆ ಶಿಕ್ಷಣವನ್ನು ಕೊಡುವುದು ಇಂದಿನ ಸರಕಾರಗಳ ಉದ್ದೇಶವಾಗಿದೆ. ನಮ್ಮ ವಿದ್ವಾಂಸರು, ಮಧ್ಯಮವರ್ಗದ ತಂದೆ ತಾಯಿಗಳು ಜಾಗತಿಕ ಮಟ್ಟದ ಶ್ರೇಷ್ಠ ವಿದ್ಯಾ ಸಂಸ್ಥೆಗಳೆನ್ನುವ ಬಂಗಾರದ ಜಿಂಕೆಗಳಿಗೆ ಹೇಗೆ ಮರುಳಾಗಿದ್ದಾರೆಂದರೆ ಎಲ್ಲರಿಗೂ ಮುಕ್ತವಾಗಿ, ಸಮಾನವಾಗಿ ಶಿಕ್ಷಣ ನೀಡಬೇಕೆನ್ನುವ ನಮ್ಮ ಸಂವಿಧಾನವು ಅವರಿಗೆ ತಿರುಕನ ಕನಸಿನಂತೆ ಕಾಣುತ್ತಿರಬಹುದು. ಅಂದ ಹಾಗೆ ಶಿಕ್ಷಣವು ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡೂ ಸೇರಿದ ಪಟ್ಟಿಯಲ್ಲಿ ಬರುತ್ತದೆಯೆನ್ನುವುದನ್ನು ಯಾವ ರಾಜ್ಯವೂ ಈ ಸಂದರ್ಭದಲ್ಲಿ ನೆನಪು ಕೂಡ ಮಾಡಿಕೊಂಡಿಲ್ಲ. ●





ಶಿಕ್ಷಣದ ಮೇಲೆ ಅವಳಿ ಪ್ರಹಾರಗಳು

ನವ-ಉದಾರವಾದ ಮತ್ತು ಹಿಂದೂತ್ವದ ವಿಷಮಿಶ್ರಣ ಆಗುತ್ತಿದೆ. ಇದರ ವಿರುದ್ಧ ಪ್ರತಿರೋಧ ಹೆಚ್ಚಾಗುತ್ತಿದೆ. ಒಂದು ಜಾತ್ಯತೀತ, ವೈಜ್ಞಾನಿಕ, ಸಾಮೂಹಿಕ ಶಿಕ್ಷಣ ನೀತಿಯನ್ನು ರಕ್ಷಣೆ ಮಾಡುವುದು ಈ ಪ್ರತಿ-ಹೋರಾಟದ ಕೇಂದ್ರ ಆಶಯವಾಗಿರಬೇಕು.



ಪ್ರಕಾಶ ಕಾರಟ್

ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗ (ಯುಜಿಸಿ)ವನ್ನು ರದ್ದು ಮಾಡಿ ಭಾರತೀಯ ಉನ್ನತ ಶಿಕ್ಷಣ ಆಯೋಗ (ಎಚ್‌ಇಸಿಐ)ವನ್ನು ರಚಿಸಲು ಕಾನೂನುಗಳನ್ನು ತರುವ ಕುರಿತ ಸುದ್ದಿಗಳು ಮೋದಿ ಸರಕಾರದ ಅಡಿಯಲ್ಲಿ ಶಿಕ್ಷಣ ಅದರಲ್ಲೂ ವಿಶೇಷವಾಗಿ ಉನ್ನತ ಶಿಕ್ಷಣದ ಮೇಲೆ ನಡೆಯುತ್ತಿರುವ ಪ್ರಹಾರಗಳ ವಿಚಾರದ ಮೇಲೆ ಗಮನ ಕೇಂದ್ರೀಕರಿಸುವಂತೆ ಮಾಡಿದೆ.

ಶಿಕ್ಷಣ ರಂಗದಲ್ಲಿ ತೆಗೆದುಕೊಂಡಿರುವ ಅನೇಕ ಕ್ರಮಗಳು ಎರಡು ಉದ್ದೇಶಗಳಿಂದ ಪ್ರೇರಿತವಾಗಿವೆ. ಮೊದಲನೆಯದಾಗಿ ನವ-ಉದಾರೀಕರಣ ಹಾಗೂ ಎರಡನೆಯದು ಹಿಂದೂತ್ವ ಸಿದ್ಧಾಂತ. ಉನ್ನತ ಶಿಕ್ಷಣದ ಖಾಸಗೀಕರಣ ಮತ್ತು ಕಾರ್ಪೊರೇಟೀಕರಣ ಪ್ರಕ್ರಿಯೆಯನ್ನು ಬಿರುಸುಗೊಳಿಸಲಾಗಿದೆ ಹಾಗೂ ಸಾರ್ವಜನಿಕ ನಿಧಿಯಿಂದ ನಡೆಸುವ ಶಿಕ್ಷಣವನ್ನು ಮೊಟಕುಗೊಳಿಸಲಾಗುತ್ತಿದೆ ಮತ್ತು ಅದನ್ನು ಕೆಳದರ್ಜೆಗೆ ಇಳಿಸಲಾಗುತ್ತಿದೆ.

ಇನ್ನೊಂದೆಡೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದೂತ್ವ ಕಾರ್ಯಸೂಚಿ ಮತ್ತು ಸಿದ್ಧಾಂತವನ್ನು ತೂರಿಸುವ ಪ್ರಯತ್ನಗಳು ಸತತವಾಗಿ ನಡೆಯುತ್ತಿವೆ. ಇದನ್ನು ಒಲ್ಲದ ಸಂಸ್ಥೆಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ತಮ್ಮ ದಾರಿಗೆ ತರಲು ಬಲವಂತ ಹಾಗೂ ದಬ್ಬಾಳಿಕೆಯ ಮಾರ್ಗ ಅನುಸರಿಸಲೂ ಸರಕಾರ ಹಿಂಜರಿಯುತ್ತಿಲ್ಲ.

ಎಚ್‌ಇಸಿಐ ಬಗ್ಗೆ ಹೇಳುವುದಾದರೆ, ಯುಜಿಸಿ ಒಳ್ಳೆಯ ಕೆಲಸ ಮಾಡುತ್ತಿದೆ ಹಾಗೂ ಅದು ಉನ್ನತ ಶಿಕ್ಷಣವನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ಪೋಷಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ ಎಂದು ಯಾರೂ ವಾದಿಸುವುದಿಲ್ಲ. ಆದರೆ ಅದಕ್ಕೆ ಸೂಚಿಸಿರುವ ಪರಿಹಾರ ರೋಗಕ್ಕಿಂತ ಔಷಧಿಯೇ ಅಪಾಯಕರ ಎನ್ನುವಂತಿದೆ.

ಎಚ್‌ಇಸಿಐ ಒಂದು ಸರಕಾರಿ ನಾಮನಿರ್ದೇಶಿತ ಸಂಸ್ಥೆಯಾಗಿರಲಿದ್ದು ಅದರಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಧ್ಯಯನದಲ್ಲಿ ತೊಡಗಿರುವವರ ಪ್ರಾತಿನಿಧ್ಯ ನಗಣ್ಯವಾಗಿರುತ್ತದೆ. ಎಲ್ಲಕ್ಕಿಂತ ಮೇಲಾಗಿ, ಮಾನವ ಸಂಪನ್ಮೂಲ ಅಭಿವೃದ್ಧಿ (ಎಚ್‌ಆರ್‌ಡಿ) ಖಾತೆಯ ಸಚಿವರು ಸಲಹಾ ಮಂಡಳಿಯ ಅಧ್ಯಕ್ಷರಾಗಿದ್ದು ಎಚ್‌ಇಸಿಐಗೆ ಮಾರ್ಗದರ್ಶನ ನೀಡುತ್ತಾರೆ. ಇದು ಹೊಸ ಸಂಸ್ಥೆಯ, ಆ ಮೂಲಕ ಉನ್ನತ ಶಿಕ್ಷಣದ ಮೇಲೆ ಮೇಲೆ ಸರಕಾರದ ನೇರ ನಿಯಂತ್ರಣವನ್ನು ಖಾತರಿಪಡಿಸಲಿದೆ.

ಅಲ್ಲದೆ, ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜ್‌ಗಳಿಗೆ ಅನುದಾನ ವಿತರಿಸುವ ಹೊಣೆಯನ್ನು ಹಿಂದೆ ಯುಜಿಸಿ ಹೊಂದಿತ್ತು; ಅದನ್ನೀಗ ಎಚ್‌ಆರ್‌ಡಿ ಖಾತೆಗೆ ನೀಡಲಾಗುವುದು. ಇದು ಉನ್ನತ ಶಿಕ್ಷಣವನ್ನು ನಿಯಂತ್ರಿಸುವ ಹಾಗೂ ವಿವಿಗಳನ್ನು ಮತ್ತು ವಿದ್ಯಾರ್ಥಿಗಳ ಮೇಲೆ ಕಣ್ಗಾವಲಿಡುವ ನೇರ ಸಾಧನ ಆಗಲಿದೆ. ಯುಜಿಸಿ ಕಾನೂನಿನಲ್ಲಿ ಮೇಲ್ನೋಟಕ್ಕಾದರೂ ಇರುವಂಥ ಸ್ವಾಯತ್ತತೆಯ ಸುಳಿವನ್ನೂ ನಾಶ ಮಾಡಲಾಗಿದೆ.

ಉನ್ನತ ಶಿಕ್ಷಣದ ನಿಯಂತ್ರಣ ಪ್ರಾಧಿಕಾರದ ಪುನರ್‌ರಚನೆಯ ಜೊತೆಜೊತೆಯಲ್ಲಿ ಉನ್ನತ ಶಿಕ್ಷಣ ನಿಧಿನೀಡಿಕೆ ಸಂಸ್ಥೆ (ಎಚ್‌ಇಎಫ್‌ಎ) ಯಂಥ ಸಂಸ್ಥೆಗಳನ್ನು ರಚಿಸಲಾಗಿದೆ. ಸರಕಾರ ನೀಡುವ ಅನುದಾನಗಳ ಜಾಗದಲ್ಲಿ ಎಚ್‌ಇಎಫ್‌ಎ ಸಾಲ ನೀಡಿಕೆ ವ್ಯವಸ್ಥೆ ತರುವುದು ಇದರ ಉದ್ದೇಶವಾಗಿದೆ. ಮೂಲ ಸೌಕರ್ಯಗಳ ಅಭಿವೃದ್ಧಿಗೆ ಪಡೆಯಲಾಗುವ ಸಾಲವು ಶಿಕ್ಷಣ ಸಂಸ್ಥೆಗಳ ಹಾಗೂ ತತ್ಪರಿಣಾಮವಾಗಿ ವಿದ್ಯಾರ್ಥಿಗಳ ಮೇಲೆ ಹೊಸ ಹೊರೆಯನ್ನು ಹೇರಲಿದೆ.

'ಉತ್ಕೃಷ್ಟ ಶಿಕ್ಷಣ ಸಂಸ್ಥೆ' ಎಂದು ಸರಕಾರ ಕೆಲವು ಸಂಸ್ಥೆಗಳನ್ನು ಆಯ್ಕೆ ಮಾಡಿದ ರೀತಿಯು ಉನ್ನತ ಶಿಕ್ಷಣದಲ್ಲಿ ಕಾರ್ಪೊರೇಟ್-ಪರ ನೀತಿಯನ್ನು ಜಾರಿ ಮಾಡಲಾಗುತ್ತಿರುವುದನ್ನು ಢಾಳಾಗಿ ಬಯಲು ಮಾಡಿದೆ. ರಿಲಯನ್ಸ್ ಫೌಂಡೇಷನ್ ಸ್ಥಾಪಿಸಲು ಉದ್ದೇಶಿಸಿರುವ ಜಿಯೋ ಸಂಸ್ಥೆಗೆ ಈ ಮಾನ್ಯತೆಯನ್ನು ನೀಡಿರುವುದು ದೊಡ್ಡ ಕಾರ್ಪೊರೇಟ್ ಸಂಸ್ಥೆಗಳು ಯಾವ ರೀತಿಯಲ್ಲಿ 'ಹೊಸ ಶಿಕ್ಷಣ ವ್ಯವಸ್ಥೆ'ಯಲ್ಲಿ ಮೇಲುಗೈ ಸಾಧಿಸಲಿವೆ ಎನ್ನುವುದರ ಸೂಚನೆಯಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಹಿಂದಿನ ಯುಪಿಎ ಸರಕಾರ ಆರಂಭಿಸಿರುವ ನವ-ಉದಾರವಾದಿ ಕ್ರಮಗಳನ್ನು ಕೇಂದ್ರೀಕರಣ, ವಾಣಿಜ್ಯೀಕರಣ ಮತ್ತು ಖಾಸಗೀಕರಣವನ್ನು ಚಾಲಕಶಕ್ತಿಯಾಗಿ ಮಾಡಿ ತ್ವರಿತಗೊಳಿಸಲಾಗುತ್ತಿದೆ.

ಇದರ ಫಲಿತಾಂಶವಾಗಿ ಸಾರ್ವಜನಿಕ ಹಣದೊಂದಿಗೆ ನಡೆಯುವ ಶಿಕ್ಷಣ ವ್ಯವಸ್ಥೆ ಕ್ಷಯಗೊಂಡು ನಾಶವಾಗುತ್ತದೆ. ಸಂಘ ಪರಿವಾರಕ್ಕೆ ಅನಿಷ್ಟವಾಗಿ ಕಂಡಿರುವ ಜವಾಹರಲಾಲ್ ನೆಹರೂ ವಿವಿಯಂಥ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ನಾಶ ಮಾಡುವ ಮೂಲಕ ಈ ಉದ್ದೇಶವನ್ನು ಸಾಧಿಸಲಾಗುತ್ತದೆ.

ಇದೇ ಹೊತ್ತಿಗೆ, ಶಿಕ್ಷಣ ವ್ಯವಸ್ಥೆಯ ಮೇಲೆ ಹಿಂದೂತ್ವ ಅಜೆಂಡಾವನ್ನು ಹೇರಲಾಗುತ್ತಿದೆ. ಆರ್‌ಎಸ್‌ಎಸ್ ಮಂದಿಯನ್ನು ವಿವಿಗಳ ಕುಲಪತಿಗಳನ್ನಾಗಿ ಮಾಡಲಾಗುತ್ತಿದೆ. ಆರ್‌ಎಸ್‌ಎಸ್‌ಗೆ ಅವರ ನಿಷ್ಠೆಯೇ ಅವರ ಏಕೈಕ ಅರ್ಹತೆಯಾಗಿದೆ. ಬಿಜೆಪಿ ರಾಜ್ಯ ಸರಕಾರಗಳು ಶಾಲಾ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ಕೋಮುವಾದೀ ಕರಣಗೊಳಿಸಲು ಹಲವು ಕ್ರಮಗಳನ್ನು ಕೈಗೊಂಡಿವೆ.

ಸಿಬಿಎಸ್‌ಇ ರೀತಿಯಲ್ಲಿ ವೈದಿಕ್ ಶಿಕ್ಷಣ ಮಂಡಳಿಯನ್ನು ರಚಿಸುವುದಾಗಿ ಎಚ್‌ಆರ್‌ಡಿ ಸಚಿವಾಲಯ ಪ್ರಕಟಿಸಿದೆ. ಇದು ವೇದ ಮತ್ತು ಸಂಸ್ಕೃತ ಅಧ್ಯಯನ ಆಧರಿತ ಪರ್ಯಾಯ ಶಿಕ್ಷಣ ವ್ಯವಸ್ಥೆಯಾಗಲಿದೆ. ಐಐಟಿ ದೆಹಲಿ ಮತ್ತಿತರ ಸರಕಾರಿ ಸಂಸ್ಥೆಗಳ ಮೂಲಕ 'ಗೋ-ವಿಜ್ಞಾನ' ಮತ್ತು ಹುಸಿ-ವಿಜ್ಞಾನದ ಮೇಲೆ ಯೋಜನೆಗಳು ಮತ್ತು ಸಂಶೋಧನೆಗಳನ್ನು ನಡೆಸಲು ಸರಕಾರಿ ಹಣವನ್ನು ನೀಡಲಾಗುತ್ತಿದೆ.

ಹೀಗಾಗಿ ಶಿಕ್ಷಣದಲ್ಲಿ ನವ-ಉದಾರವಾದ ಮತ್ತು ಹಿಂದೂತ್ವದ ವಿಷಮಿಶ್ರಣ ಆಗುತ್ತಿದೆ. ವಿದ್ಯಾರ್ಥಿಗಳಿಗೋ ಭವಿಷ್ಯದಲ್ಲಿ ಶುಲ್ಕ ಹೆಚ್ಚಳದ ಬರೆ ಖಚಿತ ಹಾಗೂ ಉನ್ನತ ಶಿಕ್ಷಣದ ಸಂಸ್ಥೆಗಳಿಗೆ ಪ್ರವೇಶ ಕೈಗೆಟುಕದ ವಿಚಾರ ಆಗಲಿದೆ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಗುಣಮಟ್ಟದಲ್ಲಿ ಕುಸಿತ ಆಗಲಿದೆ.

ಶಿಕ್ಷಣದ ಮೇಲಿನ ಈ ಅವಳಿ ದಾಳಿಗಳ ವಿರುದ್ಧ ಪ್ರತಿರೋಧ ಹೆಚ್ಚಾಗುತ್ತಿದೆ. ಮೋದಿ ಸರಕಾರದ ಪ್ರತಿಗಾಮಿ ಶಿಕ್ಷಣ ನೀತಿಗಳನ್ನು ಐಕ್ಯತೆಯಿಂದ ವಿರೋಧಿಸಲು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಕಾಳಜಿ ಹೊಂದಿದ ಇತರ ಎಲ್ಲಾ ಜನವಿಭಾಗಗಳನ್ನು ಅಣಿನೆರೆಯಿಸಬೇಕಾಗಿದೆ. ಒಂದು ಜಾತ್ಯತೀತ, ವೈಜ್ಞಾನಿಕ, ಸಾಮೂಹಿಕ ಶಿಕ್ಷಣ ನೀತಿಯನ್ನು ರಕ್ಷಣೆ ಮಾಡುವುದು ಈ ಪ್ರತಿ-ಹೋರಾಟದ ಕೇಂದ್ರ ಆಶಯವಾಗಿರಬೇಕು.

ಅನು: ವಿಶ್ವ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಜುಲೈ 24: ಪಶ್ಚಿಮ ಬಂಗಾಲ ಮತ್ತು ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಹತ್ಯೆಯ ವಿರುದ್ಧ ಎಡಪಕ್ಷಗಳ ರಾಷ್ಟ್ರೀಯ ಪ್ರತಿಭಟನೆ

ಪುಟ 2 ರಿಂದ

ಕಾರ್ಯಕ್ರಮಗಳು ಮತ್ತು ಸಮಾರಂಭಗಳ ಮೇಲೂ ದಾಳಿಗಳು ನಡೆಯುತ್ತಿವೆ. ಮೇದಿನದ ಆಚರಣೆಗಳನ್ನು ರಾಜ್ಯದ ಹಲವೆಡೆಗಳಲ್ಲಿ ಅಸ್ತವ್ಯಸ್ತಗೊಳಿಸಲು ಪ್ರಯತ್ನಗಳು ನಡೆದಿವೆ. ಕಾರ್ಲ್ಸ್ ಮಾರ್ಕ್ಸ್ ದ್ವಿಶತಾಬ್ದಿಯಂತಹ ಸಮಾರಂಭಗಳ ಮೇಲೂ ದಾಳಿಗಳು ನಡೆದಿವೆ. ಪ್ರಗತಿಪರ ದೈನಿಕ 'ದೇಶೆರ್ ಕಥಾ'ದ ಮೇಲೆ ಗುರಿ ಇಡಲಾಗಿದೆ. ಅದನ್ನು ಒಯ್ಯುವ ಸಾಗಾಣಿಕೆದಾರರು ಮತ್ತು ಚಂದಾದಾರರನ್ನೂ ಬೆದರಿಸಲಾಗುತ್ತಿದೆ.

ತ್ರಿಪುರಾ ಬುಡಕಟ್ಟು ಪ್ರದೇಶಗಳ ಸ್ವಾಯತ್ತ ಜಿಲ್ಲಾ ಮಂಡಳಿಯೂ ಸೇರಿದಂತೆ ವಿವಿಧ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು, ಪ್ರಧಾನರುಗಳು ಮತ್ತು ಅಧ್ಯಕ್ಷರುಗಳು ಒಂದೋ ರಾಜೀನಾಮೆ ನೀಡಬೇಕು, ಇಲ್ಲವೇ ಬಿಜೆಪಿ ಸೇರಬೇಕು ಎಂದು ಬಲವಂತ ಮಾಡಲಾಗುತ್ತಿದೆ.

ರಾಜ್ಯ ಆಡಳಿತವೂ ಇದರಲ್ಲಿ ಶಾಮೀಲಾಗಿರುವುದು ಪ್ರಕಟಗೊಂಡಿದೆ, ದೂರು ದಾಖಲಿಸಲು ಹೋಗಿರುವ ಪಕ್ಷದ ಮುಖಂಡರ ಮೇಲೆ ಪೋಲೀಸ್ ಠಾಣೆಗಳಲ್ಲೇ ದಾಳಿ ಮಾಡಲಾಗುತ್ತಿದೆ.

ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ಆಡಳಿತ ಎಡರಂಗದ ವಿರುದ್ಧ ನಿರ್ದೇಶಿಸಿರುವ ಭಯೋತ್ಪಾದಕ ಮತ್ತು ಫ್ಯಾಸಿಸ್ಟ್ ಮಾದರಿ ದಾಳಿಗಳನ್ನು ಮುಂದುವರೆಸುತ್ತಿದೆ.. 2016ರ ವಿಧಾನಸಭಾ ಚುನಾವಣೆಗಳ ನಂತರ ಟಿಎಂಸಿ ಎಡಪಕ್ಷಗಳ ಮೇಲೆ, ವಿಶೇಷವಾಗಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಈಗಲೂ ತಮ್ಮ ಸಾಮೂಹಿಕ ನೆಲೆಗಳನ್ನು ಉಳಿಸಿಕೊಂಡಿರುವ ಪ್ರದೇಶಗಳಲ್ಲಿ ವ್ಯಾಪಕ ದಾಳಿಗಳನ್ನು ಹರಿಯ ಬಿಟ್ಟಿದೆ. ಜೂನ್2016ರಿಂದೀಚೆಗೆ 31 ಸಿಪಿಐ(ಎಂ) ಸದಸ್ಯರು ಮತ್ತು ಬೆಂಬಲಿಗರನ್ನು ಟಿಎಂಸಿ ಗೂಂಡಾಗಳು ಕೊಂದಿದ್ದಾರೆ. ಇನ್ನೊಂದು ನಡೆಯೆಂದರೆ, ಎಡರಂಗ ಬಹುಮತದಲ್ಲಿರುವ ಪಂಚಾಯತು ಸಮಿತಿಗಳು, ಗ್ರಾಮ ಪಂಚಾಯತುಗಳು ಮತ್ತು ನಗರಸಭೆಗಳನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದು. ಸಾವಿರಾರು ಮಂದಿ ಬೆದರಿಕೆಗಳು ಮತ್ತು ದಾಳಿಗಳಿಂದಾಗಿ ತಮ್ಮ ಮನೆಗಳನ್ನು ಬಿಟ್ಟು ಹೋಗಬೇಕಾಗಿ ಬಂದಿದೆ.

2018 ಪಂಚಾಯತು ಚುನಾವಣೆಗಳಲ್ಲಿ ಚುನಾವಣಾ ಪೂರ್ವ ಮೋಸಗಳನ್ನು ಎಸಗಲಾಗಿದೆ, ಎಡರಂಗ ಮತ್ತು ಇತರ ಪ್ರತಿಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸದಂತೆ ತಡೆಯಲು ವ್ಯಾಪಕ ದಾಳಿ, ಹಿಂಸಾಚಾರಗಳನ್ನು ನಡೆಸಲಾಗಿದೆ. ಪಂಚಾಯತು ಚುನಾವಣೆಗಳಿಗೆ ಸಂಬಂಧಿಸಿದ ಹಿಂಸಾಚಾರಗಳಲ್ಲಿ ಎಡಪಕ್ಷಗಳ ಹನ್ನೊಂದಕ್ಕೂ ಹೆಚ್ಚು ಕಾರ್ಯಕರ್ತರು ಪ್ರಾಣ ಕಳಕೊಂಡಿದ್ದಾರೆ. ಅಪಹರಣ ಮತ್ತು ಬೆಂಕಿ ಹಚ್ಚುವುದು ಸರಾಗವಾಗಿ ನಡೆಯುತ್ತಿವೆ. ಪೋಲೀಸ್ ಆಡಳಿತ ಸಂಪೂರ್ಣವಾಗಿ ಟಿಎಂಸಿ ಗೂಂಡಾಗಳೊಂದಿಗೆ ಕೈ ಜೋಡಿಸಿದೆ. ಹಿಂಸಾಚಾರದ ಪ್ರಮಾಣವನ್ನು ನೋಡಿದರೆ ಟಿಎಂಸಿ ನೇತೃತ್ವದ ಆಡಳಿತದ ಇಂತಹ ಸಕ್ರಿಯ ಪಾತ್ರದಿಂದಾಗಿ ಮುಕ್ತ ಮತ್ತು ನ್ಯಾಯಯುತ ಚುನಾವಣೆ ಅಸಾಧ್ಯ ಎಂಬುದು ಅತ್ಯಂತ ಸ್ಪಷ್ಟವಾಗಿದೆ. ಟಿಎಂಸಿ 48650 ಗ್ರಾಮ ಪಂಚಾಯತು ಸ್ಥಾನಗಳಲ್ಲಿ 16,814ನ್ನು ಮತ್ತು 9217 ಪಂಚಾಯತು ಸಮಿತಿ ಸ್ಥಾನಗಳಲ್ಲಿ 3059ನ್ನು ಸ್ಪರ್ಧೆಯಿಲ್ಲದೆ ವಶಪಡಿಸಿಕೊಂಡಿದೆ. ಅಲ್ಲದೆ 825 ಜಿಲ್ಲಾ ಪರಿಷದ್ ಸೀಟುಗಳಲ್ಲಿ 203ರಲ್ಲಿ ಮಮತಾ ಬ್ಯಾನರ್ಜಿ ಪಕ್ಷದ ಅಭ್ಯರ್ಥಿಗಳು ವಿಜೇತರು ಎಂದು ಘೋಷಿಸಲಾಗಿದೆ.

ಟಿಎಂಸಿ ಮತಗಣನೆ ಏಜೆಂಟರು ಅಂಗೀಕರಿಸಿದ ತಂತ್ರಗಳು ಹಿಂದೆಂದೂ ಕಂಡು ಕೇಳರಿದಂತವುಗಳು. ಎಡರಂಗದ ಅಭ್ಯರ್ಥಿಗಳ ಚಿಹ್ನೆಗಳ ಮೇಲೆ ಗುರುತು ಹಾಕಿದ್ದ ಮತಪತ್ರಗಳನ್ನು ತೆಗೆದು ಅಷ್ಟೇ ಪ್ರಮಾಣದಲ್ಲಿ ಟಿಎಂಸಿ ಗುರುತಿನ ಮತಪತ್ರಗಳನ್ನು ಇಡಲಾಯಿತು.

ಈ ಕುರಿತ ಕೇಸಿನ ವಿಚಾರಣೆ ಸುಪ್ರಿಂ ಕೋರ್ಟಿನಲ್ಲಿ ಮುಂದುವರೆಯುತ್ತಿದ್ದು, ನ್ಯಾಯಾಲಯ ಇತ್ತೀಚೆಗೆ ಪಶ್ಚಿಮ ಬಂಗಾಲದಲ್ಲಿ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಬುಡಮಟ್ಟದ ಪ್ರಜಾಪ್ರಭುತ್ವ ಕೆಲಸ ಮಾಡುತ್ತಿಲ್ಲ ಎಂದು ಗಮನಿಸಿದೆ.

ಈ ದಾಳಿಗಳು ಜನಗಳ ಜೀವನಾಧಾರಗಳು ಮತ್ತು ಕಷ್ಟಪಟ್ಟು ಗಳಿಸಿದ ಹಕ್ಕುಗಳ ಮೇಲಿನ ದಾಳಿಗಳ ಒಂದು ಭಾಗ. ಬಾಂಗೋರ್‌ನಲ್ಲಿ ಭೂಮಿಯ ಬಲವಂತದ ಸ್ವಾಧೀನದ ವಿರುದ್ಧ ಹೋರಾಟದಲ್ಲಿ ಪೋಲೀಸ್ ಗೋಲೀಬಾರಿನಲ್ಲಿ ಮತ್ತು ಟಿಎಂಸಿ ಗೂಂಡಾಗಳಿಂದ ಹಲವಾರು ಕಾರ್ಯಕರ್ತರ ಹತ್ಯೆಗಳಾಗಿವೆ. ಒಬ್ಬ ಉನ್ನತ ಮುಖಂಡ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ(ಯುಎಪಿಎ) ಅಡಿಯಲ್ಲಿ ಬಂಧನದಲ್ಲಿದ್ದಾನೆ.

ಪಶ್ಚಿಮ ಬಂಗಾಲ ಮತ್ತು ತ್ರಿಪುರಾದಲ್ಲಿ ಈ ಹಾಡುಹಗಲೇ ನಡೆಯುತ್ತಿರುವ ಕೊಲೆಗಳನ್ನು ಎಡಪಕ್ಷಗಳು ಬಲವಾಗಿ ಖಂಡಿಸಿವೆ. ಮತ್ತು ದೇಶಾದ್ಯಂತ ಈ ಬರ್ಬರತೆಯನ್ನು ಖಂಡಿಸುವ ಮತ್ತು ಪ್ರಜಾಪ್ರಭುತ್ವ, ಮಾನವ ಹಕ್ಕುಗಳು ಮತ್ತು ನಾಗರಿಕ ಹಕ್ಕುಗಳ ರಕ್ಷಣೆಗೆ ಜನಗಳನ್ನು ಅಣಿನೆರೆಸುವ ಪ್ರತಿಭಟನಾ ಕಾರ್ಯಾಚರಣೆಗಳನ್ನು ಸಂಘಟಿಸಬೇಕು ಎಂದು ತಮ್ಮೆಲ್ಲ ಘಟಕಗಳಿಗೆ ಅವು ಕರೆ ನೀಡಿವೆ. ನಮ್ಮ ಸಂವಿಧಾನ, ಜನಗಳ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ಇಂತಹ ಫ್ಯಾಸಿಸ್ಟ್ ಮಾದರಿ ದಾಳಿಗಳನ್ನು ಸೋಲಿಸಲು ಮುಂದೆ ಬರಬೇಕು ಎಂದು ಭಾರತೀಯ ಜನತೆಗೆ ಎಡಪಕ್ಷಗಳು ಕರೆ ನೀಡಿವೆ.



ಪ್ರಶಾಂತ್ ಆರ್.
(ಕನ್ನಡಕ್ಕೆ : ಎಂ.ಜಿ.ವೆಂಕಟೇಶ)

ಸಾಮಾಜಿಕ ಮಾಧ್ಯಮ ಕೇಂದ್ರ ಅಥವಾ ಸಾಮೂಹಿಕ ಬೇಹುಗಾರಿಕಾ ಸಾಧನ?

ಈ ಪ್ರಾಜೆಕ್ಟಿನ ಉದ್ದೇಶ ಸರ್ಕಾರದ ವಿರುದ್ಧ ಇರುವ ಧ್ವನಿಗಳ ದಮನ. ಟೆಂಡರ್‌ನಲ್ಲಿ ಈ ಅಂಶ ನಿಚ್ಚಳವಾಗಿದ್ದು, ಅದು 'ವ್ಯಕ್ತಿಗತ ಸಾಮಾಜಿಕ ಮಾಧ್ಯಮ ಬಳಕೆದಾರರ ಅಕೌಂಟು'ಗಳ ಮೇಲೆ ನಿಗಾ ವಹಿಸುವುದೇ ಆಗಿದೆ. ಈಗಾಗಲೇ ಸರ್ಕಾರದ ನೀತಿಯ ವಿರುದ್ಧ ಮಾತನಾಡುವವರ ಮೇಲೆ ಆನ್‌ಲೈನ್‌ನಲ್ಲಿ 'ಟ್ರೋಲು'ಗಳ ಆಕ್ರೋಶದ ಸುರಿಮಳೆ ಆಗುತ್ತದೆ. ಇತ್ತೀಚಿನ ದಿನಗಳಲ್ಲಿ ಪತ್ರಕರ್ತರು, ಅಕಾಡೆಮಿಕ್ ವ್ಯಕ್ತಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಈ 'ಟ್ರೋಲು'ಗಳ ಕೋಪಕ್ಕೆ ಗುರಿಯಾಗಿದ್ದಾರೆ. ಈ ಹೊಸ ಪ್ರಾಜೆಕ್ಟ್‌ನ ಮೂಲಕ ಸರ್ಕಾರಕ್ಕೆ ವಿರೋಧವಾಗಿರುವ ವ್ಯಕ್ತಿಗಳನ್ನು ಅವರ ಮನಸ್ಥಿತಿಯ ಮತ್ತು ಅಭಿವ್ಯಕ್ತಿಗಳ ಸೂಕ್ಷ್ಮ ವಿಶ್ಲೇಷಣೆಗಳ ಮೂಲಕ ಗುರುತಿಸುವುದು ಮತ್ತು ಅವರ ವಿರುದ್ಧ ಆಕ್ರೋಶ ಪ್ರಯೋಗಿಸಲು ಅನುವು ಮಾಡಿಕೊಡುವ ಸಾಧನ. ಈಗಾಗಲೇ ಬಿಜೆಪಿಯ ವಿರೋಧಿಗಳ ಮೇಲೆ ದ್ವೇಷ ಕಾರಲು ಸ್ಥಾಪಿಸಿರುವ ಬಿಜೆಪಿಯ ಡಿಜಿಟಲ್ ಸೈನ್ಯದ ಕೆಲಸಕ್ಕೆ ಈ ಪ್ರಾಜೆಕ್ಟ್ ಪೂರಕವಾಗಿರುತ್ತದೆ.

ವಾರ್ತಾ ಮತ್ತು ಪ್ರಸಾರ ಇಲಾಖೆ ಇತ್ತೀಚೆಗೆ ಸಾಮಾಜಿಕ ಮಾಧ್ಯಮದ ಕೇಂದ್ರ ಸ್ಥಾಪಿಸಲು ಟೆಂಡರ್ ಕರೆದಿದೆ. ಇದು ಎನ್.ಡಿ.ಎ ಸರ್ಕಾರದಿಂದ ಜನತೆಯ ಹಕ್ಕುಗಳ ಮೇಲಿನ ಇತ್ತೀಚಿನ ಪ್ರಹಾರ. ಟೆಂಡರ್ ಪ್ರಕಾರ ಈ "ಹೊಸ ಮಾಧ್ಯಮ ಕಮಾಂಡ್ ಕೇಂದ್ರ"ವನ್ನು ಸ್ಥಾಪಿಸಲಾಗುತ್ತದೆ. "ವಿವಿಧ ವಿಷಯಗಳ ಬಗ್ಗೆ ಜನ ವ್ಯಕ್ತಪಡಿಸುತ್ತಿರುವ ಅಭಿಪ್ರಾಯಗಳ ಬಗ್ಗೆ 360 ಡಿಗ್ರಿ ಸಮಗ್ರ ನೋಟ ಕೊಡುವ" ಸಲುವಾಗಿ ಸ್ಥಾಪಿಸಲಾಗುತ್ತಿರುವ ಕಂಟ್ರೋಲ್ ರೂಂ ಇದು. ಆದರೆ ವಾಸ್ತವದಲ್ಲಿ ಅದರ ಉದ್ದೇಶ ಸಾಮಾಜಿಕ ಮಾಧ್ಯಮದಲ್ಲಿ ಬರುತ್ತಿರುವ ಭಿನ್ನಮತಿಯ ಅಭಿಪ್ರಾಯಗಳನ್ನು ಗುರುತಿಸಿ ಹತ್ತಿಕ್ಕುವುದಾಗಿದೆ.

ಪ್ರಾಜೆಕ್ಟ್‌ನ ಘೋಷಿತ ಉದ್ದೇಶ ಸರ್ಕಾರದ ಸ್ಕೀಂಗಳ ಉಪಯೋಗ ಎಲ್ಲರಿಗೂ ತಲುಪಲು ನಡೆಸುವ ಪ್ರಚಾರದ ಪರಿಣಾಮಕಾರಿತನವನ್ನು ತಿಳಿಯುವುದು ಮತ್ತು ಅದನ್ನು ಉತ್ತಮಪಡಿಸುವುದು. ಈ ಬಣ್ಣ ಬಣ್ಣದ ಶಬ್ದ ಜಾಲದ ಹಿಂದೆ ಈ ಎರಡು ಆಯಾಮಗಳನ್ನು ಒಳಗೊಂಡಿದೆ. ಒಂದು ಬೃಹತ್ ಬೇಹುಗಾರಿಕಾ ವ್ಯವಸ್ಥೆ ಮೂಲಕ ಜನರ ಸಾಧ್ಯವಿರುವ ಎಲ್ಲಾ ಸಂದೇಶಗಳ ಅಗಾಧ ಡೇಟಾ ಸಂಗ್ರಹಣೆ ಮತ್ತು ಅದರ ಆಧಾರದ ಮೇಲೆ ಜನರನ್ನು ವರ್ಗೀಕರಿಸುವುದು. ಎರಡನೇಯದಾಗಿ ಸಂಗ್ರಹಿಸಿದ ಡೇಟಾ ಮೂಲಕ ಜನರ ಇಚ್ಛೆಯನ್ನು ಅರಿಯುವುದು, ಹಾಗೂ ವ್ಯಕ್ತಿಗಳನ್ನು ಮತ್ತು ಗುಂಪುಗಳನ್ನು ಗುರಿಯಾಗಿರುವ ಪ್ರತಿಕ್ರಿಯೆಗಳನ್ನು ನೀಡುವುದು. ಅದಕ್ಕಾಗಿ ಆನ್‌ಲೈನ್ ಮುಖಾಂತರ ಅವರನ್ನು ತಲುಪುವುದು. ಜತೆಯಲ್ಲೇ ಪ್ರಭಾವಿಸಬಹುದಾದ ಮತ್ತು ಆನ್‌ಲೈನ್‌ನಲ್ಲಿ ಹಿಂಬಾಲಕರಿರುವವರನ್ನು ಗುರುತಿಸಿ ಸರ್ಕಾರದ ಅಜೆಂಡಾವನ್ನು ಪ್ರಚಾರಪಡಿಸುವುದಾಗಿದೆ.

ಈ ಪ್ರಾಜೆಕ್ಟನ್ನು ಜಾರಿ ಮಾಡಲು ಬ್ರಾಡ್‌ಕಾಸ್ಟ್ ಇಂಜಿನಿಯರಿಂಗ್ ಕನ್ಸಲ್ಟೆಂಟ್ ಇಂಡಿಯಾ ಲಿಮಿಟೆಡ್ ಈ ಪ್ರಾಜೆಕ್ಟ್‌ನಲ್ಲಿ ಈ 6 ಬೇಕಾಗುತ್ತವೆ – (1) ಸಾಮಾಜಿಕ ಮಾಧ್ಯಮ ವಿಶ್ಲೇಷಣಾ ಉಪಕರಣ (2) ವಿಶ್ಲೇಷಣಾ ವರದಿ ತಯಾರಿಕೆ (3) ಸಿಬ್ಬಂದಿ (4) ಮುಂದಾಗುವ ವಿಷಯಗಳ ವಿಶ್ಲೇಷಣೆ (5) ಜ್ಞಾನ ನಿರ್ವಹಣಾ ವ್ಯವಸ್ಥೆ. (6) ಖಾಸಗಿ ಡೇಟಾ (ಮಾಹಿತಿ) ಕೇಂದ್ರ.

ಸಾಮಾಜಿಕ ಮಾಧ್ಯಮ ಉಪಕರಣದ ಮೂಲಕ ಎಲ್ಲ ಪ್ರಮುಖ ಡಿಜಿಟಲ್ ಚಾನಲ್‌ಗಳಲ್ಲಿ (ಅಂದರೆ – ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಂ, ಲಿಂಕಡ್ ಇನ್, ಬ್ಲಾಗ್‌ಗಳಲ್ಲಿನ, ವಾರ್ತಾ ಚಾನಲ್‌ಗಳಲ್ಲಿನ) ಎಲ್ಲವನ್ನು "ಆಲಿಸುವುದು', ಎಲ್ಲಕ್ಕಿಂತ ಮುಖ್ಯವಾಗಿ ಇ–ಮೇಲ್‌ಗಳ ನಿಗಾ ವಹಿಸುವುದು – ಇವು ಮೇಲ್ನೋಟಕ್ಕೆ ಕಾಣುವಂತೆ ಸ್ಕೀಂಗಳ ಬಗ್ಗೆ ಜನಾಭಿಪ್ರಾಯದ ಸಂಗ್ರಹಣೆಗಾಗಿ ಅಲ್ಲ. ಮೊದಲ ಪ್ರಶ್ನೆ ಈ ಸಂದೇಶಗಳ ವಾಹಕಗಳಾದ ಜಾಗತಿಕ ದೈತ್ಯ ಕಂಪನಿಗಳು ಸರ್ಕಾರಕ್ಕೆ ಮಾಹಿತಿಯನ್ನು ಈ ಒದಗಿಸುತ್ತವೆಯೇ ಎಂಬುದರ ಬಗ್ಗೆ ಖಾತ್ರಿಯಿಲ್ಲ. ಅಮೆರಿಕಾದ ರಾಷ್ಟ್ರೀಯ ಭದ್ರತಾ ಸಂಸ್ಥೆ ಪ್ರಿಸಂ ಪ್ರಾಜೆಕ್ಟ್ ಮುಖಾಂತರ ಕಂಪನಿಗಳಿಂದ ಡೇಟಾ ಸಂಗ್ರಹಿಸಿರುವುದನ್ನು 2013 ರಲ್ಲಿ ಎಡ್ವರ್ಡ್ ಸ್ನೋಡೆನ್ ಬಹಿರಂಗ ಪಡಿಸಿದ್ದರು. ಆದರೆ ಈ ಬೃಹತ್ ಮಾಹಿತಿ ಸಂಗ್ರಹಕ್ಕೆ ಪೂರಕವಾಗಿ ಅಮೆರಿಕನ್ ಸರಕಾರಕ್ಕೆ ವಿದೇಶಿ ಗೂಡಚಾರಿ ಬೇಹುಗಾರಿಕಾ ಕಾನೂನಿನ ಬೆಂಬಲವಿತ್ತು. ಭಾರತದಲ್ಲಿ ಈ ರೀತಿಯ ಕಾನೂನು ಅಸ್ತಿತ್ವದಲ್ಲಿ ಇಲ್ಲವಾದ್ದರಿಂದ ಸಂಗ್ರಹಣೆ ಪ್ರಶ್ನೆಯೇ ಆಗಿ ಉಳಿಯಬಹುದು.

ಭಾರತದಲ್ಲಿ ಈಗಾಗಲೇ ದೂರಸಂಪರ್ಕ ಸಂಸ್ಥೆಗಳು ಸರ್ಕಾರದ ಜತೆಯಲ್ಲಿ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಸರ್ಕಾರ ಯಾವ ಸಮಯದಲ್ಲಿದರೂ ಅವನ್ನು ಪಡೆಯಬಹುದು ಮತ್ತು ಘಟನೆಯ ನಂತರ ಆ ಸಂಸ್ಥೆಗಳಿಗೆ ಮಾಹಿತಿ ನೀಡಿದರೆ ಸಾಕು. ಆದರೆ ಡಿಜಿಟಲ್ ಚಾನೆಲ್‌ಗಳ ಮೂಲಕ ಎಲ್ಲಾ ಮಾಹಿತಿ ಪಡೆಯುವ ಈ ಹೊಸ ಯೋಜನೆ ಬಳಕೆದಾರರ ಖಾಸಗೀತನಕ್ಕೆ ತೀವ್ರ ಆತಂಕಕಾರಿಯಾಗಿದೆ.


ಭಾರತದಲ್ಲಿ ಡೇಟಾ ಸುರಕ್ಷಾ ಕಾನೂನು ಲಭ್ಯವಿಲ್ಲ. ಶ್ರೀಕೃಷ್ಣ ಸಮಿತಿ ಈ ವಿಷಯದಲ್ಲಿ ಶ್ವೇತ ಪತ್ರವನ್ನು ಸಲ್ಲಿಸಿ ಈ ಕಾನೂನು ಜಾರಿಯಲ್ಲಿ ತೀವ್ರ ಕೊರತೆಯನ್ನು ಗಮನಿಸಿತು. ಕಳೆದ ವರ್ಷಗಳಲ್ಲಿ ಆಧಾರ್‌ನಲ್ಲಿನ ಮಾಹಿತಿ ಸೋರಿಕೆ ದುರ್ಬಳಕೆ ಕಂಡಿದೆ. ಇದೇ ರೀತಿ ಅಪಾಯ ಡಿಜಿಟಲ್ ಮಾಹಿತಿಗೂ ಒದಗುವ ಸಾಧ್ಯತೆಯಿದೆ. ಟೆಂಡರ್‌ನಲ್ಲಿ 'ಜ್ಞಾನ ನಿರ್ವಹಣಾ ಕೇಂದ್ರ', 'ಖಾಸಗಿ ಡೇಟಾ ಕೇಂದ್ರ'ಗಳ ಮತ್ತು ಸಾಮಾಜಿಕ ಮಾಧ್ಯಮ ವೇದಿಕೆ ಮುಖಾಂತರ ಸಂಗ್ರಹಿಸಿದ ಡೇಟಾಗಳ 'ಶೇಖರಣೆ'ಗಳ ಉದ್ದೇಶದಿಂದ ಇದು ಖಚಿತವಾಗುತ್ತದೆ.

'ಸಾಮಾಜಿಕ ಮಾಧ್ಯಮ ಉಪಕರಣ' ವಿವಿಧ ಭಾಷೆಗಳಲ್ಲಿನ ಮಾಹಿತಿ ಸಂಗ್ರಹಿಸಿ 'ರಾಷ್ಟ್ರೀಯ ಪ್ರಾಸೆಸಿಂಗ್ ಇಂಜಿನ್' ಮುಖಾಂತರ 'ಭಾವನೆ' ಮತ್ತು 'ಸಂದರ್ಭ' ಗುರುತಿಸುವುದು. ಆ ಮೂಲಕ ಸರಕಾರದ ಬೇಹುಗಾರಿಕೆಗೆ ಮತ್ತೊಂದು ಪದರ ಸೇರಿಸುವ ಉದ್ದೇಶ ಸ್ಪಷ್ಟ.

ಈ ಪ್ರಾಜೆಕ್ಟಿನ ಉದ್ದೇಶ ಸರ್ಕಾರದ ವಿರುದ್ಧ ಇರುವ ಧ್ವನಿಗಳ ದಮನ. ಟೆಂಡರ್‌ನಲ್ಲಿ ಈ ಅಂಶ ನಿಚ್ಚಳವಾಗಿದ್ದು 'ವ್ಯಕ್ತಿಗತ ಸಾಮಾಜಿಕ ಮಾಧ್ಯಮ ಬಳಕೆದಾರರ ಅಕೌಂಟು'ಗಳ ಮೇಲೆ ನಿಗಾ ವಹಿಸುವುದೇ ಆಗಿದೆ. ಈಗಾಗಲೇ ಸರ್ಕಾರದ ನೀತಿಯ ವಿರುದ್ಧ ಮಾತನಾಡುವವರ ಮೇಲೆ ಆನ್‌ಲೈನ್‌ನಲ್ಲಿ 'ಟ್ರೋಲು'ಗಳ ಆಕ್ರೋಶದ ಸುರಿಮಳೆ ಆಗುತ್ತದೆ. ಇತ್ತೀಚಿನ ದಿನಗಳಲ್ಲಿ ಪತ್ರಕರ್ತರು, ಅಕಾಡೆಮಿಕ್ ವ್ಯಕ್ತಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಈ 'ಟ್ರೋಲು'ಗಳ ಕೋಪಕ್ಕೆ ಗುರಿಯಾಗಿದ್ದಾರೆ. ಇಂತಹ ಬೆಂಕಿಯುಂಡೆ ಉಗುಳುವ ವ್ಯಕ್ತಿಗಳನ್ನು ಪ್ರಧಾನ ಮಂತ್ರಿಗಳು ಟ್ವೀಟರ್‌ನಲ್ಲಿ ಹಿಂಬಾಲಿಸುತ್ತಾರೆ. ಈ ಹೊಸ ಪ್ರಾಜೆಕ್ಟ್‌ನ ಮೂಲಕ ಸರ್ಕಾರಕ್ಕೆ ವಿರೋಧವಾಗಿರುವ ವ್ಯಕ್ತಿಗಳನ್ನು ಅವರ ಮನಸ್ಥಿತಿಯ ಮತ್ತು ಅಭಿವ್ಯಕ್ತಿಗಳ ಸೂಕ್ಷ್ಮ ವಿಶ್ಲೇಷಣೆಗಳ ಮೂಲಕ ಗುರುತಿಸುವುದು ಮತ್ತು ಅವರ ವಿರುದ್ಧ ಆಕ್ರೋಶ ಪ್ರಯೋಗಿಸಲು ಅನುವು ಮಾಡಿಕೊಡುವ ಸಾಧನ. ಈಗಾಗಲೇ ಬಿಜೆಪಿಯ ವಿರೋಧಿಗಳ ಮೇಲೆ ದ್ವೇಷ ಕಾರಲು ಸ್ಥಾಪಿಸಿರುವ ಬಿಜೆಪಿಯ ಡಿಜಿಟಲ್ ಸೈನ್ಯದ ಕೆಲಸಕ್ಕೆ ಈ ಪ್ರಾಜೆಕ್ಟ್ ಪೂರಕವಾಗಿರುತ್ತದೆ.

ಈ ವ್ಯವಸ್ಥೆ ಮುಂಬರುವ ಅಭಿಪ್ರಾಯಗಳನ್ನು ಮುಂಚೆಯೇ ವಿಶ್ಲೇಷಣೆ ಮೂಲಕ ಕಂಡುಕೊಂಡು ಆ ಬಗ್ಗೆ ಸಾರ್ವಜನಿಕವಾಗಿ 'ಸಕಾರಾತ್ಮಕ' ಅಭಿಪ್ರಾಯ ಮೂಡಿಸುವುದು. ರಾಷ್ಟ್ರವಾದದ ಪರವಾಗಿ ಭಾವನೆ ಮೂಡಿಸುವುದು ಮತ್ತು ಅದರ ವಿರುದ್ಧ ಮಾತನಾಡುವವರ ಮೇಲೆ ಸಮರ ಸಾರುವುದು. ಈಗಾಗಲೇ ಅರ್ಧಸತ್ಯಗಳು ಮತ್ತು ಸುಳ್ಳುಸುದ್ದಿಗಳನ್ನು ಸೃಷ್ಟಿಸಿ ಪ್ರವಾಹೋಪಾದಿಯಲ್ಲಿ ಹರಿಯ ಬಿಟ್ಟು ವ್ಯವಸ್ಥೆಯ ಪರವಾಗಿ ಬೆಂಬಲ ಪಡೆಯಲಾಗುತ್ತಿದೆ. ಪ್ರಧಾನಮಂತ್ರಿ ಆದಿಯಾಗಿ ಇಡೀ ಸರ್ಕಾರದ ಯಂತ್ರ ತಪ್ಪು ಮಾಹಿತಿ ನೀಡುವ ಮತ್ತು ಉದ್ರೇಕಿಸುವ ವಿಷಯಗಳನ್ನು ಬಿತ್ತರಿಸುತ್ತಿದೆ. ಇದೇ ಚಾಳಿ ಈ ಸ್ವಯಂ ಚಾಲಿತ ವ್ಯವಸ್ಥೆಯಲ್ಲಿ ಇನ್ನೂ ಮಾಹಿತಿ ಸಂಗ್ರಹಣೆ ಮುಖಾಂತರ ಆಳವಾಗುತ್ತದೆ.

ಚುನಾವಣೆಗೆ ಒಂದು ವರ್ಷವಿರುವಾಗ ಮತ್ತು ಜನರ ಅತೃಪ್ತಿ ಹೆಚ್ಚುತ್ತಿದ್ದು, ಅದು ಈಗಾಗಲೇ ಚುನಾವಣಾ ಫಲಿತಾಂಶಗಳಲ್ಲಿ ಪ್ರತಿಫಲಿಸಿದ್ದು, ರೈತ, ಕಾರ್ಮಿಕ ವರ್ಗದ ಸಾಮೂಹಿಕ ಕಾರ್ಯಾಚರಣೆ ತೀವ್ರವಾಗುತ್ತಿರುವ ಸಂದರ್ಭದಲ್ಲಿ ಈ ಪ್ರಾಜೆಕ್ಟ್ ಮುಖಾಂತರ ತನ್ನ ಪರವಾಗಿ ಧ್ವನಿ ಮೂಡಿಸುವುದಕ್ಕೆ ಕೇಂದ್ರ ಸರಕಾರ ನಡೆಸುತ್ತಿರುವ ವಿಫಲ ಯತ್ನವಾಗಿದೆ.



ವರದಿಗಳ ತಯಾರಿ ಮತ್ತು ಸಿಬ್ಬಂದಿ ನೇಮಕ ಈ ಪ್ರಾಜೆಕ್ಟಿನ ಪ್ರಮುಖ ಪ್ರಶ್ನೆ. ದೇಶದ ಉದ್ದ ಅಗಲಕ್ಕೂ 800 ಸಿಬ್ಬಂದಿ ಅವಶ್ಯಕತೆಯಿದ್ದು ಪ್ರತಿ ಜಿಲ್ಲೆಗೂ ಒಬ್ಬರಂತೆ 716 ಜಿಲ್ಲೆಗಳನ್ನು ಒಳಗೊಂಡಿದೆ. ಈ ಪ್ರಾಜೆಕ್ಟಿನ ಕ್ರಾಂಟ್ರಾಕ್ಟ್ ನೌಕರರು ಸಾಕಷ್ಟು ಅಧಿಕಾರ ಹೊಂದಿರುತ್ತಾರೆ. ಎಡ್ವರ್ಡ್ ಸ್ನೋಡೆನ್ ಸಹ ಇಂತಹ ಕಾಂಟ್ರಾಕ್ಟ್ ನೌಕರನಾಗಿದ್ದು ಹೇಗೆ ಅಮೇರಿಕಾದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ವೈಯುಕ್ತಿಕ ಕಾರಣಗಳಿಗೆ ದುರುಪಯೋಗ ಪಡಿಸಿಕೊಳ್ಳಲಾಗಿತ್ತು ಎಂಬುದನ್ನು ಬಹಿರಂಗಪಡಿಸಿದ್ದ. ಇಂಟರ್‌ನೆಟ್ ವ್ಯಾಪ್ತಿ ಹೆಚ್ಚುತ್ತಿರುವುದು ಮತ್ತು ಸಿಬ್ಬಂದಿ ಅಗಾಧ ಅಧಿಕಾರ ಹೊಂದಿರುವುದು ಭಾರತದ ಈ ಸನ್ನಿವೇಶದಲ್ಲಿ ಇಂತಹ ಕ್ರಮಗಳು ತೀವ್ರ ರಾಜಕೀಯ ಹಾಗೂ ಸಾಮಾಜಿಕ ಅಪಾಯಗಳನ್ನು ಹೊಂದಿವೆ.

ಇಂತಹ ಸಾಮೂಹಿಕ ಬೇಹುಗಾರಿಕೆ ಪ್ರಾರಂಭಿಸಲು 'ರಾಷ್ಟ್ರೀಯ ಭದ್ರತೆಗೆ ಅಪಾಯ' ಇತ್ಯಾದಿ ನೆಪಗಳನ್ನೂ ಒಡ್ಡುವ ಅಗತ್ಯವನ್ನು ಸಹ ಕಾಣದಷ್ಟು ಭಂಡತನವನ್ನು ಸರ್ಕಾರ ಪ್ರದರ್ಶಿಸಿದೆ. ಬದಲಾಗಿ ಜನರಿಂದ ತನ್ನ ಯೋಜನೆಗಳಿಗೆ ಹಿಮ್ಮಾಹಿತಿ (ಫೀಡ್ ಬ್ಯಾಕ್) ಪಡೆಯುವ ಕಾರಣವಿಟ್ಟುಕೊಂಡು ಕೋಟ್ಯಾಂತರ ಜನರ ಖಾಸಗಿ ಜೀವನದಲ್ಲಿ ಪ್ರವೇಶಿಸಲು ಹೊರಟಿದೆ. ಡಿಜಿಟಲ್ ಮತ್ತು ಸಾಮಾಜಿಕ ಮಾಧ್ಯಮದ ಮೂಲಕ ವ್ಯಕ್ತಿಗಳು ಕಳಿಸುವ ಪಡೆಯುವ ಸಂದೇಶಗಳು ಖಾಸಗಿ ಸ್ವರೂಪದವು. ಆನ್‌ಲೈನ್ ಭಾರತೀಯರ 'ಪ್ರತಿಕ್ರಿಯೆ'ಗಳನ್ನು ಪಡೆಯುವ ಈ ವ್ಯವಸ್ಥೆ ವಿನಾಶಕಾರಿಯಾಗಲಿದೆ.

ಜಾಗತಿಕ ಮಟ್ಟದಲ್ಲಿ ಯುರೋಪಿಯನ್ ರಾಷ್ಟ್ರಗಳಲ್ಲಿ ಬಲವಾದ ಸಾಮಾನ್ಯ ಡೇಟಾ ರಕ್ಷಣಾ ಕಾನೂನು ಬಂದಿರುತ್ತದೆ. ಇದರ ಮೂಲಕ ಬಳಕೆದಾರರಿಗೆ ಮಾಹಿತಿ ಸಂಗ್ರಹಿಸಿದ ಖಾಸಗಿ ಕಂಪನಿ ಮೇಲೆ ನಿಯಂತ್ರಣವಿರುತ್ತದೆ. ಈಗಾಗಲೇ ಫೇಸ್‌ಬುಕ್ ಮತ್ತು ಇತರೇ ಸಂಸ್ಥೆಗಳು ಖಾಸಗಿ ಮಾಹಿತಿ ಸಂಗ್ರಹಿಸಿ ಅದರ ದುರ್ಬಳಕೆ ಮಾಡಿರುವುದರ ವಿರುದ್ಧ ಕ್ರೇಂಬ್ರಿಡ್ಜ್ ಅನಾಲಿಟಿಕಾ ಹಗರಣದ ನಂತರ ತೀವ್ರ ಆಕ್ರೋಶ ಮೂಡಿದೆ. ಜಗತ್ತು ಬಳಕೆದಾರರ ಮಾಹಿತಿ ಸಾರ್ವಭೌಮತ್ವದತ್ತ ಸಾಗುತ್ತಿದ್ದರೆ, ಭಾರತ ಅದರ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ. ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಖಾಸಗಿತನ ಮೂಲಭೂತ ಹಕ್ಕೆಂದು ಹೇಳಿರುವ ಬೆನ್ನಲ್ಲೇ ಇದು ಬಂದಿರುವುದು ವ್ಯಂಗ್ಯ. ಸರ್ಕಾರ ಕೋರ್ಟಿನ ಮುಂದೆ ಖಾಸಗಿತನ ಮೂಲಭೂತ ಹಕ್ಕು ಅಲ್ಲವೆಂದು ಪ್ರತಿಪಾದಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ.


ಕಡೆಯದಾಗಿ ಈ ಪ್ರಾಜೆಕ್ಟ್ ಕಾರ್ಯಗೊಳಿಸಲು ತಾಂತ್ರಿಕ ಸಾಧ್ಯತೆಗಳ ಬಗ್ಗೆ ಬಲವಾದ ಸಂದೇಹವಿದೆ. ಆದರೂ ಸರ್ಕಾರದ ತನ್ನ ಈ ನಾಚಿಕೆಗೇಡಿನ ಕ್ರಮದ ಮೂಲಕ, ಅದೂ ರಾಷ್ಟ್ರೀಯತೆ ಮತ್ತು ಅಭಿವೃದ್ಧಿಯ ನೆಪದಲ್ಲಿ, ಭಿನ್ನ ಧ್ವನಿಗಳನ್ನು ಗುರುತಿಸಿ ಅವುಗಳನ್ನು ದಾಳಿಗೆ ಗುರಿ ಮಾಡಲು ಹೊರಟಿದೆ. ಜನತೆ ಎದುರಿಸುತ್ತಿರುವ ಪ್ರಶ್ನೆಗಳ ಬಗ್ಗೆ ಕಠಿಣ ಸವಾಲುಗಳಿಂದ ತಪ್ಪಿಸಿಕೊಳ್ಳುವ ಮೋದಿ ಸರ್ಕಾರ ಮತ್ತು ಬಿಜೆಪಿಯ ಧೋರಣೆಗೆ ಈ ಟೆಂಡರ್ ಒಂದು ಜ್ವಲಂತ ಉದಾಹರಣೆ. ●



ಜನಗಳ ಬದುಕುಗಳು ಮತ್ತು ಭವಿಷ್ಯಗಳಿಗೆ ಸಂಚಕಾರ

ಅಧಿಕಾರದಲ್ಲಿ ನಾಲ್ಕು ವರ್ಷಗಳನ್ನು ಪೂರೈಸಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ 2014ರಲ್ಲಿ ಅಧಿಕಾರಕ್ಕೆ ಬರುವ ಮೊದಲು ಜನಗಳ ಶಿಕ್ಷಣ ಮತ್ತು ಆರೋಗ್ಯದ ಬಗ್ಗೆಯೂ ಚುನಾವಣಾ ಪ್ರಚಾರದಲ್ಲಿ, ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮತ್ತು ಅಧಿಕಾರ ವಹಿಸಿಕೊಂಡ ಮೇಲೂ ಆಶ್ವಾಸನೆಗಳ ಮೇಲೆ ಆಶ್ವಾಸನೆಗಳನ್ನು ಕೊಟ್ಟಿತ್ತು.. ಅವೂ ಒಣ ಬೊಗಳೆಗಳಾಗಿಯೇ ಉಳಿದಿವೆ. ಸಿಪಿಐ(ಎಂ) ಕೇಂದ್ರ ಸಮಿತಿ ಪ್ರಕಟಿಸಿರುವ ನಾಲ್ಕು ಕಿರುಪುಸ್ತಕಗಳಲ್ಲಿ ನಾಲ್ಕನೆಯದು ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಆರೋಗ್ಯ ಕ್ಷೇತ್ರದಲ್ಲೂ ಜನಸಾಮಾನ್ಯರ ಆಕಾಂಕ್ಷೆಗಳು–ನಿರೀಕ್ಷೆಗಳನ್ನು ಮರೆತು ಖಾಸಗಿ ಕುಳಗಳಿಗಾಗಿಯೇ ಹೇಗೆ ಕೆಲಸ ಮಾಡಿದೆ ಎಂಬುದನ್ನು ಪರಿಶೀಲಿಸಿದೆ. ಇದರೊಡನೆ ಆಹಾರ ಭದ್ರತೆಯನ್ನು ಅಭದ್ರಗೊಳಿಸಿ, ಪರಿಸರವನ್ನು ಧಿಕ್ಕರಿಸಿ ಮತ್ತು ವಿಜ್ಞಾನವನ್ನು ಬುಡಮೇಲು ಮಾಡುತ್ತ ಅವೈಜ್ಞಾನಿಕತೆಯನ್ನು ಪೋಷಿಸಿ ಹೇಗೆ ಜನಗಳ ಬದುಕನ್ನು ಮತ್ತು ಭವಿಷ್ಯವನ್ನು ಗಂಡಾಂತರಕ್ಕೀಡು ಮಾಡಿದೆ ಎಂಬುದರ ಒಂದು ಚಿತ್ರವನ್ನು ನೀಡಿದೆ.

ಈ ಸಂಚಿಕೆಯಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಷೇತ್ರದಲ್ಲಿ ಕಳೆದ ನಾಲ್ಕು ವರ್ಷಗಳ ಬೆಳವಣಿಗೆಗಳ ಕುರಿತ ವಿಶ್ಲೇಷಣೆಗಳ ಸಾರಾಂಶವನ್ನು ನೀಡಲಾಗಿದೆ.



ಶಿಕ್ಷಣ : ಖಾಸಗಿ ದುರಾಸೆಗೆ ಗ್ರಾಸ ಮತ್ತು ಕೇಸರಿ ಅಜೆಂಡಾಕ್ಕೆ ತುತ್ತು

ಕಳೆದ ನಾಲ್ಕು ವರ್ಷಗಳು ಶಿಕ್ಷಣ ಕ್ಷೇತ್ರದಲ್ಲಿ ಸರಕಾರವೇ ಹಲವು ಹಾವಳಿಗಳನ್ನು ಮಾಡಿದ ವರ್ಷಗಳು–ಶಿಕ್ಷಣ ಕ್ಷೇತ್ರಕ್ಕೆ ನಿಧಿ ಕಡಿತ, ಕ್ಯಾಂಪಸ್ ಪ್ರಜಾಪ್ರಭುತ್ವದ ಮೇಲೆ ಒಂದಾದ ಮೇಲೊಂದರಂತೆ ಹಲ್ಲೆಗಳು,ಇನ್ನಷ್ಟು ಕೇಂದ್ರೀಕರಣದ ಪ್ರಯತ್ನಗಳು, ಶಿಕ್ಷಣದ ಮತ್ತಷ್ಟು ಖಾಸಗೀಕರಣ/ವ್ಯಾಪಾರೀಕರಣ ಮತ್ತು ಕೇಸರೀಕರಣ.

ನಿಧಿ ಕಡಿತ:

ಭಾರತದಲ್ಲಿ ಶಿಕ್ಷಣಕ್ಕೆ ಹಣ ನೀಡಿಕೆ ಮೊದಲಿಂದಲೂ ಬಹಳ ಕಡಿಮೆಯೇ. 1964ರಲ್ಲಿ ನೇಮಿಸಿದ ದೌಲತ್‌ಸಿಂಗ್ ಕೊಠಾರಿ ಅಧ್ಯಕ್ಷತೆಯ ಭಾರತೀಯ ಶಿಕ್ಷಣ ಆಯೋಗ ಶಿಕ್ಷಣ ಕ್ಷೇತ್ರದ ಆವಶ್ಯಕತೆಗಳ ಆಮೂಲಾಗ್ರ ಅಧ್ಯಯನದ ನಂತರ 1966ರಲ್ಲೇ ಜಿಡಿಪಿಯ 6% ಖರ್ಚು ಮಾಡಬೇಕು ಎಂದು ಶಿಫಾರಸು ಮಾಡಿತು. ಆದರೆ ಈಗಲೂ, 52 ವರ್ಷಗಳ ನಂತರವೂ ಅದು, 2017–18ರ ಆರ್ಥಿಕ ಸರ್ವೇಕ್ಷಣೆಯ ಪ್ರಕಾರ, ಕೇವಲ ಜಿಡಿಪಿಯ 2.7%.

ಅಂದರೆ **'ಅಚ್ಛೇ ದಿನ್'ಗಳ ಆಶ್ವಾಸನೆ ಕೊಟ್ಟ ಸರಕಾರವೂ ಅದನ್ನು 6%ದತ್ತ ಏರಿಸುವ ಪ್ರಯತ್ನವನ್ನೂ ಮಾಡಿಲ್ಲ, ಮಾತ್ರವಲ್ಲ, ಇನ್ನಷ್ಟು ಕಡಿಮೆ ಮಾಡಿದೆ.**

ಶಿಕ್ಷಣ ರಂಗಕ್ಕೆ ಕೇಂದ್ರ ಸರಕಾರದ ಬಜೆಟ್ ನೀಡಿಕೆಯ ಪ್ರಮಾಣವನ್ನು ನೋಡಿ–ಸತತವಾಗಿ ಇಳಿಯುತ್ತ ಬಂದಿದೆ:

ವರ್ಷ	ಕೇಂದ್ರ ಬಜೆಟಿನ %	ಜಿಡಿಪಿಯ %
2013–14	4.77	0.71
2014–15	4.61	0.67
2015–16	3.89	0.50
2016–17	3.66	0.48
2017–18	3.71	0.47
2018–19	3.48	0.45

ಶಾಲಾ ಶಿಕ್ಷಣ: ಕೋಟ್ಯಂತರ ಭಾರತೀಯ ಜನಸಾಮಾನ್ಯರ ಸಾರ್ಥಕ ಬದುಕು ರೂಪಿಸಲು ಅತ್ಯಗತ್ಯವಾದ ಶಾಲಾ ಶಿಕ್ಷಣದ ಹೊಣೆಯನ್ನೂ ಬಿಜೆಪಿ ನಿಭಾಯಿಸಲು ಸಿದ್ಧವಿಲ್ಲ. ಉದಾ: ಬಿಜೆಪಿ ಆಳ್ವಿಕೆಯ ರಾಜಸ್ಥಾನದಲ್ಲಿ ಈ ವರ್ಷದಿಂದ 300 ಮಾಧ್ಯಮಿಕ ಮತ್ತು ಉಚ್ಚ ಮಾಧ್ಯಮಿಕ ಸರಕಾರೀ ಶಾಲೆಗಳನ್ನು ಪಿ.ಪಿ.ಪಿ.(ಸಾರ್ವಜನಿಕ–ಖಾಸಗಿ ಭಾಗೀದಾರಿಕೆ) ಎಂಬ ಹೆಸರಿನಲ್ಲಿ ಖಾಸಗಿಯವರ ಲೂಟಿಗೆ ಕೊಡಮಾಡಲಾಗುತ್ತಿದೆ. ಇದು ಮಾಧ್ಯಮಿಕ ಶಿಕ್ಷಣವನ್ನು ದುಬಾರಿಗೊಳಿಸಿ ಜನಸಾಮಾನ್ಯರಿಗೆ ಎಟುಕದಂತೆ ಮಾಡುವುದರೊಂದಿಗೆ, ಸುಮಾರು 15 ಸಾವಿರ ಶಾಲಾಶಿಕ್ಷಕರ ಮಧ್ಯಾಹ್ನದ ಊಟದ ನೌಕರರು ಕೆಲಸ ಕಳೆದುಕೊಳ್ಳುವಂತೆ ಮಾಡುತ್ತಿದೆ ಎನ್ನಲಾಗಿದೆ.

* ಕಳೆದ ವರ್ಷ, ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ಕಾರ್ಪೊರೇಟ್ ಮ್ಯಾನೇಜ್‌ಮೆಂಟ್





ಮಾದರಿಯಲ್ಲಿ, 30ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ನಡೆಸುವುದು ಸಮರ್ಥನೀಯವಲ್ಲ ಎನ್ನುತ್ತ ಅದಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳ ವಿಲೀನ ಮಾಡುವ ಪ್ರಸ್ತಾಪವನ್ನು ಇಟ್ಟಿತ್ತು. ಇದರರ್ಥ, ದೂರದ ಊರುಗಳಲ್ಲಿ ಬುಡಕಟ್ಟು ಅಥವ ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ ಶಿಕ್ಷಣಕ್ಕೆಂದು ತೆರೆದ ಶಾಲೆಗಳನ್ನು ಮುಚ್ಚಿ, ಅವರನ್ನು ಮತ್ತೆ ಶಿಕ್ಷಣ ವಂಚಿತರನ್ನಾಗಿ ಮಾಡುವ ಹುನ್ನಾರ.

* ಬಡ ಸಮುದಾಯಗಳ ಮಕ್ಕಳು ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಡುವ ಮಧ್ಯಾಹ್ನದ ಊಟಕ್ಕೆ ನೀಡುವ ಅನುದಾನಗಳಲ್ಲೂ ಕಡಿತ ಮಾಡಿರುವುದು ಅವರನ್ನು ಶಿಕ್ಷಣ ವಂಚಿತರಾಗಿಸುವ ಮತ್ತೊಂದು ಕ್ರಮ.
* ಸರಕಾರಿ ಶಾಲೆಗಳನ್ನು ವಿವಿಧ ನೆವಗಳಲ್ಲಿ ಮುಚ್ಚಿ ಜನಗಳನ್ನು ಖಾಸಗಿ ಶಾಲೆಗಳ ಲೂಟಿಗೆ ಒಳಪಡಿಸಲಾಗುತ್ತಿದೆ. **ಇಡೀ ದೇಶದಲ್ಲಿ ಕೇರಳದಲ್ಲಿ ಮಾತ್ರವೇ ಎಲ್‌ಡಿಎಫ್ ಸರಕಾರದ ಕ್ರಮಗಳಿಂದಾಗಿ ಸರಕಾರೀ ಶಾಲೆಗಳಲ್ಲಿ ದಾಖಲಾತಿ ಹೆಚ್ಚುತ್ತಿದೆ**(ಈ ಸಂಚಿಕೆಯಲ್ಲಿ ಪುಟ 14ರಲ್ಲಿನ ಸುದ್ದಿ ನೋಡಿ).

ಉನ್ನತ ಶಿಕ್ಷಣದಲ್ಲೂ ಕಡಿತ: ನಿಧಿ ಕಡಿತಕ್ಕೆ ಅನುಗುಣವಾಗಿ ಉನ್ನತ ಶಿಕ್ಷಣವನ್ನು ಪ್ರವೇಶಿಸುವ ವಿದ್ಯಾರ್ಥಿಗಳ ಸಂಖ್ಯೆಯನ್ನೂ ನಿಯಂತ್ರಿತ ಗೊಳಿಸುವ ಪ್ರಯತ್ನವೂ ನಡೆದಿದೆ. ಇದರಿಂದಾಗಿ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ರಂಗ ಪ್ರವೇಶಿಸ ಬಯಸುವವರ ಸಂಖ್ಯೆಯಲ್ಲಿ ಕಡಿತವಾಗಿದೆ. ಈ ಕಡಿತ ಬಡ ವಿಭಾಗಗಳನ್ನೇ ತಟ್ಟುವುದು ಎಂದು ಬೇರೆ ಹೇಳಬೇಕಾಗಿಲ್ಲ.

ಉದಾ: ಜೆಎನ್‌ಯುನಲ್ಲಿ 1000 ಎಂಫಿಲ್ ಮತ್ತು ಪಿಹೆಚ್‌ಡಿ ಸೀಟುಗಳಲ್ಲಿ ಕಡಿತವಾಗಿದೆ. ವಿವಿಗಳಲ್ಲಿ ಅವೆಷ್ಟೋ ಅಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡದೆ ಖಾಲಿ ಬಿಡಲಾಗುತ್ತಿದೆ.

* ತಾಂತ್ರಿಕ ಶಿಕ್ಷಣದಲ್ಲಿ ಅಧ್ಯಾಪಕ: ವಿದ್ಯಾರ್ಥಿ ಅನುಪಾತವನ್ನು 1:15 ರಿಂದ 1:20ಕ್ಕೆ ಹೆಚ್ಚಿಸಿ ತಾಂತ್ರಿಕ ಶಿಕ್ಷಣದ ಗುಣಮಟ್ಟವನ್ನು ಇಳಿಸಲಾಗುತ್ತಿದೆ.
* ಸಿಎಸ್‌ಐಆರ್ ಪ್ರಯೋಗಾಲಯಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಅನುದಾನಗಳಲ್ಲಿ ಕಡಿತ ಮಾಡಲಾಗಿದೆ. ಸಂಶೋಧನಾ ವಿದ್ಯಾರ್ಥಿಗಳಿಗೆ

ಪುಟ 10 ನೋಡಿ

'ಸಮೃದ್ಧ ಭಾರತ ಸ್ವಸ್ಥ ಭಾರತ' ಜನಸಾಮಾನ್ಯರಿಗಲ್ಲ, ಕಾರ್ಪೊರೇಟ್ ಆಸ್ಪತ್ರೆಗಳಿಗೆ ಮಾತ್ರ

ಎಲ್ಲರಿಗೂ ಲಭ್ಯವಾಗುವ, ಎಲ್ಲರ ಕೈಗೆಟಕುವ ಪರಿಣಾಮಕಾರಿ ಆರೋಗ್ಯ ರಕ್ಷಣೆಯ ವ್ಯವಸ್ಥೆಯನ್ನು ತರಲಾಗುವುದು– ಇದು 2014ರ ಚುನಾಣಾ ಪ್ರಚಾರದ ವೇಳೆಯಲ್ಲಿ ಬಿಜೆಪಿ ನೀಡಿದ್ದ ಇನ್ನೊಂದು ಆಶ್ವಾಸನೆ. ನಾಲ್ಕು ವರ್ಷಗಳು ಮುಗಿಯುತ್ತಿದ್ದಂತೆ 'ಆಯುಷ್ಮಾನ್ ಭಾರತ' ಎಂಬ ಭವ್ಯ ಹೆಸರಿನ ಸ್ಕೀಮನ್ನು ಪ್ರಕಟಿಸಲಾಗಿದೆ. ಇದು 50 ಕೋಟಿ ಜನಗಳಿಗೆ ಆರೋಗ್ಯವಿಮೆಯ ರಕ್ಷಣೆ ನೀಡುತ್ತೇನೆನ್ನುವ ಸ್ಕೀಂ. ಇದನ್ನು ಪ್ರಕಟಿಸುವಾಗ ಇನ್ನೊಂದು



ವ್ಯಂಗ್ಯಚಿತ್ರ: ಮಂಜುಲ್

ಘೋಷಣೆಯನ್ನೂ ಕೊಡಲಾಗಿದೆ–'ಸ್ವಸ್ಥ ಭಾರತ–ಸಮೃದ್ಧ ಭಾರತ'.

ಸಮೃದ್ಧ ಭಾರತ ಸಿಕ್ಕಿರುವುದು ಜನಸಾಮಾನ್ಯರಿಗಂತೂ ಅಲ್ಲ ಎಂಬುದೀಗ ಹೆಚ್ಚೆಚ್ಚು ಸ್ಪಷ್ಟವಾಗಿದೆ–ಅದೇ ರೀತಿಯಲ್ಲಿ ಸ್ವಸ್ಥ ಭಾರತ ಎಂಬುದು ಕೂಡ ವಿಮಾ ಕಾರ್ಪೊರೇಟ್‌ಗಳ ಆರ್ಥಿಕ ಆರೋಗ್ಯಕ್ಕಷ್ಟೇ ಎಂಬುದೂ ಸ್ಪಷ್ಟವಾಗುತ್ತಿದೆ.

ಆರೋಗ್ಯ ರಕ್ಷಣೆಗಾಗಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಉತ್ತಮಪಡಿಸುವ ಬದಲು, ಅದಕ್ಕೆ ನೀಡುವ ಹಣದಲ್ಲಿ ಮತ್ತಷ್ಟು ಕಡಿತ ತರುವುದು ಮತ್ತು ವಿಮಾರಕ್ಷಣೆಯ ಮಾರ್ಗದಲ್ಲಿ ವಿಮಾ ಕಂಪನಿಗಳ ಖಜಾನೆಗಳಿಗೆ ಹಣ ವರ್ಗಾವಣೆ ಮಾಡಿ ಜನಗಳನ್ನು ಅವುಗಳ ಶೋಷಣೆಗೆ ಗುರಿ ಮಾಡುವುದು–ಇದು ಈ ರಂಗದಲ್ಲೂ ಕಳೆದ ನಾಲ್ಕು ವರ್ಷಗಳಲ್ಲಿ ಕಂಡು ಬಂದಿರುವ ಸಂಗತಿ.

ಸಾರ್ವಜನಿಕ ವೆಚ್ಚದಲ್ಲಿ ಕಡಿತ

* ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಒದಗಿಸಬೇಕಾದ ರಾಷ್ಟ್ರೀಯ ಆರೋಗ್ಯ ಮಿಷನ್(ಎನ್‌ಹೆಚ್‌ಎಂ) ಗೆ ಬಜೆಟ್ ನೀಡಿಕೆಯ ಮೊತ್ತ 2017–18ರ ರೂ.30,801 ಕೋಟಿ ಈಗ ಹೆಚ್ಚುವ ಬದಲು 30,129 ಕೋಟಿಗಿಳಿದಿದೆ.
* ಪುನರುತ್ಪಾದಕ ಮತ್ತು ಮಕ್ಕಳ ಆರೋಗ್ಯ(ಆರ್‌ಸಿಹೆಚ್)ಗೆ ಹಣ ನೀಡಿಕೆ 7545 ಕೋಟಿ ರೂ.ಗಳಿಂದ 5253 ಕೋಟಿ ರೂ.ಗಳಿಗೆ ಇಳಿಕೆ–30% ಕಡಿತ
* ಸಾಂಕ್ರಾಮಿಕ ರೋಗ ತಡೆಗೆ 27% ಕಡಿತ: 2648 ಕೋಟಿಯಿಂದ 1928 ಕೋಟಿ ರೂ.
* ಹೆರಿಗೆ ಸೌಲಭ್ಯ ಯೋಜನೆಗೆ 7.5% ಕಡಿತ: 2595 ಕೋಟಿಯಿಂದ 2400 ಕೋಟಿ ರೂ.ಗಳಿಗೆ
* ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ಮಟ್ಟಕ್ಕೇರಿಸಿ 24 ಹೊಸ ಮೆಡಿಕಲ್ ಕಾಲೇಜುಗಳನ್ನು ತೆರೆಯುವುದಾಗಿ ಹೇಳಿದ್ದರೂ, ಇದಕ್ಕೆ ನಿಗದಿ ಮಾಡಿರುವ ಹಣದಲ್ಲಿಯೂ 12% ಕಡಿತ: 3300 ಕೋಟಿ ರೂ.ಗಳಿಂದ 2888 ಕೋಟಿ ರೂ.ಗೆ ಇಳಿಕೆ.

ಬಿಜೆಪಿ ಆಳ್ವಿಕೆಯ ಹೊಸ ಮಾದರಿಯಾಗಿ ಮೂಡಿ ಬಂದ ಉತ್ತರಪ್ರದೇಶದಲ್ಲಿ ಯೋಗಿ ಸರಕಾರ ಮಿದುಳು ರೋಗ ತಡೆಗೆ ಹಣನೀಡಿಕೆಯನ್ನು 10.19 ಕೋಟಿ ರೂ.ಗಳಿಂದ 5.78 ಕೋಟಿ ರೂ.ಗೆ ಇಳಿಸಿತು. **ಮುಖ್ಯಮಂತ್ರಿಗಳ ಕ್ಷೇತ್ರ ಗೋರಖ್‌ಪುರದಲ್ಲಿ ಆಕ್ಸಿಜನ್ ಸಿಲಿಂಡರುಗಳ ಕೊರತೆಯಿಂದ 72 ಮಕ್ಕಳು ಅಸು ನೀಗಿರುವುದು** ಬಿಜೆಪಿಯ 'ಸ್ವಸ್ಥ ಭಾರತ'ದ ಮಾದರಿಯನ್ನೂ ತೋರಿಸಿ ಕೊಟ್ಟಿದೆ.

ಸಾರ್ವಜನಿಕ ಆರೋಗ್ಯ ಸೌಲಭ್ಯಗಳಲ್ಲಿ ಕಡಿತ:

* ಗ್ರಾಮೀಣ ಆರೋಗ್ಯ ಅಂಕಿ–ಅಂಶಗಳ ಪ್ರಕಾರ

ಪುಟ 10 ನೋಡಿ



ಶಿಕ್ಷಣ: ಖಾಸಗಿ ದುರಾಸೆಗೆ ಗ್ರಾಸ ಮತ್ತು ಕೇಸರಿ ಅಜೆಂಡಾಕ್ಕೆ ತುತ್ತು



ಪುಟ 9 ರಿಂದ

ಯುಜಿಸಿ ಫೆಲೋಶಿಪ್‌ಗಳು ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ. ಕೇಂದ್ರ ಸರಕಾರದ ನೀಡಿಕೆಯಿಲ್ಲದ್ದರಿಂದ ಮೆಟ್ರಿಕೋತ್ತರ ಶಿಕ್ಷಣ ಫೆಲೋಶಿಪ್‌ಗಳೂ ಸಿಗುತ್ತಿಲ್ಲ.

ಶಿಕ್ಷಣದ ವ್ಯಾಪಾರೀಕರಣ:

ಒಂದೆಡೆಯಲ್ಲಿ ಶಿಕ್ಷಣದ ಖಾಸಗೀಕರಣಕ್ಕೆ ಹೆಚ್ಚಿನ ಒತ್ತು ನೀಡುತ್ತಲೇ, ಸಾರ್ವಜನಿಕ ಶಿಕ್ಷಣದ ವ್ಯಾಪಾರೀಕರಣದತ್ತವೂ ಹೆಚ್ಚಿನ ಗಮನ ಮೋದಿ ಸರಕಾರದ ನಾಲ್ಕು ವರ್ಷಗಳ ವಿಶೇಷ 'ಸಾಧನೆ'.

* ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಿಗೆ ಅನುದಾನಗಳ ಬದಲು ಸಾಲ ನೀಡಲು 'ಉನ್ನತ ಶಿಕ್ಷಣ ನಿಧಿನೀಡಿಕೆ ಸಂಸ್ಥೆ'(ಹೆಚ್‌ಇಎಫ್‌ಎ) ರಚಿಸಲಾಗಿದೆ. ಈ ಸಾಲಗಳನ್ನು ಪಡೆಯುವ ಶಿಕ್ಷಣ ಸಂಸ್ಥೆಗಳು ಇವನ್ನು 'ಆಂತರಿಕ ಸಂಚಯ'ಗಳ ಮೂಲಕ ಮರುಪಾವತಿ ಮಾಡಬೇಕು. ಈ ಆಂತರಿಕ ಸಂಚಯಗಳೆಂದರೆ ಶುಲ್ಕಗಳು, ಸಂಶೋಧನಾ ಗಳಿಕೆಗಳು ಇತ್ಯಾದಿ. ಇದರ ಅರ್ಥ ಶುಲ್ಕಗಳನ್ನು ಹೆಚ್ಚಿಸಬೇಕು, ಸಂಶೋಧನೆಗಳಿಂದ ಗಳಿಕೆ ಮಾಡಲು ಖಾಸಗಿಯವರೊಂದಿಗೆ ವ್ಯವಹರಿಸಬೇಕು. ಈ ಮೂಲಕ **ಶಿಕ್ಷಣದ ಸಾರ್ವಜನಿಕ ಸ್ವರೂಪವನ್ನೇ ಬದಲಿಸಿ ಅದನ್ನೊಂದು 'ಸರಕು' ಮಾಡಲಾಗುತ್ತಿದೆ. ಮತ್ತು ಈ 'ಸರಕು' ಬಡವರು, ವಂಚಿತ ಸಮುದಾಯಗಳಿಗೆ ಎಟುಕದಂತಾಗುತ್ತಿದೆ.** ಈ ಹೆಚ್‌ಇಎಫ್‌ಎ ಈಗಾಗಲೇ ಮುಂಬೈ,ದಿಲ್ಲಿ, ಮದ್ರಾಸ್, ಖರಗ್‌ಪುರ್ ಮತ್ತು ಕಾನ್ಪುರದ ಐಐಟಿಗಳಿಗೆ, ಸುರತ್ಕಲ್‌ನ ಎನ್‌ಐಟಿಗೆ 'ಪ್ರಾಜೆಕ್ಟ್'ಗಳನ್ನು ಮಂಜೂರು ಮಾಡಿದೆಯಂತೆ.
* ಹಿಂದಿನ ಯುಪಿಎ–2 ಸರಕಾರದ ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್'(ಆರ್‌ಯುಎಸ್‌ಎ) ಎಂಬುದು ಶಿಕ್ಷಣದ ವ್ಯಾಪಾರೀಕರಣದತ್ತ ಹೆಜ್ಜೆಯಿಟ್ಟಿತ್ತು. ಅದನ್ನು ಮೋದಿ ನೇತೃತ್ವದ ಸರಕಾರ ಇನ್ನೂ ಮುಂದೊಯ್ದು ಶಿಕ್ಷಣದ ವ್ಯಾಪಾರೀಕರಣದ ವಾಹಕವಾಗಿ ಮಾಡುತ್ತಿದೆ.

ಕೇಂದ್ರೀಕರಣದತ್ತ ದಾಪುಗಾಲು:

ಒಂದೆಡೆ ಖಾಸಗೀಕರಣ/ ವ್ಯಾಪಾರೀಕರಣ, ಇದಕ್ಕೆ ಸಮಾನಾಂತರವಾಗಿ ಉನ್ನತ ಶಿಕ್ಷಣದ ಕೇಂದ್ರೀಕರಣದ ಪ್ರಯತ್ನಗಳು ಈ ನಾಲ್ಕು ವರ್ಷಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿವೆ. ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ) ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ(ಎಐಸಿಟಿಇ)ಗಳನ್ನು ರದ್ದು ಮಾಡಿ ಅವುಗಳ ಜಾಗದಲ್ಲಿ 'ಉನ್ನತ ಶಿಕ್ಷಣ ಸಬಲೀಕರಣ ನಿಯಂತ್ರಣ ಏಜೆಂಸಿ'(ಹೆಚ್‌ಇಇಆರ್‌ಎ–ಹೀರಾ) ಎಂಬುದನ್ನು ರಚಿಸಬೇಕೆಂದು ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಮಂತ್ರಾಲಯ ಸೂಚಿಸಿತ್ತು. ಇದಕ್ಕೆ ಎಲ್ಲೆಡೆಗಳಿಂದ ಪ್ರತಿಭಟನೆಗಳು ಬಂದವು.

ಈಗ ಯುಜಿಸಿಯನ್ನು ರದ್ದು ಮಾಡಿ 'ಭಾರತ ಉನ್ನತ ಶಿಕ್ಷಣ ಆಯೋಗ'(ಹೆಚ್‌ಇಸಿಐ)ರಚಿಸುವ ಬಗ್ಗೆ ಮಸೂದೆಯೊಂದನ್ನು ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ತರಾತುರಿಯಲ್ಲಿ ಮಂಡಿಸಲಾಗುತ್ತಿದೆ. ಇದು ಶಿಕ್ಷಣದ ವ್ಯಾಪಾರೀಕರಣ ಮತ್ತು ಕೇಂದ್ರೀಕರಣವನ್ನು ಒಟ್ಟಿಗೇ ನಡೆಸುವ ಹುನ್ನಾರ ಎಂದು ಎಲ್ಲೆಡೆಗಳಿಂದ ಟೀಕೆಗೆ ಗುರಿಯಾಗಿದೆ(ಪುಟ 7 ಮತ್ತು 8 ರಲ್ಲಿನ ಈ ಕುರಿತ ಲೇಖನಗಳನ್ನು ನೋಡಿ)

ಕೋಮುವಾದೀಕರಣ:

ಶಿಕ್ಷಣದ ಕೋಮುವಾದೀಕರಣ ಅಥವ ಕೇಸರೀಕರಣ ಸದಾ ಆರೆಸ್ಸೆಸ್/ಬಿಜೆಪಿಯ ಕೇಂದ್ರೀಯ ಅಜೆಂಡಾ. ಬಲವಾದ ಆರೆಸ್ಸೆಸ್ ಕೊಂಡಿಗಳಿರುವ ವ್ಯಕ್ತಿಗಳನ್ನು ಅವರ ಅರ್ಹತೆ, ಅನುಭವಗಳ ಅಭಾವಗಳನ್ನೂ ಲೆಕ್ಕಿಸದೆ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ, ಜವಹರಲಾಲ್‌ವಿಶ್ವವಿದ್ಯಾಲಯ, ಫಿಲ್ಮ್ ಮತ್ತು ಟೆಲಿವಿಶನ್ ಇನ್ಸ್‌ಟಿಟ್ಯೂಟ್ ಇತ್ಯಾದಿಗಳಿಗೆ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಪಠ್ಯಪುಸ್ತಕಗಳ ಕೇಸರೀಕರಣ ಈಗಾಗಲೇ ಜಾರಿಯಲ್ಲಿದೆ. ಈಗ ಆರೆಸ್ಸೆಸ್ ಕಣ್ಣೋಟದಲ್ಲಿ ಭಾರತದ ಇತಿಹಾಸದ ಮರುಲೇಖನಕ್ಕೆ ಸರಕಾರ ಒಂದು ಸಮಿತಿಯನ್ನು ನೇಮಿಸಿದೆ ಎಂಬ ವರದಿಗಳಿವೆ.

ಸರ್ವಾಧಿಕಾರಶಾಹಿ ಹಲ್ಲೆಗಳು:

ಇವೆಲ್ಲದರ ಜೊತೆಜೊತೆಗೆ, ಇವುಗಳ ಭಾಗವಾಗಿಯೇ, ವಿವಿಧ ವಿಶ್ವವಿದ್ಯಾಲಯಗಳು ಮತ್ತು ಇನ್ಸ್‌ಟಿಟ್ಯೂಟ್‌ಗಳಲ್ಲಿ ವಿದ್ಯಾರ್ಥಿಗಳ ಮೇಲೆ, ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿಗಳ ಒಂದು ಸರಣಿಯನ್ನೇ ಈ ನಾಲ್ಕು ವರ್ಷಗಳಲ್ಲಿ ಕಂಡಿದ್ದೇವೆ.

ಪುಣೆಯ ಫಿಲ್ಮ್ ಮತ್ತು ಟೆಲಿವಿಶನ್ ಇನ್ಸ್‌ಟಿಟ್ಯುಟ್, ಐಐಟಿ ಮದ್ರಾಸ್, ದಿಲ್ಲಿಯ ಜೆಎನ್‌ಯು, ಹೈದರಾಬಾದ್ ಕೇಂದ್ರೀಯ ವಿವಿ, ಬನಾರಸ್ ಹಿಂದು ವಿಶ್ವವಿದ್ಯಾಲಯ, ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯ, ಅಲಹಾಬಾದ್ ವಿವಿ ಮುಂತಾದೆಡೆಗಳಲ್ಲಿ ಸಂಘ ಪರಿವಾರದ ಎಬಿವಿಪಿ ಮೂಲಕ ದಾಳಿಗಳು ನಡೆದಿವೆ. ಶಿಕ್ಷಣದ ವ್ಯಾಪಾರೀಕರಣ, ಕೇಂದ್ರೀಕರಣ ಮತ್ತು ಕೋಮುವಾದೀಕರಣದ ವಿರುದ್ಧ ವಿದ್ಯಾರ್ಥಿಗಳ, ಶಿಕ್ಷಕರ ಮತ್ತು ಪ್ರಜಾಪ್ರಭುತ್ವವಾದಿಗಳ ಪ್ರತಿರೋಧವನ್ನು ಅಡಗಿಸುವುದೇ ಇದರ ಮುಖ್ಯ ಉದ್ದೇಶ ಎಂಬುದುರಲ್ಲಿ ಈಗ ಸಂದೇಹವೇನೂ ಉಳಿದಿಲ್ಲ.

ಮತ್ತೆ ಶಿಕ್ಷಣ ಉಳ್ಳವರ ಸೊತ್ತು

ಈ ಎಲ್ಲ ನಡೆಗಳ ದುಷ್ಪರಿಣಾಮಗಳನ್ನು ಅತಿ ಹೆಚ್ಚಾಗಿ ಅನುಭವಿಸಬೇಕಾಗಿ ಬಂದಿರುವುದು ಬಡ ಜನವಿಭಾಗಗಳು, ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳ ವಿದ್ಯಾರ್ಥಿಗಳು.

ಪ್ರಜಾಪ್ರಭುತ್ವವಾದಿ ವಿದ್ಯಾರ್ಥಿ ಆಂದೋಲನದ ಹೋರಾಟಗಳು ಮತ್ತು ಸ್ವಾತಂತ್ರ್ಯ ಆಂದೋಲನದ ಒತ್ತಡಗಳ ಫಲವಾಗಿ ಈ ವಂಚಿತ ಜನಸಮುದಾಯಗಳ ವಿದ್ಯಾರ್ಥಿಗಳ ಕಲ್ಯಾಣಕ್ಕೆ ಈ ಏಳು ದಶಕಗಳಲ್ಲಿ ವಿಕಾಸಗೊಂಡಿರುವ ಹತ್ತು ಹಲವು ಕಲ್ಯಾಣ ಯೋಜನೆಗಳು ಈ ನಾಲ್ಕು ವರ್ಷಗಳಲ್ಲಿ ಸರಕಾರದ ತೀವ್ರ ದಾಳಿಗಳಿಗೆ ತುತ್ತಾಗಿವೆ.

* ಹಲವು ರಾಜ್ಯಗಳಲ್ಲಿ ನಿಧಿ ಕಡಿತಗಳು ಈ ಸಮುದಾಯಗಳ ವಿದ್ಯಾರ್ಥಿ ಹಾಸ್ಟೆಲ್‌ಗಳನ್ನು ದುಸ್ಥಿತಿಗೆ ತಳ್ಳಿವೆ. ಹಲವನ್ನು ಮುಚ್ಚಲಾಗುತ್ತಿದೆ.
* ಫೆಲೋಶಿಪ್‌ಗಳು/ ವಿದ್ಯಾರ್ಥಿ ವೇತನಗಳಲ್ಲಿ ತೀವ್ರ ವಿಳಂಬ, ಈ ಮೂಲಕ ಈ ಸಮುದಾಯಗಳ ವಿದ್ಯಾರ್ಥಿಗಳು ಶಿಕ್ಷಣವನ್ನು ಅರ್ಧಕ್ಕೇ ನಿಲ್ಲಿಸಿ ಬಿಡಬೇಕಾದ ಪರಿಸ್ಥಿತಿಗಳು ಹೆಚ್ಚುತ್ತಿವೆ.

ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಬುಡಕಟ್ಟುಗಳ ವಿದ್ಯಾರ್ಥಿವೇತನ ಪಾವತಿ ಬಾಕಿ ಅನುಕ್ರಮವಾಗಿ ರೂ. 8000 ಕೋಟಿ ಮತ್ತು ರೂ. 3156 ಕೋಟಿ, ಒಟ್ಟು 11156 ಕೋಟಿ ರೂ. ಎಂದು ವರದಿಯಾಗಿದೆ. ಇದು 51,03,243 ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳು ಮತ್ತು 20,33,741 ಪರಿಶಿಷ್ಟ ಬುಡಕಟ್ಟುಗಳ, ಅಂದರೆ ಒಟ್ಟು 71ಲಕ್ಷಕ್ಕೂ ಹೆಚ್ಚು ವಂಚಿತ ವಿಭಾಗಗಳ ವಿದ್ಯಾರ್ಥಿಗಳ ಭವಿಷ್ಯವನ್ನು ಅತಂತ್ರಗೊಳಿಸಿದೆ.

* 35 ಕೇಂದ್ರೀಯ ವಿವಿಗಳಲ್ಲಿ 'ಸಾಮಾಜಿಕ ಬಹಿಷ್ಕರಣ ಮತ್ತು ಒಳಗೊಳ್ಳುವ ಧೋರಣೆಗಳ' ಅಧ್ಯಯನ ಕೇಂದ್ರಗಳಿವೆ. ಸಾವಿರಾರು ವರ್ಷಗಳಿಂದ ಸಾಮಾಜಿಕವಾಗಿ ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳನ್ನು ಮುಖ್ಯಧಾರೆಯ ಅಧ್ಯಯನಗಳ ವ್ಯಾಪ್ತಿಯಲ್ಲಿ ಒಳಗೊಳ್ಳುವುದು ಇದರ ಘೋಷಿತ ಉದ್ದೇಶ. ಆದರೆ ಈ ಎಲ್ಲ ಕೇಂದ್ರಗಳು ನಿಧಿ ಕಡಿತಗಳಿಂದಾಗಿ ಮುಚ್ಚುವ ಸ್ಥಿತಿಯಲ್ಲಿವೆ ಎಂಬುದು ಈ ಸರಕಾರದ ನಿಜಸ್ವರೂಪವನ್ನು ಎತ್ತಿ ತೋರಿಸುತ್ತದೆ.
* ಈ ವಿಭಾಗಗಳ ವಿದ್ಯಾರ್ಥಿಗಳಿಗೆ ಶಿಕ್ಷಕರಾಗುವ ಅವಕಾಶಗಳನ್ನೂ ಕುಂಠಿತಗೊಳಿಸಲಾಗುತ್ತಿದೆ ಎಂಬದು ಈ ಧೋರಣೆಯ ಮತ್ತೊಂದು ಅಂಶ. ಮೀಸಲಾತಿಗೆ ಒಟ್ಟು ವಿಶ್ವವಿದ್ಯಾಲಯ/ಶಿಕ್ಷಣ ಸಂಸ್ಥೆಯನ್ನು ಘಟಕವಾಗಿಸದೆ, ಪ್ರತಿ ವಿಭಾಗವನ್ನು ಘಟಕವಾಗಿಸಬೇಕೆಂಬ ಇತ್ತೀಚಿನ ಯುಜಿಸಿ ಅಧಿಸೂಚನೆ, ಈ ಉನ್ನತ ಶಿಕ್ಷಣದ ಸಂಸ್ಥೆಗಳಲ್ಲಿ ಮೀಸಲಾತಿಗಳನ್ನು ತೀವ್ರವಾಗಿ ಕಡಿತಗೊಳಿಸುತ್ತಿದೆ.

ಖಾಸಗೀಕರಣ, ವ್ಯಾಪಾರೀಕರಣದ ಮೂಲಕ, ಸ್ವಾಯತ್ತತೆ, ಮತ್ತು ಇತ್ತೀಚಿನ ಉದಾಹರಣೆಯಲ್ಲಿ 'ಉತ್ಕೃಷ್ಟತೆ' ಹೆಸರಲ್ಲಿ ಬಹುಪಾಲು ಜನಗಳನ್ನು ವಂಚಿಸುವ ಇಂತಹ ಪ್ರಯತ್ನಗಳು ಭರದಿಂದ ನಡೆಯುತ್ತಿವೆ.



'ಸಮೃದ್ಧ ಭಾರತ ಸ್ವಸ್ಥ ಭಾರತ' ಜನರಿಗಲ್ಲ, ಕಾರ್ಪೊರೇಟ್ ಆಸ್ಪತ್ರೆಗಳಿಗೆ ಮಾತ್ರ

ಪುಟ 9 ರಿಂದ

2017ರಲ್ಲಿ ಸಾರ್ವಜನಿಕ ಆರೋಗ್ಯ ಕೇಂದ್ರಗಳ ಕೊರತೆಯ ಪ್ರಮಾಣವನ್ನು ನೋಡಿ:
ಪ್ರಾಥಮಿಕ ಆರೋಗ್ಯ ಕೇಂದ್ರಗಳು–22%
ಉಪಕೇಂದ್ರಗಳು–19%
ಸಮುದಾಯ ಆರೋಗ್ಯ ಕೇಂದ್ರಗಳು– 30%

* ಆರೋಗ್ಯ ಸಿಬ್ಬಂದಿ ಕೊರತೆ:
82% ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸರ್ಜನ್‌ಗಳು, ಪ್ರಸೂತಿ ತಜ್ಞರು,. ಮಕ್ಕಳ ಆರೋಗ್ಯ ತಜ್ಞರ ಕೊರತೆಯಿದೆ.
6371 ಉಪ ಆರೋಗ್ಯ ಕೇಂದ್ರಗಳು ನರ್ಸ್‌ಗಳು ಮತ್ತು ಮಿಡ್‌ವೈಫ್‌ಗಳಿಲ್ಲದೆ ಕೆಲಸ ಮಾಡುತ್ತಿವೆ.

ಖಾಸಗಿ ಆಸ್ಪತ್ರೆಗಳಿಗೆ ಸುಗ್ಗಿ

ತದ್ವಿರುದ್ಧವಾಗಿ ಖಾಸಗಿ ಆಸಪ್ತೆಗಳಿಗೆ ಜನಸಾಮಾನ್ಯರನ್ನು ಕೊಳ್ಳೆ ಹೊಡೆಯಲು ಬಿಡಲಾಗುತ್ತಿದೆ.

ರಾಷ್ಟ್ರೀಯ ಔಷಧಿ ಬೆಲೆ ನಿಯಂತ್ರಣ ಪ್ರಾಧಿಕಾರ (ಎನ್‌ಪಿಪಿಎ) ದಿಲ್ಲಿಯಲ್ಲಿ ಖಾಸಗಿ ಅಸ್ಪತ್ರೆಗಳ ಬಿಲ್‌ಗಳ ವಿಶ್ಲೇಷಣೆ ಮಾಡಿ ಫೆಬ್ರುವರಿ 2018ರಲ್ಲಿ ನೀಡಿರುವ ವರದಿಯ ಪ್ರಕಾರ ಖಾಸಗಿ ಆಸ್ಪತ್ರೆಗಳು ಔಷಧಿಗಳು, ರೋಗಪತ್ತೆ ವಿಧಾನಗಳು ಮತ್ತು ಆಸ್ಪತ್ರೆ ಬಳಕೆಯ ಸಾಮಗ್ರಿಗಳ ಬೆಲೆಗಳಲ್ಲಿ 1737% ದಷ್ಟು ಲಾಭ ಮಾಡಿಕೊಳ್ಳುತ್ತಿವೆ. ದೇಶದ ಇತರ ಸ್ಥಳಗಲ್ಲೂ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ ಎಂಬುದು ಎಲ್ಲರ ಅನುಭವಕ್ಕೆ ಬಂದಿರುವ ಸಂಗತಿ.

ಈ ವರದಿ ನೋಡಿ ಮೋದಿ ಸರಕಾರ ಕೈಗೊಂಡ ಕ್ರಮವಾದರೂ ಏನು? ಎನ್‌ಪಿಪಿಎ ಅಧ್ಯಕ್ಷರನ್ನು ಬದಲಾಯಿಸಿದ್ದು!

ಕ್ಲಿನಿಕಲ್ ಎಸ್ಟಾಬ್ಲಿಷ್‌ಮೆಂಟ್ಸ್ ಆಕ್ಟ್, 2010 ಎಂಬುದೊಂದಿದೆ. ಇದು ಖಾಸಗಿ ಅಸ್ಪತ್ರೆಗಳ ನಿಯಂತ್ರಣಕ್ಕೆಂದು ತಂದಿರುವ ಕಾನೂನು. ಅದನ್ನು ಬಳಸಲು ಈ ಸರಕಾರ ನಿರಾಕರಿಸುತ್ತಿದೆ. ಅದರ ಅಧಿಸೂಚನೆ ಮತ್ತು ಅದರಡಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಅದು ಏನೂ ಮಾಡಿಲ್ಲ ಎಂಬುದೇ ಈ ಸರಕಾರವೂ ಖಾಸಗಿ ಆಸ್ಪತ್ರೆಗಳ ಲೂಟಿಯ ಬೆಂಬಲಕ್ಕೆ ನಿಂತಿದೆ ಎಂಬುದನ್ನು ತೋರಿಸುತ್ತದೆ.

ಔಷಧಿ ಬೆಲೆಗಳಲ್ಲಿ ಏರಿಕೆ

ಔಷಧಿ ಬೆಲೆಗಳ ಮೇಲೆ ನಿಯಂತ್ರಣ ಹಾಕುವ ಬದಲು ಈ ಸರಕಾರ ಬೆಲೆಗಳ ಮೇಲೆ ಇರುವ ನಿಯಂತ್ರಣವನ್ನು ತೆಗೆಯುವ ಪ್ರಕ್ರಿಯೆಯನ್ನೇ ಆರಂಭಿಸಿದೆ.

ಎಪ್ರಿಲ್ 2017ರಲ್ಲಿ ಮೋದಿ ಸರಕಾರ ಯೋಜನಾ ಆಯೋಗವನ್ನು ರದ್ದು ಮಾಡಿ ನೇಮಿಸಿದ ನೀತಿ ಆಯೋಗ 'ರಾಷ್ಟ್ರೀಯ ಆವಶ್ಯಕ ಔಷಧಿಗಳ ಪಟ್ಟಿ' ಮತ್ತು ಔಷಧಿ ಬೆಲೆ ಹತೋಟಿ ಆದೇಶವನ್ನು ಪರಸ್ಪರ ತಳುಕು ಹಾಕಬಾರದು ಎಂದು ಶಿಫಾರಸು ಮಾಡಿತು. ಅಂದರೆ ಆವಶ್ಯಕ ಔಷಧಿಗಳ ಬೆಲೆಗಳ ಮೇಲೆ ಹತೋಟಿ ಹಾಕಬಾರದು ಎಂದರ್ಥ. ಅಲ್ಲದೆ ಯಾವುದೇ ಔಷಧಿಯಲ್ಲಿ ತಯಾರಕರ ನಡುವೆ 'ಸಾಕಷ್ಟು ಸ್ಪರ್ಧೆ' ಇದ್ದಲ್ಲಿ ಅವುಗಳಿಗೆ ಬೆಲೆ ನಿಯಂತ್ರಣದಿಂದ ವಿನಾಯ್ತಿ ನೀಡಬೇಕು ಎಂದೂ ಅಭಿಪ್ರಾಯ ಪಟ್ಟಿದೆ. ಇದರಿಂದಾಗಿ ಸುಮಾರು 350 ಔಷಧಿಗಳ ಬೆಲೆಗಳ ಮೇಲೆ ನಿಯಂತ್ರಣ ಇನ್ನು ಮುಂದೆ ಇರುವುದಿಲ್ಲ. ಅಂದರೆ ಪರಸ್ಪರ ಸ್ಪರ್ಧೆನಡೆಸುತ್ತಿರುವ ಕಂಪನಿಗಳು ಪರಸ್ಪರ ಕೂಡಿಕೊಂಡು ಬೆಲೆಗಳನ್ನು ಎಷ್ಟು ಬೇಕಾದರೂ ಏರಿಸಬಹುದು. ಅದರ ಮತ್ತೊಂದು ಸೂಚನೆ ಎಂದರೆ ಪ್ರಸ್ತುತ ಗರಿಷ್ಟ ಬೆಲೆಗಳಿಗಿಂತ 10% ದಷ್ಟು 'ಮಾತ್ರ' ಹೆಚ್ಚು ಬೆಲೆಯಿರುವ ಔಷಧಿಗಳಿಗೆ ಈ ಬೆಲೆ ನಿಯಂತ್ರಣ ಅನ್ವಯಿಸಬಾರದು. ಈ ಮೂಲಕ ಸದ್ಯ ಬೆಲೆ ನಿಯಂತ್ರಣಕ್ಕೆ ಒಳಪಟ್ಟಿರುವ 40% ಔಷಧಿಗಳು ಬೆಲೆ ನಿಯಂತ್ರಣದಿಂದ ವಿನಾಯ್ತಿ ಪಡೆಯುತ್ತವೆ.

ಈ ರೀತಿ ಬಹುಪಾಲು ಔಷಧಿಗಳ ಮೇಲಿನ ಬೆಲೆ ನಿಯಂತ್ರಣವನ್ನು ತೆಗೆದಿರುವ/ತೆಗೆಯಬೇಕೆಂದಿರುವ ಸರಕಾರ ಅಗ್ಗ ಬೆಲೆಗಳಲ್ಲಿ ಔಷಧಿ ಪೂರೈಕೆಗೆಂದು 'ಜನ ಔಷಧಿ ಯೋಜನೆ'ಯನ್ನು ಪ್ರಕಟಿಸಿದೆ. ಇದರ ಅಡಿಯಲ್ಲಿ ಔಷಧಿಗಳು 850 ಅಂಗಡಿಗಳಿಂದ ಈ ಔಷಧಿಗಳು ಲಭ್ಯವಾಗಬೇಕು. ಆದರೆ ಇದಕ್ಕೆ ಸರಕಾರ ಒದಗಿಸಿರುವ ಹಣ ಕೇವಲ 84 ಕೋಟಿ ರೂ. ಈ ಅಲ್ಪಹಣದಿಂದ 120 ಕೋಟಿ ಜನಗಳಿಗೆ, ಅಥವ ಕನಿಷ್ಟ 50 ಕೋಟಿಯಷ್ಟಾದರೂ ಬಡಜನಗಳಿಗೆ ಅಗ್ಗದ ಬೆಲೆಗಳಲ್ಲಿ ಔಷಧಿ ಪೂರೈಸುವುದು ಮೋದಿ ಮ್ಯಾಜಿಕ್‌ನಿಂದ ಮಾತ್ರ ಸಾಧ್ಯ ಎನ್ನುತ್ತಾರೆ ಪರಿಣಿತರು. ಇದು ಮತ್ತೊಂದು 'ಜುಮ್ಲಾ' ಎನ್ನುವುದರಲ್ಲಿ ಸಂದೇಹವಿಲ್ಲ.

ಆಯುಷ್ಮಾನ್ ಭಾರತ

ಪ್ರಧಾನ ಮಂತ್ರಿಗಳ ಇತ್ತೀಚಿನ ಈ ಯೋಜನೆ ಆಗಸ್ಟ್ 15ರಂದು ಜಾರಿಗೆ ಬರಲಿದ್ದು 50 ಕೋಟಿ ಜನಗಳಿಗೆ ತಲಾ 5ಲಕ್ಷರೂ.ಗಳ ಆರೋಗ್ಯ ವಿಮಾರಕ್ಷಣೆ ಕೊಡುವ ಅತಿ ದೊಡ್ಡ ಸ್ಕೀಮ್ ಎನ್ನಲಾಗುತ್ತಿದೆ. ಆದರೆ ಇತರ ಎಲ್ಲ ಮೋದಿ ಯೋಜನೆಗಳಂತೆ ಇಲ್ಲಿಯೂ ನಿಜ ಹೂರಣಕ್ಕಿಂತ ಅಬ್ಬರವೇ ಹೆಚ್ಚು ಎನ್ನುತ್ತಾರೆ ಪರಿಣಿತರು. ಏಕೆಂದರೆ 50 ಕೋಟಿ ಜನರಿಗೆ ರಕ್ಷಣೆ ಕೊಡುವ ಈ ಸ್ಕೀಮಿಗೆ ಬಜೆಟಿನಲ್ಲಿ ಕೊಟ್ಟದ್ದು ಕೇವಲ 2000 ಕೋಟಿರೂ. ಅಂದರೆ ತಲಾ ರೂ.40. ಈ ಟೀಕೆ ಬಂದ ನಂತರ 11000 ಕೋಟಿರೂ. ಕೊಡಲಾಗಿದೆ ಎಂದು ಅಧಿಕಾರಿಗಳು ಹೇಳಿದರು. ಅದು ನಿಜವೇ ಆಗಿದ್ದರೂ, ಅದು ಖಾಸಗಿ ವಿಮಾ ಕಂಪನಿಗಳು ಕೇಳಬಹುದಾದ ಪ್ರೀಮಿಯಂ ಮೊತ್ತದ ಅರ್ಧದಷ್ಟಕ್ಕೂ ಬರುವುದಿಲ್ಲ.

ಅದಕ್ಕಿಂತಲೂ ಹೆಚ್ಚಾಗಿ ಇದು ಆಸ್ಪತ್ರೆ ಸ/ ಎರಿದರೆ ಮಾತ್ರವೇ ಸಿಗುವ ಸೌಲಭ್ಯ. ಅಂದರೆ ಹಾಗೆ ಸೇರಲೇಬೇಕಾದ ಗಂಭೀರ ಕಾಯಿಲೆಗೆ ಮಾತ್ರವೇ ಸಿಗುವ ರಕ್ಷಣೆ. ಒಂದು ಲೆಕ್ಕಾಚಾರದ ಪ್ರಕಾರ ಹೆಚ್ಚಿನ ಕುಟುಂಬಗಳಲ್ಲಿ ಆಸ್ಪತ್ರೆ ಖರ್ಚು ಒಟ್ಟು ವೈದ್ಯಕೀಯ ಖರ್ಚಿನ ಮೂರನೇ ಒಂದರಷ್ಟು ಮಾತ್ರ. ಅಂದರೆ ಉಳಿದ 67% ಖರ್ಚುಗಳನ್ನು ಔಷಧಿಗಳಿಗಾಗಿ ಜನಗಳು ತಮ್ಮ ಜೇಬುಗಳಿಂದಲೇ ಭರಿಸಬೇಕು. ಇದನ್ನು ಈ ಭವ್ಯ ಯೋಜನೆ ಕೊಡುತ್ತಿಲ್ಲ.

ಅಂದರೆ ವಿಮಾಕಂಪನಿಗಳ ಮೂಲಕ ನಡೆಸುವ ಈ ಯೋಜನೆ ಬಿಜೆಪಿ ಆಶ್ವಾಸನೆ ಕೊಟ್ಟಿರುವ ಒಂದು ಪರಿಣಾಮಕಾರಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ನೀಡಲಾರದು. ನಿಜ, ಇದರ ಅತಿ ದೊಡ್ಡ ಫಲಾನುಭವಿಗಳು ದೊಡ್ಡ ಕಾರ್ಪೊರೇಟ್ ಆಸ್ಪತ್ರೆಗಳು. ಅವರು ಅನಗತ್ಯವಾಗಿ ಕೊಡುವ 'ಶುಶ್ರೂಷೆ'ಗೆ ಕೊಡುವ ಹಿಗ್ಗಿಸಿದ ಬಿಲ್‌ಗಳಿಗೆ ಸರಕಾರ ತನ್ನ ಖಜಾನೆಯಿಂದ ಪ್ರೀಮಿಯಂ ಹೆಸರಿನಲ್ಲಿ ಹಣ ವರ್ಗಾಯಿಸುತ್ತದೆ. ಹಿಂದೆ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾಯೋಜನೆಯಲ್ಲಿ ಆದದ್ದು ಇದೇ–ಇತ್ತೀಚೆಗೆ ಫಸಲ್ ಬಿಮಾ ಯೋಜನಾದ ಅನುಭವವೂ ಇದೇ ತಾನೇ?

ಈ ಆಯುಷ್ಮಾನ್ ಯೋಜನೆ ಬಿಜೆಪಿ ಸರಕಾರದ ಒಟ್ಟು ನಿಲುವಿನ ಸಾರಾಂಶದಂತಿದೆ. ಅಂದರೆ ಸರಕಾರದ ಖರ್ಚಿನಲ್ಲಿ ಜನಗಳ ಹೆಸರಿನಲ್ಲಿ ಖಾಸಗಿಯವರಿಗೆ ಲಾಭ ದೋಚುವ ಅವಕಾಶ. ●



ವಸಂತರಾಜ ಎನ್.ಕೆ.

ಬಜೆಟಿನ 13 ಸಾವಿರ ಕೋಟಿ ಬಳಸಿಲ್ಲ

ಸಾಲಮನ್ನಾ ಜಾರಿಗೆ ಸಂಪನ್ಮೂಲ ಸಂಗ್ರಹಿಸುವ ಹೆಸರಲ್ಲಿ ಜನರ ಮೇಲೆ ಬಜೆಟ್ ಹೊರಿಸಿದ ಹೊರೆ ಬಗ್ಗೆ ಆಳುವ ಕೂಟದ ಸದಸ್ಯರೂ ಸೇರಿದಂತೆ ಎಲ್ಲಾ ವಲಯಗಳಿಂದಲೂ ಟೀಕೆ ಕೇಳಿ ಬಂದಿದ್ದರೂ ಅದನ್ನು ಹಿಂತೆಗೆಯುವ ಬಗ್ಗೆ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿಲ್ಲ. ಪೆಟ್ರೋಲ್/ಡಿಸೇಲ್ ಸುಂಕ, ವಿದ್ಯುತ್ ಬಿಲ್ ಮೇಲಿನ ತೆರಿಗೆ, ಖಾಸಗಿ ಸೇವಾ ವಾಹನ ತೆರಿಗೆ ಹೆಚ್ಚಳವನ್ನು ಹಿಂತೆಗೆದುಕೊಂಡಿಲ್ಲ. ಈಗಾಗಲೇ ಕಳೆದ ಬಜೆಟಿನಲ್ಲಿ ಇದ್ದ ಅನ್ನಭಾಗ್ಯದ ಅಕ್ಕಿಯಲ್ಲಿ 2 ಕೆಜಿ ಕಡಿತ ಮಾಡಲಾಗಿದೆ. ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಕಡಿತ ಮಾಡಲಾಗಿದೆ. ಇವೆಲ್ಲಕ್ಕೆ ಸರಕಾರ ಕೊಡುವ ಕಾರಣ ಸಂಪನ್ಮೂಲಗಳ ಕೊರತೆ. ಆದರೆ ಬಜೆಟಿನಲ್ಲಿ ಒಳಗೊಂಡ ಎಲ್ಲಾ ಸಂಪನ್ಮೂಲಗಳನ್ನು ಇದುವರೆಗೆ ಸರಿಯಾಗಿ ಬಳಸಲಾಗಿದೆಯೇ ಎಂದರೆ, ಸಿಎಜಿ ವರದಿ ಇಲ್ಲವೆನ್ನುತ್ತದೆ.

ಜನರ ಅಭ್ಯುದಯಕ್ಕೆ ನೇರ ಸಂಬಂಧವಿರುವ ಶಿಕ್ಷಣ, ಆರೋಗ್ಯ, ನೀರಾವರಿ ಹಾಗೂ ಪಂಚಾಯತ್ ರಾಜ್‌ನಂತಹ ಪ್ರಮುಖ ಇಲಾಖೆಗಳಿಗೆ ಮೀಸಲಿಟ್ಟಿದ್ದ ಬಜೆಟ್ (2016–17) ಅನುದಾನದಲ್ಲಿ ರೂ 13 ಸಾವಿರ ಕೋಟಿಯಷ್ಟು ಹಣ ಬಳಕೆಯಾಗದೆ ಉಳಿದಿರುವುದನ್ನು ಸಿಎಜಿ ವರದಿ ಬಯಲು ಮಾಡಿದೆ. ಶಿಕ್ಷಣ ಕ್ಷೇತ್ರದಲ್ಲಿ ಸರ್ವಶಿಕ್ಷಣ ಅಭಿಯಾನದ 191 ಕೋಟಿ ರೂ., ಪ್ರಾಥಮಿಕ ಶಿಕ್ಷಣ ಉತ್ತೇಜನ ಯೋಜನೆಯ 77 ಕೋಟಿ ರೂ, ಕಂಪ್ಯೂಟರ್ ಸಾಕ್ಷರತೆ ಜಾಗೃತಿಯ 71 ಕೋಟಿ ರೂ ಅನುದಾನಗಳ ಬಳಕೆಯಾಗಿಲ್ಲವೆಂದು ಸಿಎಜಿ ವರದಿ ಬಯಲಿಗೆಳೆದಿದೆ. ಆರೋಗ್ಯ ಕ್ಷೇತ್ರದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದ 472 ಕೋಟಿ ರೂ, ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆಯ 31 ಕೋಟಿ ರೂ ಖರ್ಚಾಗದೆ ಉಳಿದಿದೆ. ಪಂಚಾಯತ್ ರಾಜ್ ಇಲಾಖೆಯಲ್ಲಿ ಪ್ರಧಾನ ಮಂತ್ರಿ ಸಡಕ್ ಯೋಜನೆಯ 758 ಕೋಟಿ ರೂ, ಗ್ರಾಮ ಪಂಚಾಯತುಗಳಿಗೆ ರಾಜ್ಯ ಸರಕಾರದ ನೆರವಿನ 528 ಕೋಟಿ ರೂ, ಕೇಂದ್ರದ ಅನುದಾನ ಬಳಕೆಯಾಗದೆ ಉಳಿದಿದೆ. ಜಲ ಸಂಪನ್ಮೂಲ ಇಲಾಖೆಯಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ 600 ಕೋಟಿ ರೂ, ಕೃಷ್ಣಾ ಮೇಲ್ದಂಡೆ ಯೋಜನೆಯ 116 ಕೋಟಿ ರೂ, ಏತ ನೀರಾವರಿಯ 76 ಕೋಟಿ ರೂ, ಕೆರೆಗಳ ನಿರ್ವಹಣೆಯ 53 ಕೋಟಿ ರೂ ಬಳಸಿಲ್ಲ. ಬೆಂಗಳೂರು ನಗರಕ್ಕೆ ವಿಶೇಷ ಮೂಲಸೌಲಭ್ಯಕ್ಕೆ ಕೊಟ್ಟ ವಿಶೇಷ ಅನುದಾನವಾದ 7300 ಕೋಟಿ ರೂ. ನಲ್ಲಿ 1279 ಕೋಟಿರೂ. ಖರ್ಚಾಗಿಲ್ಲ. 2330 ಕೋಟಿ ರೂ ಬಿಡುಗಡೆಯೇ ಆಗಿಲ್ಲ. ರಾಜ್ಯದ ಆರೋಗ್ಯ ಮತ್ತು ಶಿಕ್ಷಣ ವಲಯಗಳ ವೆಚ್ಚದ ಅನುಪಾತ, ದೇಶದ ಇತರ ರಾಜ್ಯಗಳ ಸರಾಸರಿಗಿಂತ ಕಡಿಮೆಯಿರುವುದು ಎಂದೂ ವರದಿಯಾಗಿರುವುದು ಆತಂಕಕಾರಿ.

ಆರ್ಥಿಕ ವರ್ಷದ ಕೊನೆಯ ಎರಡು ಕೆಲಸದ ದಿನಗಳಲ್ಲಿ ನೂರಾರು ಕೋಟಿ ಮೊತ್ತವನ್ನು ವಿನಿಯೋಗ ಮಾಡಿರುವುದು, ಕೆಲವು ಯೋಜನೆಗಳಿಗೆ ಮೀಸಲಿಟ್ಟ ಮೊತ್ತಕ್ಕಿಂತ ಹೆಚ್ಚಿನ ಹಣ ಖರ್ಚು ಮಾಡಿರುವುದು, ವಿದ್ಯಾರ್ಥಿವೇತನಕ್ಕೆ ಬಳಸಬೇಕಾಗಿದ್ದ 260 ಕೋಟಿ ರೂ.ಯನ್ನು ವೈಯಕ್ತಿಕ ಖಾತೆಗಳಲ್ಲಿ ಠೇವಣಿ ಇಟ್ಟಿರುವುದು, ವೆಚ್ಚ ಮಾಡಿದ ಹಣಕ್ಕೆ ಬಿಲ್ ಸಲ್ಲಿಸದೇ ಇರುವುದು– ಇಂತಹ ಹತ್ತಾರು ಲೋಪಗಳನ್ನು ವರದಿಯಲ್ಲಿ ಎತ್ತಿ ತೋರಲಾಗಿದೆ. ಒಟ್ಟು ಬಜೆಟ್ ವೆಚ್ಚದ ಶೇ 19ರಷ್ಟು ಪ್ರಮಾಣದ ಖರ್ಚಿಗೂ ಸ್ವೀಕೃತಿಗೂ ತಾಳೆಯೇ ಆಗುತ್ತಿಲ್ಲ ವಿವಿಧ ಇಲಾಖೆಗಳಲ್ಲಿ ಆಯವ್ಯಯ ನಿರ್ವಹಣೆ ಸಮರ್ಪಕವಾಗಿಲ್ಲ ಎಂಬುದನ್ನೂ ಸಿಎಜಿ ವರದಿ ಪತ್ತೆ ಹಚ್ಚಿದೆ. ಇದಕ್ಕೆ ಪ್ರಮುಖವಾಗಿ ಅಧಿಕಾರಿಗಳ ಬೇಜವಾಬ್ದಾರಿ ಮತ್ತು ಸಚಿವ ಶಾಸಕರ ರಾಜಕೀಯ ಇಚ್ಛೆ ಹಾಗೂ ಮೇಲುಸ್ತುವಾರಿಯ ಅಭಾವ ಮತ್ತು ವ್ಯಾಪಕ ಭ್ರಷ್ಟಾಚಾರ ಇವಕ್ಕೆ ಕಾರಣ. ಇವನ್ನು ಸರಿಪಡಿಸದೆ ಹೊಸ ತೆರಿಗೆ ಭಾರವನ್ನು ಜನತೆಯ ಮೇಲೆ ಹೊರಿಸಲು ಸರಕಾರಕ್ಕೆ ಹಕ್ಕು ಇಲ್ಲ. ●

ಬಿಜೆಪಿಯ ಪ್ರತ್ಯೇಕತೆಯ ಕೂಗು

ಮೊಳಕಾಲ್ಮೂರು ಕ್ಷೇತ್ರದ ಬಿಜೆಪಿ ಶಾಸಕ ಬಿ. ಶ್ರೀರಾಮುಲು ಬಜೆಟ್ ಮೇಲಿನ ಚರ್ಚೆಯಲ್ಲಿ ವಿಧಾನಸಭೆಯಲ್ಲಿ ಮಾತನಾಡಿದ್ದ ಶ್ರೀರಾಮುಲು 'ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ರಚನೆಗೆ ನಮ್ಮ ಬೆಂಬಲವಿದೆ. ಉತ್ತರ ಕರ್ನಾಟಕವನ್ನು ಬಜೆಟ್‌ನಲ್ಲಿ ನಿರ್ಲಕ್ಷಿಸಿದ ಹಿನ್ನೆಲೆಯಲ್ಲಿ ಈ ನಿರ್ಧಾರಕ್ಕೆ ಬರಬೇಕಾಯಿತು' ಎಂದು ಹೇಳಿದ್ದಾರೆ. 'ನಾಲ್ಕೈದು ಜಿಲ್ಲೆಗಳಿಗೆ ಸೀಮಿತವಾದ ಬಜೆಟ್ ಮಂಡಿಸಿ, ಉಳಿದ ಜಿಲ್ಲೆಗಳನ್ನು ನಿರ್ಲಕ್ಷಿಸಲಾಗಿದೆ. ಇದರಿಂದ ರಾಜ್ಯದಲ್ಲಿ ಪ್ರತ್ಯೇಕತೆಯ ಕೂಗು ಎದ್ದರೆ, ಅದಕ್ಕೆ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸರ್ಕಾರ ಹಾಗೂ ಇದಕ್ಕೆ ಬೆಂಬಲ ನೀಡಿದ ಕಾಂಗ್ರೆಸ್ ಹೊಣೆ' ಎಂದು ವಿಧಾನ ಪರಿಷತ್ತಿನಲ್ಲಿ ಬುಧವಾರ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರ ಎಚ್ಚರಿಕೆ ಇದು. ಇನ್ನೂ ಹಲವು ಬಿಜೆಪಿ ನಾಯಕರು ಪ್ರಾದೇಶಿಕ ಅಸಮಾನತೆ ಹಾಗೂ ತಾರತಮ್ಯಗಳನ್ನು ಟೀಕಿಸುವ ನೆಪದಲ್ಲಿ ಪ್ರತ್ಯೇಕತೆಯ ಕೂಗನ್ನು ಎಬ್ಬಿಸಿರುವುದು ಅಥವಾ ಅದನ್ನು ಸಮರ್ಥಿಸಿರುವುದು ಕಂಡು ಬಂದಿದೆ. ಬಜೆಟಿನಲ್ಲಿ ಪ್ರಾದೇಶಿಕ ತಾರತಮ್ಯಗಳನ್ನು ಇತರ ಹಲವು ಪಕ್ಷದ ಸದಸ್ಯರು ಟೀಕಿಸಿದ್ದಾರೆ. ಆದರೆ ಅವರಲ್ಲಿ ಯಾರೂ ಪ್ರತ್ಯೇಕತೆಯ ಕೂಗನ್ನು ಎಬ್ಬಿಸಿಲ್ಲ ಅಥವಾ ಸಮರ್ಥಿಸಿಲ್ಲ.

ಬಿಜೆಪಿ ಒಂದು ಜವಾಬ್ದಾರ ವಿರೋಧ ಪಕ್ಷದ ಪಾತ್ರ ನಿರ್ವಹಿಸುತ್ತಿಲ್ಲ. ಹೇಗಾದರೂ ಯಾವುದೇ ವಿಷಯದಲ್ಲಿ ಜನರ ಹಿತಾಸಕ್ತಿಗಳಿಗೆ ಅನುಗುಣವಾಗಿ ನಡೆಯುವ ಬದಲು ಗಲಭೆ ಪ್ರಕ್ಷೋಭೆ ಎಬ್ಬಿಸಿ ಸರಕಾರವನ್ನು ಹೇಗಾದರೂ ಹೈರಾಣಾಗಿಸಬೇಕು ಎಂಬುದೊಂದೇ ಅದರ ಧೋರಣೆ. ಬಿಜೆಪಿಯ ಈ ಧೋರಣೆ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ತೀವ್ರ ಆಕ್ಷೇಪ ಆಕ್ರೋಶ ವ್ಯಕ್ತವಾಗಿದೆ. ಜಯದೇವ ಪೂಜಾರ್ ಎಂಬವರು "ವಿರೋಧ ಪಕ್ಷದಲ್ಲಿ ಇರುವವರು ಯಾವತ್ತೂ ಉ.ಕ. ಪ್ರತ್ಯೇಕತೆಯ ಕೂಗು ಎಬ್ಬಿಸುತ್ತಾರೆ. ಅಧಿಕಾರಕ್ಕೆ ಬಂದಾಗ ಅವರಿಂದ ಉ.ಕ.ಕ್ಕೆ ಯಾವ ಮಹತ್ತರವಾದ ಲಾಭವೂ ಆಗುವುದಿಲ್ಲ' ಎಂದು ವಿಮರ್ಶಿಸಿದ್ದಾರೆ. 'ಈಗ ಪ್ರತ್ಯೇಕ ರಾಜ್ಯ ಕೇಳುತ್ತಿರುವ ಢೋಂಗಿಗಳು ತಾವೇ ಅಧಿಕಾರದಲ್ಲಿದ್ದಾಗ ಉತ್ತರ ಕರ್ನಾಟಕಕ್ಕೆ ಏನು ಮಾಡಿದರು? ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅಖಂಡ ಕರ್ನಾಟಕವಾಗೇ ಹೋರಾಡೋಣ. ಇವರ ಅವಕಾಶವಾದಿ ರಾಜಕಾರಣಕ್ಕೆ ಬಲಿಯಾಗದಿರಿ...' ಎಂದು ಚಕ್ರವರ್ತಿ ಚಂದ್ರಚೂಡ್ ಬರೆದುಕೊಂಡಿದ್ದಾರೆ. ಇವು ವ್ಯಕ್ತವಾಗಿರುವ ಅಭಿಪ್ರಾಯದ ಸ್ಯಾಂಪಲುಗಳು. ●



108 ಹಗರಣ



ಪಿಪಿಪಿ (ಪಬ್ಲಿಕ್ ಪ್ರೈವೇಟ್ ಪಾರ್ಟನರ್ ಶಿಪ್) ಅಂದರೆ ಭ್ರಷ್ಟಾಚಾರಕ್ಕೆ ಆಹ್ವಾನ. ಏಕೆಂದರೆ ಅಲ್ಲಿ ವ್ಯವಹಾರದ ನಿರ್ವಹಣೆ ಮಾಡುವುದು ಪ್ರೈವೇಟ್ ಕಂಪನಿ. ಹಣ ಭರಿಸುವುದು ಪಬ್ಲಿಕ್ – ಸಾರ್ವಜನಿಕ ಬೊಕ್ಕಸದಿಂದ. ಪ್ರಸಿದ್ಧವಾಗಿರುವ ಆರೋಗ್ಯ ಕವಚ ತುರ್ತು ಸೇವೆ '108' ಇಂತಹ ಒಂದು ಸೇವೆ.

ಆರೋಗ್ಯ ಕವಚ '108' ಅಂಬುಲೆನ್ಸ್ ಸೇವೆ ನಿರ್ವಹಿಸುವ ಎಮರ್ಜೆನ್ಸಿ ಮ್ಯಾನೇಜ್‌ಮೆಂಟ್ ರೀಸರ್ಚ್ ಇನ್ಸ್ಟಿಟ್ಯೂಟ್ (ಜಿವಿಕೆ– ಇಎಂಆರ್.ಐ.) ಸಂಸ್ಥೆಯ ಜತೆಗಿನ ಒಡಂಬಡಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದಿರುವ ಬಗ್ಗೆ ವರದಿಯಾಗಿದೆ. ಈ ಸಂಸ್ಥೆ ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿರುವ ದೂರುಗಳು ಬಂದಿವೆ.

'ತುರ್ತು ಸೇವೆ ನೀಡಲಾಗಿದೆ' ಎಂದು ಸುಳ್ಳು ದಾಖಲೆ ಸೃಷ್ಟಿಸಿ ಜಿವಿಕೆ– ಇಎಂಆರ್.ಐ. ಸಂಸ್ಥೆ ಹಣ ಪಡೆದಿರುವುದನ್ನು ದಾಖಲೆಗಳ ಸಹಿತ ಆರೋಗ್ಯ ಇಲಾಖೆ ಪತ್ತೆಹಚ್ಚಿದೆ. ಈ ಕುರಿತು ರಾಷ್ಟ್ರೀಯ ಆರೋಗ್ಯ ಅಭಿಯಾನದ ಮುಖ್ಯ ಆರ್ಥಿಕ ಅಧಿಕಾರಿಗೆ ಇದೇ ಜುಲೈ 2ರಂದು ಇಲಾಖೆ ಸಲ್ಲಿಸಿದ ವರದಿಯಲ್ಲಿದೆ ಎಂದು ನಾಡಿನ ಪ್ರಮುಖ ಪತ್ರಿಕೆ ವರದಿ ಮಾಡಿದೆ.

ಜಿವಿಕೆ– ಇಎಂಆರ್ಐ ಜೊತೆ 2008ರ ಆ. 14ರಂದು 10 ವರ್ಷ ಅವಧಿಗೆ ಟೆಂಡರ್ ಇಲ್ಲದೆ ಸೇವೆ ನೀಡಲು ಸರ್ಕಾರ ಒಡಂಬಡಿಕೆ ಮಾಡಿಕೊಂಡಿತ್ತು. ಆದರೆ, ಆರಂಭದಿಂದ 2016–17ನೇ ಸಾಲಿನವರೆಗೆ ಸೇವೆ ಸಲ್ಲಿಸಿದ ಕುರಿತು ಸಂಸ್ಥೆ ಸಲ್ಲಿಸಿದ್ದ ಕೋಟ್ಯಂತರ ಮೊತ್ತದ ಬಿಲ್ಲಗಳನ್ನು ಪರಿಶೀಲಿಸದೆ ಹಣ ನೀಡಲಾಗಿದೆ. ಅಲ್ಲದೆ, ರೂ 42 ಕೋಟಿ ಹೆಚ್ಚುವರಿ ಪಾವತಿ ಆಗಿತ್ತು.

ಸಂಸ್ಥೆಗೆ 2015–16, 2016–17 ಮತ್ತು 2017–18ರಲ್ಲಿ ಸಾಲುಗಳಲ್ಲಿ ನಿಗದಿಪಡಿಸಿದ ಅನುದಾನಕ್ಕಿಂತ ಹೆಚ್ಚುವರಿಯಾಗಿ, ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ (ಎನ್.ಎಚ್.ಎಂ) ಕ್ರಮವಾಗಿ ರೂ 4.71 ಕೋಟಿ, ರೂ 7.38 ಕೋಟಿ ಮತ್ತು ರೂ. 20.94 ಲಕ್ಷ ಸೇರಿ ಒಟ್ಟು 12.30 ಕೋಟಿ ಬಿಡುಗಡೆ ಮಾಡಿರುವ ಬಗ್ಗೆಯೂ ವರದಿ ಉಲ್ಲೇಖಿಸಿದೆ. ಹೀಗಾಗಿ, ಈ ಮೂರೂ ಸಾಲುಗಳ ಲೆಕ್ಕ ಪರಿಶೋಧನೆ ನಡೆಸುವಂತೆಯೂ ಶಿಫಾರಸು ಮಾಡಲಾಗಿದೆ.

'2017–18ನೇ ಸಾಲಿನಲ್ಲಿ ಸಂಸ್ಥೆ ಸಲ್ಲಿಸಿದ್ದ ರೂ. 140 ಕೋಟಿಯ ಬಿಲ್ ಪಾವತಿಸುವ ಸಂದರ್ಭದಲ್ಲಿ ಹಿಂದಿನ ವರ್ಷ ಹೆಚ್ಚುವರಿಯಾಗಿ ಪಾವತಿಸಿದ್ದ ಹಣ (ರೂ. 42 ಕೋಟಿ) ಕಡಿತಗೊಳಿಸುವ ಜೊತೆಗೆ ಎಲ್ಲ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಬಳಿಕ ರೂ. 72 ಕೋಟಿ ಮಾತ್ರ ನೀಡಲಾಗಿದೆ' ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆಯೆಂದು ವರದಿಯಾಗಿದೆ. ಇತರ ರಾಜ್ಯಗಳಲ್ಲಿ ಇದೇ ಸಂಸ್ಥೆ ಬಗ್ಗೆ ಹಲವು ದೂರುಗಳು ಇವೆ. ಈ ನಿಟ್ಟಿನಲ್ಲಿ ಸರಿಯಾದ ತನಿಖೆ ನಡೆಯಬೇಕಾಗಿದೆ. ●

ಕಾನೂನಾತ್ಮಕ ಹಕ್ಕಾಗಿ ಎಂಎಸ್‌ಪಿ–'ಚಾರಿತ್ರಿಕ' ಪ್ರಕಟಣೆಯ ನಂತರ ಈಗ 'ಚಾರಿತ್ರಿಕ' ಸವಾಲು–ಅಚ್ಛೇ ದಿನ್‌ವಾಲಾಗಳು ಸ್ವೀಕರಿಸುತ್ತಾರೆಯೇ?

ಕಳೆದ ವಾರ ಮುಂಗಾರು ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ) 'ಚಾರಿತ್ರಿಕ' ಎಂದು ಪ್ರಧಾನ ಮಂತ್ರಿಗಳು ಮತ್ತು ಎಲ್ಲ ಅಚ್ಛೇದಿನ್‌ವಾಲಾಗಳು ಹಾಡಿ ಹೊಗಳಿದರು. ಅದರ ಬೆನ್ನಿಗೇ ಯಾವ ಆಧಾರದಲ್ಲಿ ಈ ಎಂಎಸ್‌ಪಿಗಳನ್ನು ಪ್ರಕಟಿಸಲಾಗುತ್ತದೋ ಅದನ್ನು ಒದಗಿಸುವ ಕೃಷಿ ಖರ್ಚುಗಳು ಮತ್ತು ಬೆಲೆಗಳ ಆಯೋಗ(ಸಿಎಸಿಪಿ) ಕನಿಷ್ಟ ಬೆಂಬಲ ಬೆಲೆಗಳು ನಿಜವಾಗಿಯೂ ರೈತರಿಗೆ ಸಿಗುವಂತೆ ಮಾಡುವುದೂ ಒಂದು ದೊಡ್ಡ ಸವಾಲು ಎಂದಿರುವುದಾಗಿ ವರದಿಯಾಗಿದೆ. ಇದು ರೈತರಲ್ಲಿ ವಿಶ್ವಾಸ ಮೂಡಿಸುತ್ತದೆ ಮಾತ್ರವಲ್ಲ, ವಿಶ್ವ ಮಾರುಕಟ್ಟೆಗಳಲ್ಲಿ ಭಾರತ ಸ್ಪರ್ಧೆಮಾಡಲು ಸಮರ್ಥವಾಗಬೇಕಾದರೂ ಕೂಡ ಇದು ಅಗತ್ಯ ಎಂದಿದೆ. ಇದಕ್ಕಾಗಿ ಕೇಂದ್ರ ಸರಕಾರ ರೈತರಿಗೆ ಕನಿಷ್ಟ ಬೆಂಬಲ ಬೆಲೆಯನ್ನು ಹಕ್ಕಾಗಿ ಮಾಡುವ ಒಂದು ಶಾಸನವನ್ನು ತರಬೇಕು ಎಂದು ಅದು ಅಭಿಪ್ರಾಯ ಪಟ್ಟಿದೆ.

ಎಂಎಸ್‌ಪಿ ಪ್ರಯೋಜನನ 'ರೈತರಿಗೆ ನಿಜವಾಗಿಯೂ ಸಿಗುತ್ತದೆ ಎಂದು ಪ್ರಧಾನ ಮಂತ್ರಿಗಳು ಮತ್ತು ಸರಕಾರ ಭಾವಿಸಿದ್ದಾರೆಯೇ? ಅದು ಕೆಲವೇ ರೈತರಿಗೆ, ಅದು ಕೂಡ ಕೆಲವೇ ಬೆಳೆಗಳಿಗೆ ಮಾತ್ರ ಸಿಗುತ್ತದೆ ಎಂದು ಸರಕಾರದ ಆಹಾರ ಮತ್ತು ಸಾರ್ವಜನಿಕ ವಿತರಣೆಯ ವಿಭಾಗದ ವರದಿಗಳೇ ಹೇಳುತ್ತಿವೆ ಎನ್ನುತ್ತಾರೆ ಪರಿಣಿತರು(ಸುಭೋದ್ ವರ್ಮ, ನ್ಯೂಸ್‌ಕ್ಲಿಕ್, ಜುಲೈ7)

ರೈತರಿಗೆ ಕನಿಷ್ಟ ಬೆಂಬಲ ಬೆಲೆ ಸಿಗುವುದು ಸರಕಾರ ಖರೀದಿ ಮಾಡಿದಾಗ ಮಾತ್ರ. ಖಾಸಗಿಯವರು ಈ ಬಗ್ಗೆ ಕ್ಯಾರೇ ಅನ್ನುವುದಿಲ್ಲ. ರೈತರ ತುರ್ತಿಗೆ ಅನುಸಾರವಾಗಿ ಇದು ಕೆಳಗಿಳಿಯುತ್ತ ಹೋಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ಸರಳ ಸಂಗತಿ. ಸರಕಾರದ ಖರೀದಿಯ ಅಂಕಿ–ಅಂಶಗಳನ್ನು ನೋಡಿ:

* ಕಳೆದ ನಾಲ್ಕು ವರ್ಷಗಳಲ್ಲಿ ಸರಕಾರ ಖರೀದಿಸಿದ ಗೋದಿಯ ಪ್ರಮಾಣ ಒಟ್ಟು ಉತ್ಪಾದನೆಯ 28ರಿಂದ 30% ದ ಒಳಗೇ ಇದೆ. ಕಳೆದ ವರ್ಷ 30.8%, 2016–17ರಲ್ಲಿ ಕೇವಲ 22.9%
* ಭತ್ತದ ಖರೀದಿಯ ಪ್ರಮಾಣ 30ರಿಂದ 35%. ಕಳೆದ ವರ್ಷ 35.3%, 2014–15ರಲ್ಲಿ 32%.
* ಜೋಳ, ರಾಗಿ ಸಜ್ಜೆ ಮುಂತಾದವುಗಳ ಖರೀದಿಯಂತೂ ಶೋಚನೀಯ ಪ್ರಮಾಣದಲ್ಲಿದೆ. 2017–18ರಲ್ಲಿ ಒಟ್ಟು ಉತ್ಪಾದನೆಯ ಕೇವಲ 0.086%. 2014–15ರಲ್ಲಿ ಇದು 0.47% ಇತ್ತು. ಈ ಬೆಳೆಗಳನ್ನು ಹೆಚ್ಚಾಗಿ ಮಳೆಯನ್ನು ಅವಲಂಬಿಸಿರುವ ಸಣ್ಣ ರೈತರು ಬೆಳೆಯುತ್ತಾರೆ ಎಂಬ ಸಂಗತಿಯತ್ತವೂ ಪರಿಣಿತರು ನಮ್ಮ ಗಮನ ಸೆಳೆಯುತ್ತಾರೆ.

ವಾಸ್ತವವಾಗಿ ಸಣ್ಣ ರೈತರಿಗೇ ಎಂಎಸ್‌ಪಿಯ ಅಗತ್ಯ ಹೆಚ್ಚಿರುವುದು. ಆದರೆ ಅವರಿಗೇ ಅತ್ಯಂತ ಕಡಿಮೆ ದಕ್ಕುವುದು. ಭತ್ತ ಮತ್ತು ಗೋದಿಯ ವಿಷಯದಲ್ಲೂ ಇದು ನಿಜ.


ಆದ್ದರಿಂದಲೇ ಕನಿಷ್ಟ ಬೆಂಬಲ ಬೆಲೆಯ ಸೂತ್ರವನ್ನು ಶಿಫಾರಸು ಮಾಡಿದ ಪ್ರೊ. ಎಂಎಸ್ ಸ್ವಾಮಿನಾಥನ್ ಕೂಡ ಅವು ರೈತರಿಗೆ ನಿಜವಾಗಿಯೂ ಸಿಗುವಂತೆ ಕಾನೂನು ಪ್ರಕಾರ ಅಥವ ಬೇರಾವ ರೀತಿಯಲ್ಲಾದರೂ ಖಾತ್ರಿಗೊಳಿಸಬೇಕು ಎಂದು ಬೆಂಗಳೂರಿನಲ್ಲಿ ಈ ಕುರಿತ ಪ್ರಶ್ನೆಗೆ ಉತ್ತರಿಸುತ್ತ ಅಭಿಪ್ರಾಯ ಪಟ್ಟಿದ್ದಾರೆ

ರೈತ ಸಂಘಟನೆಗಳು ಈ ಮೊದಲೇ ಈ ಬೇಡಿಕೆಯನ್ನು ಸರಕಾರದ ಮುಂದಿಟ್ಟಿವೆ. ಕಳೆದ ವರ್ಷ ದಿಲ್ಲಿಯಲ್ಲಿ ನಡೆಸಿದ ಕಿಸಾನ್ ಸಂಸದ್ ಈ ಕುರಿತ ಒಂದು ಮಸೂದೆಯನ್ನೂ ತಯಾರಿಸಿ ಚರ್ಚಿಸಿದೆ. ಅದರ ಮೇಲೆ ದೇಶದ ಹಲವೆಡೆಗಳಲ್ಲಿ ಚರ್ಚೆಗಳನ್ನೂ ಏರ್ಪಡಿಸಲಾಗಿದೆ. ಕಳೆದ ವರ್ಷ ಜೂನ್15ರಂದು ಈ ಕುರಿತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರೂ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದರು. ಈಗ ಸಂಬಂಧಪಟ್ಟ ಆಯೋಗವೇ ಹೇಳುತ್ತಿದೆ.

ಇತ್ತೀಚಿನ ಎಂಎಸ್‌ಪಿ ಪ್ರಕಟಣೆ 'ಚಾರಿತ್ರಿಕ' ಎನ್ನುತ್ತ ಪ್ರಧಾನಿಗಳು ತಮ್ಮ ಸರಕಾರ ಕೃಷಿ ವಲಯದ ಅಭಿವೃದ್ಧಿಗೆ ಮತ್ತು ಕೃಷಿಯಲ್ಲಿ ತೊಡಗಿರುವವರ ಕಲ್ಯಾಣಕ್ಕೆ ಇನ್ನು ಮುಂದೆಯೂ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದಿದ್ದರು.

ತಕ್ಷಣವೇ ಏನು ಕ್ರಮ ಕೈಗೊಳ್ಳಬೇಕೆಂದು ಪರಿಣಿತರೂ, ರೈತರೂ ಒಮ್ಮತದಿಂದ ಕೇಳುತ್ತಿರುವಾಗ ಅಚ್ಛೇದಿನ್ ಪ್ರಧಾನಮಂತ್ರಿಗಳು ಇದಕ್ಕೆ ಕಿವಿಗೊಡದಿರಲು ಸಾಧ್ಯವೇ?

ಬಹುಪಾಲು ರೈತರಿಗೆ ತಾವು ಪ್ರಕಟಿಸಿದ 'ಚಾರಿತ್ರಿಕ' ಎಂಎಸ್‌ಪಿ ದಕ್ಕುವುದೇ ಇಲ್ಲ ಎಂಬುದು ಸರಕಾರಕ್ಕೂ ಚೆನ್ನಾಗಿ ಗೊತ್ತಿರುತ್ತದೆ. ಆದ್ದರಿಂದ ಯುಜಿಸಿಯನ್ನು ರದ್ದು ಮಾಡಲು, ವಿದೇಶಿ ವಂತಿಗೆಗಳ ತಿದ್ದುಪಡಿಯನ್ನು ಪಾಸು ಮಾಡಿಸಿಕೊಳ್ಳಲು ತೋರುತ್ತಿರುವ ತರಾತುರಿಯನ್ನು ಸರಕಾರ ರೈತರಿಗೆ ಎಂಎಸ್‌ಪಿ ದಕ್ಕುವಂತೆ ಮಾಡುವ ಕ್ರಮ ವಿಷಯದಲ್ಲೂ ತೋರಬೇಕು ಎಂಬ ನಿರೀಕ್ಷೆ ಸಹಜವೇ. ಆದರೆ ಅಚ್ಛೇ ದಿನ್ ಸರಕಾರ ತನ್ನ ಅಧಿಕಾರಾವಧಿಯ ಈ ಕೊನೆಯ ವರ್ಷದಲ್ಲೂ ಮಾಡುವುದಿಲ್ಲ ಎನ್ನುತ್ತಾರೆ ಕೆಲವು ವೀಕ್ಷಕರು. ಹಾಗಿದ್ದರೆ ಪ್ರತಿಪಕ್ಷಗಳು ಹೇಳುವಂತೆ ಕಳೆದ ವಾರದ 'ಚಾರಿತ್ರಿಕ' ಪ್ರಕಟಣೆ ಇನ್ನೊಂದು ಚುನಾವಣಾ 'ಜುಮ್ಲಾ' ಅಥವ ಬೊಗಳೆ ಮಾತ್ರವೇ? ಅಷ್ಟೇಅಲ್ಲ, ಇನ್ನು ಕೆಲವರು ವರ್ಣಿಸುವಂತೆ ಇದು ಡಬಲ್ ಮೋಸ ಎಂದೂ ಸಾಬೀತಾಗುತ್ತದೆ



ಇಬ್ಬರು ಮಂತ್ರಿಗಳು–ಒಬ್ಬ ಐಎಎಸ್ ಅಧಿಕಾರಿ ಅಚ್ಛೇ ದಿನ್ ಶಬ್ದಕೋಶದಲ್ಲಿ 'ಅಶಿಸ್ತು' ಮತ್ತು ಅಪ್ರಾಮಾಣಿಕತೆ

ಅಚ್ಛೇದಿನ್ ಸರಕಾರದ ಮಂತ್ರಿಗಳೊಬ್ಬರು ಒಂದು ವರ್ಷದ ಹಿಂದೆ ಜನಜಂಗುಳಿ ಹಿಂಸಾಚಾರಕ್ಕೆ ಬಲಿಯಾದ ಅಲಿಮುದ್ದಿನ್ ಅನ್ಸಾರಿಯನ್ನು ಬಡಿದು ಸಾಯಿಸಿದ ಅಪರಾಧಕ್ಕೆ ಫಾಸ್ಟ್ ಟ್ರಾಕ್ ಕೋರ್ಟಿನಿಂದ ಶಿಕ್ಷಗೊಳಗಾದವರು ಹೈಕೋರ್ಟಿನ ತಾತ್ಕಾಲಿಕ ಆದೇಶದಂತೆ ಹೊರಬಂದಾಗ ಅವರನ್ನು ತಮ್ಮ ನಿವಾಸಕ್ಕೆ ಆಹ್ವಾನಿಸಿ ಹೂಮಾಲೆ ಹಾಕಿ ಸ್ವಾಗತಿಸಿದ ಸುದ್ದಿಯಿಂದ ಚೇತರಿಸಿಕೊಳ್ಳುತ್ತಿದ್ದಂತೆಯೇ ಇನ್ನೊಬ್ಬ ಅಚ್ಛೇ ದಿನ್ ಮಂತ್ರಿ ಜೈಲಿಗೇ ಹೋಗಿ ಗಲಭೆಗಳ ಆಪಾದನೆಗೆ ಒಳಗಾಗಿರುವುವವರನ್ನು ಭೇಟಿಯಾಗಿ ಬಂದ ಸುದ್ದಿ ಬಂದಿದೆ.

ಹೂಮಾಲೆ ಹಾಕಿದ ಮಂತ್ರಿ ತಾನು ಕಾನೂನಿನ ಪ್ರಕ್ರಿಯೆಯನ್ನು ಗೌರವಿಸುತ್ತಿದ್ದೇನೆ ಎಂದು ಸಮರ್ಥಿಸಿಕೊಂಡರು. ಕೆಳಗಿನ ಕೋರ್ಟ್‌ನಲ್ಲಿ ಬಡಿದು ಸಾಯಿಸಿದವರೆಂದು ಶಿಕ್ಷೆಗೊಳಗಾದವರು ಹೈಕೋರ್ಟಿಗೆ ಅಪೀಲು ಹೋದಾಗ ಅವರ ಶಿಕ್ಷೆಯನ್ನು ಹೈಕೋರ್ಟ್ ಅಮಾನತು ಮಾಡಿದೆ ಎಂಬ ಅರ್ಥದಲ್ಲಿ ಅವರು ಕಾನೂನಿನ ಪ್ರಕ್ರಿಯೆಯನ್ನು ಗೌರವಿಸುತ್ತಿದ್ದಾರೋ ಏನೋ. ಆದರೆ ಹೈಕೋರ್ಟ್ ಕೂಡ ಅವರ ಶಿಕ್ಷೆಯನ್ನು ಅಮಾನತು ಮಾಡಿರುವುದಷ್ಟೇ ರದ್ದು ಮಾಡಿಲ್ಲ ಎಂಬುದನ್ನು ಕೆಲವರು ಮಾನ್ಯ ಮಂತ್ರಿಗಳಿಗೆ ನೆನಪಿಸಿದ್ದಾರೆ.

ಈಗ ಈ ಮಂತ್ರಿಗಳು ತಾವು ಕಾವಲುಕೋರತನವನನು ಬೆಂಬಲಿಸುವದಿಲ್ಲ ಎನ್ನುತ್ತ, ಹಾಗೇನಾದರೂ ಕಂಡಿದ್ದರೆ ಕ್ಷಮೆ ಕೋರುತ್ತೇನೆ ಎಂದಿದ್ದಾರೆ.

ಗಲಭೆಗಳ ಆಪಾದನೆಯಿದ್ದವರನ್ನು ಜೈಲಿನಲ್ಲೇ ಭೇಟಿ ಮಾಡಿದ ಮಂತ್ರಿಗಳು ಅವರು ಗಲಭೆ ಮಾಡಿಯೇ ಇಲ್ಲ, ವಾಸ್ತವವಾಗಿ ಶಾಂತಿ ಸ್ಥಾಪಿಸಲು ಪ್ರಯತ್ನ ಪಟ್ಟವರು ಎಂದು ಈ ಭಜರಂಗ್ ದಳ ಮತ್ತು ವಿಹೆಚ್‌ಪಿ ಮುಖಂಡರಿಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಜತೆಗೆ ಈಗ ತಮ್ಮದೇ ಮೈತ್ರಿಯಿರುವ ಸರಕಾರಕ್ಕೆ 'ಹಿಂದೂಗಳನ್ನು ದಮನ ಮಾಡುವ ಮನೋಭಾವದ ಸರಕಾರ ಎಂದು ಸರ್ಟಿಫಿಕೇಟ್ ದಯಪಾಲಿಸಿದ್ದಾರೆ.

ಇಷ್ಟೆಲ್ಲ ನಡೆಯುವಾಗಲೂ ಯಥಾಪ್ರಕಾರ ಈ ಎರಡೂ ಸುದ್ದಿಗಳ ಬಗ್ಗೆ ಅದೇ ಸರಕಾರದ ಮುಖ್ಯಸ್ಥರ ಟ್ವೀಟ್‌ಗಳೇನೂ ಇಲ್ಲ. ಗೃಹಮಂತ್ರಿಗಳದ್ದೂ ದಿವ್ಯ ಮೌನ. ಆದರೆ ಈ ನಡುವೆ ಜಮ್ಮು ಮತ್ತು ಕಾಶ್ಮೀರದ ಐಎಎಸ್ ಅಧಿಕಾರಿಯೊಬ್ಬರು ಕಥುವಾದಲ್ಲಿ 8ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಿದ ಪ್ರಕರಣದ ನಂತರ ಮಾಡಿದ ಟ್ವೀಟ್ ಮೇಲೆ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅದೇ ಗೃಹಮಂತ್ರಿಗಳು ಆದೇಶ ನೀಡಿದ್ದಾರೆ ಎಂಬ ಸುದ್ದಿಯೂ ಬಂದಿದೆ.

ಪಿತೃಪ್ರಾಧಾನ್ಯ+ಜನಸಂಖ್ಯೆ+ಅನಕ್ಷರತೆ+ಅಲ್ಕೋಹಾಲ್+ಪೋರ್ನ್+ತಂತ್ರಜ್ಞಾನ+ ಅರಾಜಕತೆ= ರೇಪಿಸ್ತಾನ್ ಎಂಬ ಅವರ ಟಿಪ್ಪಣಿಗೆ ಅವರ ಮೇಲೆ ಅಶಿಸ್ತು, ಭ್ರಷ್ಟತೆ ಮತ್ತು ಅಪ್ರಾಮಾಣಿಕತೆಯ ಆಪಾದನೆ ಹಾಕಲಾಗಿದೆ.

ಆದರೆ ತಾನೇನೂ ಸರಕಾರದ ಧೋರಣೆಯನ್ನು ಟೀಕಿಸಿಲ್ಲ, ರೇಪ್ ಅಂದರೆ ಅತ್ಯಾಚಾರ ಸರಕಾರದ ಧೋರಣೆಯೇನಲ್ಲ, ಆದ್ದರಿಂದ ಅದರ ವಿರುದ್ಧ ಟಿಪ್ಪಣಿ ಮಾಡುವುದು ಸರಕಾರದ ಟೀಕೆ ಹೇಗಾಗಲು ಸಾಧ್ಯ ಎಂದು ಮಾರ್ಮಿಕವಾಗಿ ಅವರು ಪ್ರಶ್ನಿಸಿದ್ದಾರೆ.

ಕಾವಲುಕೋರತನ ನಡೆಸಿದವರು ಮತ್ತು ಬಡಿದು ಸಾಯಿಸಿದವರನ್ನು ಬೆಂಬಲಿಸಿದವರ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾದರೂ ಆ ಬಗ್ಗೆ ಪ್ರಧಾನಿಗಳ, ಗೃಹಮಂತ್ರಿಗಳ ದಿವ್ಯಮೌನದ ಅರ್ಥ ಅದು ಸರಕಾರದ ಧೋರಣೆಯೆಂದಿರಬಹುದೇ, ಆದ್ದರಿಂದ ಅಶಿಸ್ತು ಮತ್ತು ಅಪ್ರಾಮಾಣಿಕತೆ ಆಗುವುದಿಲ್ಲವೇ ಎಂದು ಇನ್ನೊಬ್ಬರು ಪ್ರಶ್ನಿಸಿದ್ದಾರೆ.



ವ್ಯಂಗ್ಯಚಿತ್ರ: ಕೀರ್ತೀಶ್, ಬಿಬಿಸಿ

7.23 ಕೋಟಿ ರೂ. ಸರಕಾರೀ ಖರ್ಚಿನಲ್ಲಿ ರಾಜಕೀಯ ರ್‍ಯಾಲಿ

ಹೆಸರಿಗೆ ಅದು ರಾಜ್ಯ ಮತ್ತು ಕೇಂದ್ರ ಸ್ಕೀಮ್‌ಗಳ ಫಲಾನುಭವಿಗಳೊಡನೆಯ 'ಸಂವಾದ'ದ ಸಭೆ–ರಾಜಸ್ತಾನ ರಾಜ್ಯ ಸರಕಾರ 7.23 ಕೋಟಿ ರೂ. ಖರ್ಚು ಮಾಡಿ ರಾಜ್ಯದ ಎಲ್ಲೆಡೆಗಳಿಂದ 2.5ಲಕ್ಷ 'ಫಲಾನುಭವಿ'ಗಳನ್ನು ತಂದು ಸೇರಿಸಿತ್ತು. ಆದರೆ ಪ್ರಧಾನಿಗಳು ಅವರು ಯಾವ ಸ್ಕೀಮಿನ ಫಲಾನುಭವಿಗಳು, ಅವರ ಸಮಸ್ಯೆಗಳೇನಾದರೂ ಇದೆಯೇ ಏನೂ ಕೇಳಲಿಲ್ಲ, ಕೆಲವು ದಿನಗಳ ಹಿಂದೆ ರೈತರೊಡನೆ ವೀಡಿಯೋ ಸಂವಾದ ಎಂಬುದನ್ನು ಮಾಡಿದ್ದರು. ಅಲ್ಲಿ ಫಲಾನುಭವಿಗಳು ಎಂದು ಆರಿಸಿದವರ ಜೊತೆ ಹೆಸರಿಗಾದರೂ 'ಸಂವಾದ' ಇತ್ತು. ಇಲ್ಲಿ ಅದೂ ಇಲ್ಲ. ಬದಲಿಗೆ ಇದು ಸರಕಾರೀ ಸಮಾರಂಭ ಎಂಬುದನ್ನು ಪ್ರಧಾನಿಗಳೂ ಮರೆತಂತಿತ್ತು ಎಂದು ಕೆಲವು ಮಾಧ್ಯಮಗಳು ಟಿಪ್ಪಣಿ ಮಾಡಿವೆ. ಏಕೆಂದರೆ ಪ್ರಧಾನಿಗಳು ವಿವಿಧ ಸ್ಕೀಮುಗಳ ಬಗ್ಗೆ ಮಾತಾಡಲಿಲ್ಲ, ಪ್ರತಿಪಕ್ಷಗಳ ಬಗ್ಗೆ ಮಾತಾಡಿದರು, ಕಾಶ್ಮೀರ ಗಡಿಯಲ್ಲಿ ಸೇನೆಯ ಮಿಂಚಿನ ಪ್ರಹಾರವನ್ನು ಪ್ರಶ್ನಿಸಿ ಸೇನೆಗೆ ಅವಮಾನ ಮಾಡುತ್ತಿದ್ದಾರೆ ಎಂದರು, ಪ್ರತಿಪಕ್ಷಗಳ ಬಳಿ ಅಭಿವೃದ್ಧಿ ಅಜೆಂಡಾ ಇಲ್ಲೆಂದರು.

ಒಟ್ಟಿನಲ್ಲಿ ಇದು ಒಂದು ರಾಜಕೀಯ ಸಭೆ ಎಂಬುದನ್ನು ಅಲ್ಲಗಳೆಯಲು ಯಾರಿಗೂ ಸಾಧ್ಯವಿರಲಿಲ್ಲ. ವಾಸ್ತವವಾಗಿ ಚುನಾವಣಾ ಸಭೆಯಂತೆಯೇ ಇತ್ತು. ನಿಜವಾಗಿ ಅದು ಚುನಾವಣಾ ಪೂರ್ವ ಸಭೆಯೇ ಆಗಿತ್ತು. ಏಕೆಂದರೆ ಈ ವರ್ಷದ ಕೊನೆಯಲ್ಲಿ ಇಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿವೆ. ಅದಕ್ಕೆ ಸರಕಾರೀ ಖರ್ಚಿನಲ್ಲಿ ಪೂರ್ವ ತಯಾರಿ ಎಂಬುದು ಈಗ ಸಾರ್ವತ್ರಿಕವಾಗಿ ಕೇಳಿ ಬರುತ್ತಿರುವ ಟಿಪ್ಪಣಿ.

ಸರಕಾರೀ ಖರ್ಚಿನಲ್ಲಿ 2.5 ಲಕ್ಷ ಮಂದಿಯನ್ನು ಜೈಪುರಕ್ಕೆ ತರಲು ಎಲ್ಲ ತಂತ್ರಗಳನ್ನೂ ಬಳಸಲಾಯಿತು–ಜಿಲ್ಲಾ ಕಲೆಕ್ಟರುಗಳಿಂದ 'ಆಹ್ವಾನ' ಕಳಿಸಲಾಯಿತು, ಪ್ರಧಾನಿಗಳೊಂದಿಗೆ ಮಾತಾಡುವ ಅವಕಾಶ ಸಿಗುತ್ತದೆ ಎನ್ನಲಾಯಿತು, ಇವಕ್ಕೂ ಆಕರ್ಷಿತರಾಗದವರಿಗೆ ಸ್ಕೀಮಿನ ಫಲ ಸಿಗದಂತೆ ಮಾಡುವ ಬೆದರಿಕೆಯೂ ಇತ್ತು. ಉದಾ: ಜಲೋರ್‌ನ ಸಿಗ್ನಿಗೆ ರ್‍ಯಾಲಿಗೆ ಬರದಿದ್ದರೆ ಆಕೆಯ ರೇಗಾ ಕೂಲಿಗಳು ಇನ್ನು ಮುಂದೆ ಸಿಗದು ಎಂದು ಹೇಳಲಾಯಿತಂತೆ.

ಒಟ್ಟಿನಲ್ಲಿ ವೀಡಿಯೋ ಫಲಾನುಭವಿ ಸಂವಾದದ ನಂತರ 'ಫಲಾನುಭವಿಗಳೊಡನೆ ಸಂವಾದ'ದ ಹೊಸದೊಂದು ಪ್ರಯೋಗ!



ಅಮೆರಿಕ ಸಂಯುಕ್ತ ಸಂಸ್ಥಾನ ಇರಾನ್ ಮೇಲೆ ನಿರ್ಬಂಧ ಹೇರಿದ ನಂತರ ಇರಾನ್‌ನೊಡನೆ ವ್ಯವಹರಿಸಬಾರದು ಎಂಬ ತಾಕೀತಿಗೆ ಭಾರತ ಮಣಿಯುವಂತೆ ಕಾಣುತ್ತಿದೆ. ಭಾರತ ಸರಕಾರದ ತೈಲ ಮಂತ್ರಾಲಯ ನವಂಬರ್‌ನಿಂದ ಇರಾನೀ ತೈಲದ ಆಮದನ್ನು ಸೊನ್ನೆಗೆ ಇಳಿಸಲು ಸಿದ್ಧವಾಗಬೇಕು ಎಂದು ತೈಲ ಶುದ್ಧೀಕರಣ ಸ್ಥಾವರಗಳಿಗೆ ಹೇಳಿದೆ –ಸುದ್ದಿ

ವ್ಯಂಗ್ಯಚಿತ್ರ: ಹೇಮಂತ್ ಮೊರ್ಪರಿಯ

ಸಮಾಜವಾದಿ ವ್ಯವಸ್ಥೆಯಲ್ಲಿ ಎಂದೂ ಅತಿ–ಉತ್ಪಾದನೆಯ ಬಿಕ್ಕಟ್ಟುಗಳಿರಲಿಲ್ಲ ಏಕೆ?



ಬಂಡವಾಳಶಾಹಿ ವ್ಯವಸ್ಥೆ ಸಮಯ-ಸಮಯಕ್ಕೆ "ಅತಿ–ಉತ್ಪಾದನೆ"ಯ ಬಿಕ್ಕಟ್ಟುಗಳಿಗೆ ಒಳಗಾಗುತ್ತಿರುತ್ತದೆ, ಆಗ ಸಾಮೂಹಿಕ ನಿರುದ್ಯೋಗ ಹಾಗೂ ಬಳಕೆಯಾಗದ ಉತ್ಪಾದನಾ ಸಾಮರ್ಥ್ಯ ಜತೆ-ಜತೆಗೇ ಇರುವ ಪರಿಸ್ಥಿತಿಗಳು ಉಂಟಾಗುತ್ತವೆ. ೨೦೦೮ರ ನಂತರದ ಅವಧಿ ಇಂತವುಗಳಲ್ಲಿ ಒಂದು.

ಆದರೆ ಹಳೆಯ ಸಮಾಜವಾದಿ ವ್ಯವಸ್ಥೆಯಲ್ಲಿ ಏನೇ ಕೊರತೆಗಳಿದ್ದರೂ, ಇಂತಹ ಬಿಕ್ಕಟ್ಟಿನ ಪರಿಸ್ಥಿತಿ ಯಾವತ್ತೂ ಕಾಣಿಸಿಕೊಳ್ಳಲಿಲ್ಲ. ಅಷ್ಟೇ ಅಲ್ಲ, ಅಲ್ಲಿ ಶಾಶ್ವತ ಪೂರ್ಣ ಉದ್ಯೋಗದ ಪರಿಸ್ಥಿತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗಿತ್ತು ಎಂಬುದನ್ನು ಸಮಾಜವಾದದ ಟೀಕಾಕಾರರೂ ಒಪ್ಪಿಕೊಂಡಿದ್ದಾರೆ. ಇದು ಹೇಗೆ ಸಾಧ್ಯವಾಯಿತು? ಪ್ರೊ. ಪ್ರಭಾತ್ ಪಟ್ನಾಯಕ್ ಇಲ್ಲಿ ವಿಶ್ಲೇಷಿಸಿದ್ದಾರೆ.

ಅನುವಾದ: ಕೆ. ಎಂ.ನಾಗರಾಜ್

ಅನೇಕ ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಬಿದ್ದಿದೆ. ಸಮಾಜವಾದಿ ವ್ಯವಸ್ಥೆ ಈಗಲೂ ಮುಂದುವರಿಯುತ್ತಿರುವ ಕೆಲವು ದೇಶಗಳಲ್ಲಿ ಆರ್ಥಿಕ ಸುಧಾರಣೆಗಳು ಗಣನೀಯ ಪ್ರಮಾಣದಲ್ಲಿ ಆಗಿವೆ. ಪರಿಣಾಮವಾಗಿ, ಹಳೆಯ ಸಮಾಜವಾದಿ ಆಡಳಿತಗಳು ಅವಹೇಳನಕ್ಕೆ ಗುರಿಯಾಗಿರುವುದು ಆಶ್ಚರ್ಯವೇನಲ್ಲ. ಇಂತಹ ಅವಹೇಳಕಾರಿ ಪ್ರಚಾರವನ್ನು ಪ್ರೋತ್ಸಾಹಿಸುವ ಮೂಲಕ ಬಂಡವಾಳಶಾಹಿಯು ತನ್ನ ಹಿತಾಸಕ್ತಿ ಕಾಪಾಡಿಕೊಳ್ಳುತ್ತದೆ. ಈ ಅಪಪ್ರಚಾರವನ್ನು ಬಯಲುಮಾಡಲು ಪ್ರಯತ್ನಿಸಬೇಕಾದ ಎಡ ಪಂಥೀಯರು ಇನ್ನೂ ಆಘಾತಕ್ಕೊಳಗಾದ ಮನಸ್ಥಿತಿಯಿಂದ ಹೊರಬಂದಿಲ್ಲ.

ಹಳೆಯ ಸಮಾಜವಾದಿ ಆಡಳಿತಗಳಲ್ಲಿ ಕೆಲವು ಗಂಭೀರ ಸಮಸ್ಯೆಗಳಿದ್ದವು, ನಿಜ. ಎಲ್ಲಕ್ಕಿಂತ ಮುಖ್ಯವಾಗಿ, ಯಾವ ವರ್ಗ ಸರ್ವಾಧಿಕಾರವನ್ನು ಈ ಆಡಳಿತಗಳು ಪ್ರತಿನಿಧಿಸಬೇಕಿತ್ತೋ ಆ ಕಾರ್ಮಿಕ ವರ್ಗ ರಾಜಕೀಯದಿಂದ ದೂರ ಸರಿದ ಸಮಸ್ಯೆ ಅದು. ಅದೇ ಸಮಯದಲ್ಲಿ, ಶ್ರಮಜೀವಿಗಳ ಬಗ್ಗೆ ಮಾನವ ಇತಿಹಾಸದಲ್ಲೇ ಕಂಡರಿಯದ ರೀತಿಯ ಕಾಳಜಿಯುಳ್ಳ ಒಂದು ಅರ್ಥವ್ಯವಸ್ಥೆಯನ್ನು ಈ ಆಡಳಿತಗಳು ಸೃಷ್ಟಿಸಿದವು ಎಂಬುದನ್ನು ಎಂದಿಗೂ ಮರೆಯುವಂತಿಲ್ಲ.

ಸಮಾಜವಾದಿ ಅರ್ಥವ್ಯವಸ್ಥೆಯ ಮಹತ್ವ ಈ ಒಂದು ಸಣ್ಣ ಪ್ರಶ್ನೆಯನ್ನು ಕೇಳಿಕೊಂಡಾಗ ಸ್ಪಷ್ಟವಾಗುತ್ತದೆ: ಬಂಡವಾಳಶಾಹಿ ಅರ್ಥವ್ಯವಸ್ಥೆಯ ಶಾಶ್ವತ ಲಕ್ಷಣದಂತಿರುವ ಅತಿ ಉತ್ಪಾದನೆಯ(over-production – ಅಂದರೆ, ಎಷ್ಟು ಬೇಕೋ ಅದಕ್ಕಿಂತ ಹೆಚ್ಚಿನ ಉತ್ಪಾದನೆ) ಬಿಕ್ಕಟ್ಟುಗಳು ಏಕೆ ಹಳೆಯ ಸಮಾಜವಾದಿ ವ್ಯವಸ್ಥೆಯಲ್ಲಿ ಯಾವತ್ತೂ ಕಾಣಿಸಿಕೊಳ್ಳಲಿಲ್ಲ? ಬಂಡವಾಳಶಾಹಿಯು ಯಾವತ್ತೂ "ಶಾಶ್ವತವಾಗಿ ಸಾಮಾನ್ಯ ಅತಿ–ಉತ್ಪಾದನ"ಯ ಸಸ್ಥಿತಿಯಲ್ಲಿ ಸಿಲುಕಿಕೊಂಡೇ ಇರುತ್ತದೆ ಎಂದು ಕ್ರಾಂತಿಕಾರಿ ನಾಯಕಿ ರೋಸಾ ಲಕ್ಸೆಂಬರ್ಗ್, ಸಾಮ್ರಾಜ್ಯಶಾಹಿ ಇರದಿದ್ದಾಗ ಕಂಡಿದ್ದರು ಎಂದಿದ್ದಾರೆ ನಿಕೊಲಾಯ್ ಬುಖಾರಿನ್. ಆಕೆಯ ವಾದವನ್ನು ಯಾರಾದರೂ ಒಪ್ಪಲಿ ಅಥವಾ ಒಪ್ಪದಿರಲಿ, ಬಂಡವಾಳಶಾಹಿ ವ್ಯವಸ್ಥೆ ಸಮಯ–ಸಮಯಕ್ಕೆ "ಸಾಮಾನ್ಯ ಅತಿ–ಉತ್ಪಾದನೆ"ಯ ಬಿಕ್ಕಟ್ಟುಗಳಿಗೆ ಒಳಗಾಗುತ್ತಿರುತ್ತದೆ, ಆಗ ಸಾಮೂಹಿಕ ನಿರುದ್ಯೋಗ ಹಾಗೂ ಬಳಕೆಯಾಗದ ಉತ್ಪಾದನಾ ಸಾಮರ್ಥ್ಯ ಜತೆ–ಜತೆಗೇ ಇರುವ ಪರಿಸ್ಥಿತಿಗಳು ಉಂಟಾಗುತ್ತವೆ. ಏಕೆಂದರೆ, ಅಲ್ಲಿ ಒಟ್ಟಾರೆ ಬೇಡಿಕೆಯ ಪ್ರಮಾಣವು ಸಾಕಾಗುವಷ್ಟು ಇರುವುದಿಲ್ಲ ಎಂಬ ಅಂಶವನ್ನು ನಿರಾಕರಿಸುವಂತಿಲ್ಲ. ವಾಸ್ತವವಾಗಿ, 2008ರ ನಂತರದ ಅವಧಿ ಇಂತವುಗಳಲ್ಲಿ ಒಂದು. ಇಡೀ ಜಾಗತಿಕ ಅರ್ಥವ್ಯವಸ್ಥೆಯನ್ನು ಒಟ್ಟಾಗಿ ನೋಡಿದಾಗ ಒಂದು ದೀರ್ಘ ಕಾಲದ ಅತಿ–ಉತ್ಪಾದನಾ ಬಿಕ್ಕಟ್ಟು ಕಾಣಿಸುತ್ತದೆ.

ಆದರೆ ಹಳೆಯ ಸಮಾಜವಾದಿ ವ್ಯವಸ್ಥೆಯಲ್ಲಿ ಇಂತಹ ಬಿಕ್ಕಟ್ಟಿನ ಪರಿಸ್ಥಿತಿ ಯಾವತ್ತೂ ಕಾಣಿಸಿಕೊಳ್ಳಲಿಲ್ಲ. ಅಷ್ಟೇ ಅಲ್ಲ, ಮತ್ತು ಅಲ್ಲಿ ಶಾಶ್ವತ ಪೂರ್ಣ ಉದ್ಯೋಗದ ಪರಿಸ್ಥಿತಿ ಉಳಿಸಿಕೊಳ್ಳು ಸಾಧ್ಯವಾಗಿತ್ತು ಎಂಬುದನ್ನು ಸಮಾಜವಾದದ ಟೀಕಾಕಾರರಾದ ಹಂಗೇರಿಯನ್ ಆರ್ಥಶಾಸ್ತ್ರಜ್ಞ ಯಾನೊಸ್ ಕೊಮಯ್ ಸಹ ಒಪ್ಪಿಕೊಂಡಿದ್ದಾರೆ. ಹಾಗಾದರೆ, ಇದು ಹೇಗೆ ಸಾಧ್ಯವಾಯಿತು?

ಈ ಪ್ರಶ್ನೆಗೆ ಸರಿಸುಮಾರಾದ ಉತ್ತರ ಹೇಳುವುದಾದರೆ, ಹಳೆಯ ಸಮಾಜವಾದಿ ದೇಶಗಳದ್ದು ಯೋಜನಾಬದ್ಧ ಅರ್ಥವ್ಯವಸ್ಥೆಯಾಗಿತ್ತು, ಮತ್ತು ಅದು ಮಾರುಕಟ್ಟೆ ಪ್ರೇರಿತವಾದದ್ದಲ್ಲ, ಆದ್ದರಿಂದ ಮಾರುಕಟ್ಟೆಯ 'ಸ್ವಯಂಪ್ರೇರಣೆ'ಗೆ ಅದು ಒಳಗಾಗಿರಲಿಲ್ಲ ಎಂಬುದು. ಆದರೆ ನಾವು ಇನ್ನೂ ಮುಂದೆ ಹೋಗಿ, ಹಳೆಯ ಸಮಾಜವಾದಿ ವ್ಯವಸ್ಥೆಯು ಅತಿ–ಉತ್ಪಾದನೆಯ ಬಿಕ್ಕಟ್ಟಿಗೆ ಎಡೆ ಮಾಡಿಕೊಡದಂತೆ ಯೋಜನಾಬದ್ಧವಾಗಿ ಪೂರ್ಣ ಪ್ರಮಾಣದ ಶಾಶ್ವತ ಉದ್ಯೋಗ ಒದಗಿಸಿದ ಬಗೆ ಯಾವುದು ಎಂಬ ಮತ್ತೊಂದು ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಈ ಪ್ರಶ್ನೆಗೆ ಪೋಲೆಂಡ್ ಮೂಲದ ಪ್ರಸಿದ್ಧ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ ಮಿಕೆಲ್ ಕಲೇಕಿ ಕೊಟ್ಟಿರುವ ಸರಳ ಉತ್ತರ ಹೀಗಿದೆ:.

ಬಂಡವಾಳಶಾಹಿ ಅರ್ಥವ್ಯವಸ್ಥೆಯು ಅತಿ–ಉತ್ಪಾದನೆಯ ಬಿಕ್ಕಟ್ಟಿಗೆ ಒಳಗಾಗಲು ಕಾರಣ, ಅಲ್ಲಿ ಹೂಡಿಕೆಯಾಗುವ ಬಂಡವಾಳ ದಾಸ್ತಾನು ಎಂಬ ಅರ್ಥದಲ್ಲಿ, ಹೂಡಿಕೆಗೆ ತಕ್ಕ ದರದಲ್ಲಿ ಲಾಭ ತಂದುಕೊಡುತ್ತದೆಯೇ ಎಂಬ ಬಂಡವಾಳಿಗರ ಲೆಕ್ಕಾಚಾರವನ್ನು ಅವಲಂಬಿಸುತ್ತದೆ. ನಿರೀಕ್ಷಿತ ಲಾಭ ಬರುವಂತಿದ್ದರೆ ಬಂಡವಾಳಿಗರು ಹೂಡಿಕೆ ಮಾಡುತ್ತಾರೆ. ಕೂಲಿ ಮತ್ತು ಲಾಭಗಳ ನಡುವೆ ವರಮಾನಗಳು ಹಂಚಿಕೆಯಾಗುವ ಒಂದು ನಿರ್ದಿಷ್ಟ ಮಟ್ಟದಲ್ಲಿ, ಒಂದು ವೇಳೆ, ಹೂಡಿಕೆಯ ಮೊತ್ತವು, ಪೂರ್ಣ ಸಾಮರ್ಥ್ಯದ ಉತ್ಪತ್ತಿಯಲ್ಲಿ ಬಳಕೆಯಾಗದೆ ಉಳಿದ ಭಾಗಕ್ಕಿಂತ ಕಡಿಮೆ ಇದ್ದರೆ, ಅಂತಹ ಸಂದರ್ಭದಲ್ಲಿ ಉತ್ಪಾದನೆಗೊಳ್ಳುವ ಈ ಉತ್ಪತ್ತಿಗೆ ಸಾಕಾಗುವಷ್ಟು ಬೇಡಿಕೆ ಬರುವುದಿಲ್ಲ. ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಇಲ್ಲದ್ದು ಉತ್ಪಾದನೆ ಅಗುವುದೇ ಇಲ್ಲ ಎಂಬ ಪ್ರವೃತ್ತಿ ಇರುವುದರಿಂದಾಗಿ ಉತ್ಪಾದನೆಯು ಪೂರ್ಣ ಸಾಮರ್ಥ್ಯ ಮಟ್ಟದಿಂದ ಕೆಳಗೆ ಜಾರುತ್ತದೆ.

ಪೂರ್ಣ ಸಾಮರ್ಥ್ಯ ಮಟ್ಟದಿಂದ ಕೆಳಗಿನ ಮಟ್ಟದಲ್ಲಿ ಉತ್ಪಾದನೆಯಾದಾಗ, ಒಂದು ನಿರ್ದಿಷ್ಟ ಮಟ್ಟದಲ್ಲಿ ವರಮಾನಗಳು ಹಂಚಿಕೆಯಾಗುವುದರಿಂದ, ಬಳಕೆಯ ಬೇಡಿಕೆಯೂ ಇಳಿಯುತ್ತದೆ. ಆಗ, ಅದಕ್ಕೆ ಹೊಂದುವ ರೀತಿಯಲ್ಲಿ ಒಟ್ಟು ಉತ್ಪತ್ತಿಯೂ ಇಳಿಯುತ್ತದೆ. ಇದು ಹೀಗೆಯೇ ಸಾಗುತ್ತದೆ. ಈ ಪರಿಸ್ಥಿತಿಯಲ್ಲಿ, ಆದೆಷ್ಟು ಉತ್ಪಾದನೆ ಮಾಡಲಾಗುತ್ತದೆ ಎಂದರೆ, ಅದಕ್ಕೆ ಬರುವ ಬೇಡಿಕೆಯು ವಾಸ್ತವವಾಗಿ ಬಳಕೆ ಮತ್ತು ಹೂಡಿಕೆಯ ನಿಜವಾದ ಬೇಡಿಕೆಯಷ್ಟೇ ಇರುತ್ತದೆ, ಈ ಪರಿಸ್ಥಿತಿಯಲ್ಲಿ, ಬಳಕೆಯಾಗದೆ ಉಳಿಯುವ ಉತ್ಪಾದನಾ ಸಾಮರ್ಥ್ಯ ಮತ್ತು ಸಾಮೂಹಿಕ ನಿರುದ್ಯೋಗ, ಎರಡೂ ಒಟ್ಟೊಟ್ಟಿಗೇ ಇರುತ್ತವೆ.

ಈ ಅಂಶವನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು. ಒಂದು ಅರ್ಥವ್ಯವಸ್ಥೆಯ ಪೂರ್ಣ ಉತ್ಪಾದನಾ ಸಾಮರ್ಥ್ಯವು 100 ಎಂದು ಊಹಿಸಿ. ಅದರಲ್ಲಿ, ಕೂಲಿ ಮತ್ತು ಲಾಭಗಳ ಅನುಪಾತವು ಸಾಮಾನ್ಯವಾಗಿ 60:40ರಷ್ಟು ಇರುತ್ತದೆ. ಈಗ, ಕೂಲಿಯ ಭಾಗ ಪೂರ್ಣವಾಗಿ ಬಳಕೆಯಾಗುತ್ತದೆ, ಲಾಭದ ಯಾವುದೇ ಭಾಗ ಬಳಕೆಯಾಗುವುದಿಲ್ಲ ಎಂದಿಟ್ಟುಕೊಳ್ಳೋಣ(ಊಹೆ ಸರಳವಾಗಿರಲಿ ಎಂಬ ದೃಷ್ಟಿಯಲ್ಲಿ). ಆಗ, ಒಂದು ವೇಳೆ, ಪೂರ್ಣ ಉತ್ಪಾದನಾ ಸಾಮರ್ಥ್ಯದಷ್ಟೂ ಉತ್ಪತ್ತಿಯಾದರೆ, ಅದು ಬಳಕೆಯಾಗುವ ಪ್ರಮಾಣವು 60ರಷ್ಟೇ ಇರುತ್ತದೆ. ಹೂಡಿಕೆ 40 ಇದ್ದಾಗ ಮಾತ್ರವೇ ಈ ಉತ್ಪಾದನೆಯ ಬೇಡಿಕೆ ಇರುತ್ತದೆ.(ಏಕೆಂದರೆ, ಒಟ್ಟು ಬೇಡಿಕೆಯು, ಬಳಕೆ ಮತ್ತು ಹೂಡಿಕೆಯ ಮೊತ್ತವಾಗಿರುತ್ತದೆ). ಒಂದು ವೇಳೆ, ಎಲ್ಲ ಬಂಡವಾಳಿಗರು ಸೇರಿ ಕೇವಲ ಒಟ್ಟು 20 ಹೂಡಿಕೆ ಮಾಡಿದಾಗ (ಏಕೆಂದರೆ, 20ಕ್ಕಿಂತಲೂ ಹೆಚ್ಚಿನ ಹೂಡಿಕೆ ಮಾಡಿದರೆ ಅವರು ಎಣಿಸುವಷ್ಟು ಲಾಭ ಬರುವುದಿಲ್ಲ ಎಂಬುದು ಅವರ ಅನಿಸಿಕೆ) ಒಟ್ಟು ಬೇಡಿಕೆಯು 80 ಇರುತ್ತದೆ (60+20). ಅಂದರೆ, ಪೂರ್ಣ ಉತ್ಪಾದನಾ ಸಾಮರ್ಥ್ಯದ 100ಕ್ಕಿಂತ ಕೆಳಗಿನ ಮಟ್ಟದಲ್ಲಿರುತ್ತದೆ. ಅಂಥಹ ಪರಿಸ್ಥಿತಿಯಲ್ಲಿ, ಅರ್ಥವ್ಯವಸ್ಥೆಯು ಕೇವಲ 50ರಷ್ಟು ಉತ್ಪಾದಿಸಲು ನಿರ್ಧರಿಸುತ್ತದೆ. ಆಗ, ಬಳಕೆಯ ಪ್ರಮಾಣವು 30 ಆಗಿರುತ್ತದೆ. (ಬಳಕೆ 30 + ಹೂಡಿಕೆ 20 = 50 ಒಟ್ಟು ಉತ್ಪತ್ತಿ). ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಅತಿಉತ್ಪಾದನೆಯ ಒಂದು ಬಿಕ್ಕಟ್ಟಿನಲ್ಲಿ ಉತ್ಪಾದನಾ ಸಾಮರ್ಥ್ಯದ ಶೇ.50 ರಷ್ಟು ಬಳಕೆಯಾಗದೆ ಉಳಿಯುತ್ತದೆ.

ಈಗ, ಇದೇ ಅರ್ಥವ್ಯವಸ್ಥೆಯಲ್ಲಿ ಇನ್ನೊಂದು ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳೋಣ. ಅರ್ಥವ್ಯವಸ್ಥೆಯ ಪೂರ್ಣ ಉತ್ಪಾದನಾ ಸಾಮರ್ಥ್ಯದ 100ರಷ್ಟನ್ನೂ ಉತ್ಪಾದಿಸಲಾಗಿದೆ; ಹೂಡಿಕೆ 20ರಷ್ಟೇ ಇದೆ. ಆಗ ಮೂಲ 60ರ ಬಳಕೆಯ ಪ್ರಮಾಣವನ್ನು 80ಕ್ಕೆ ಏರಿಸಬಹುದು. ಆಗ, ಒಟ್ಟು ಬೇಡಿಕೆಯಲ್ಲಿ ಕೊರತೆ ಬೀಳುವುದೇ ಇಲ್ಲ. ಅದರಿಂದಾಗಿ ಅತ–ಉತ್ಪಾದನೆಯ ಬಿಕ್ಕಟ್ಟಿಗೇನೂ ಕಾರಣ ವಿರುವುದಿಲ್ಲ. ಆದರೆ ಪೂರ್ಣ ಸಾಮರ್ಥ್ಯದ ಉತ್ಪಾದನೆಯಲ್ಲಿ ಬಳಕೆಯನ್ನು 60ರಿಂದ 80ಕ್ಕೆ ಏರಿಸಬೇಕು. ಅಂದರೆ ಕೂಲಿಯ ಪಾಲು 100ರಲ್ಲಿ 60ರಿಂದ 80ಕ್ಕೇರಬೇಕು(ಏಕೆಂದರೆ ಕೇವಲ ಕೂಲಿಯ ಮೊತ್ತ ಮಾತ್ರವೇ ಬಳಕೆಯಾಗುತ್ತದೆ).ಇದರ ಅರ್ಥವೆಂದರೆ, :ಕೂಲಿಯ ಮಟ್ಟವನ್ನು ಏರಿಸಿ ಹೊಂದಿಸಿದರೆ ಅತಿ–ಉತ್ಪಾದನೆಯ ಬಿಕ್ಕಟ್ಟು ಉಂಟಾಗುವುದೇ ಇಲ್ಲ. ಈ ಬಿಕ್ಕಟ್ಟನ್ನು ತಡೆಯುವ ಸಲುವಾಗಿಯಾದರೂ ನೈಜ ಕೂಲಿಗಳನ್ನು ಏರಿಸಲು ಬಂಡವಾಳಿಗರು ಹಠಹಿಡಿದು ನಿರಾಕರಿಸು ವುದರಿಂದಾಗಿಯೇ ಬಂಡವಾಳಶಾಹಿ ಅರ್ಥವ್ಯವಸ್ಥೆಯು ಅತಿ–ಉತ್ಪಾದನೆಯ ಬಿಕ್ಕಟ್ಟಿಗೆ ಒಳಗಾಗುತ್ತದೆ.

ಗಮನಿಸಬೇಕಾದ ಇನ್ನೊಂದು ಅಂಶವಿದೆ. ಅತಿ–ಉತ್ಪಾದನೆಯ ಬಿಕ್ಕಟ್ಟಿನಿಂದಾಗಿ ಒಟ್ಟು ಉತ್ಪತ್ತಿಯು ಕೇವಲ 50ಕ್ಕೆ ಇಳಿಯುತ್ತದೆ. ಆಗ ಲಾಭ 20 ಇರುತ್ತದೆ. ಅತಿ–ಉತ್ಪಾದನೆಯ ಬಿಕ್ಕಟ್ಟನ್ನು ತಡೆಯುವ ಉದ್ದೇಶದಿಂದ ಕೂಲಿಯ ಭಾಗವನ್ನು 80ಕ್ಕೆ ಏರಿಸಿದಾಗಲೂ, ಪೂರ್ಣ ಉತ್ಪಾದನಾ ಸಾಮರ್ಥ್ಯ 100ರಲ್ಲಿ ಲಾಭದ ಪ್ರಮಾಣವು 20ರಷ್ಟೇ ಇರುತ್ತದೆ. ಹಾಗಾಗಿ, ಕೂಲಿಯ ಭಾಗವನ್ನು ಏರಿಸುವ ಮೂಲಕ ಅತಿ–ಉತ್ಪಾದನಾ ಬಿಕ್ಕಟ್ಟನ್ನು ತಡೆದಾಗ ಬಳಕೆಯ ಬೇಡಿಕೆ ಹೆಚ್ಚುತ್ತದೆ, ಬಂಡವಾಳಿಗರ ಲಾಭ ಈಗಲೂ 20 ಆಗಿರುತ್ತದೆ, ಅದರಲ್ಲಿ ಎಳ್ಳಷ್ಟೂ ಕೊರೆಯಾಗುವುದಿಲ್ಲ. ಕೂಲಿ ಏರಿಕೆಯ ಹೊರೆಯು ಬಂಡವಾಳಿಗರ ಲಾಭದ ಮೇಲೆ ಬೀಳುವುದೇ ಇಲ್ಲ. ಆದರೂ, ಕೂಲಿಗಳನ್ನು ಏರಿಸಲು ಬಂಡವಾಳಿಗರು ಹಠಹಿಡಿದು ನಿರಾಕರಿಸುತ್ತಾರೆ. ಏಕೆಂದರೆ, ಬಂಡವಾಳಶಾಹಿ ಒಂದು ವೈಷಮ್ಯಭರಿತ ವ್ಯವಸ್ಥೆ. ಅದರ ವೈಷಮ್ಯ ತಮ್ಮ ಲಾಭದಲ್ಲಿ ಇಳಿಕೆಯಾಗುತ್ತದೆ ಎಂಬ ಕಾರಣದಿಂದ ಕೂಲಿಗಳ ಏರಿಕೆಗೆ ಬಂಡವಾಳಿಗರ ವಿರೋಧದಲ್ಲಿ ವ್ಯಕ್ತಗೊಳ್ಳುತ್ತದೆ. ಅಷ್ಟೇ ಅಲ್ಲ, ಲಾಭದಲ್ಲಿ ಇಳಿಕೆಯಾಗದಿದ್ದರೂ ಸಹ ಕೂಲಿಗಳ ಏರಿಕೆಯ ಬಗ್ಗೆ ಬಂಡವಾಳಿಗರ ವಿರೋಧದಲ್ಲಿಯೂ ಅದು ವ್ಯಕ್ತವಾಗುತ್ತದೆ. ಏಕೆಂದರೆ ಕೂಲಿಗಳ ಏರಿಕೆ ಕಾರ್ಮಿಕರ ಬಲ ಹೆಚ್ಚಿಸುತ್ತದೆ ಎಂಬುದೇ ಅವರ ಭಯ. ಬಂಡವಾಳಶಾಹಿ ವ್ಯವಸ್ಥೆಯು, ಸಂಕ್ಷಿಪ್ತವಾಗಿ, ಒಂದು ಮೂಲಭೂತ ಅರ್ಥದಲ್ಲಿ, ಮೂಲ ತತ್ವದ ಪ್ರಕಾರವಾಗಿಯೇ ವೈಷಮ್ಯಭರಿತವಾದದ್ದು. ವಾಸ್ತವವಾಗಿ, ಈ ಮೂಲಭೂತ ಅರ್ಥದಲ್ಲಿ, ವರ್ಗ ವೈಷಮ್ಯದಿಂದ ಕೂಡಿದ ಎಲ್ಲ ಮಾನವ ಸಮಾಜಗಳೂ ವೈಷಮ್ಯಭರಿತವಾದವುಗಳೇ.

ಹಳೆಯ ಸಮಾಜವಾದಿ ದೇಶಗಳು, ಈ ಅರ್ಥದಲ್ಲಿ, ವೈಷಮ್ಯಭರಿತವಾಗಿರಲಿಲ್ಲ. ಹಾಗಾಗಿಯೇ ಆ ದೇಶಗಳು ಯಾವುದೇ ಅತಿ–ಉತ್ಪಾದನೆಯ ಬಿಕ್ಕಟ್ಟಿಗೆ ಒಳಗಾಗಲಿಲ್ಲ. ಪೂರ್ಣ ಸಾಮರ್ಥ್ಯದ ಉತ್ಪಾದನೆಯಾಗಿ, ಬೇಡಿಕೆಯ ಕೊರತೆ ಉಂಟಾದ ಸಂದರ್ಭದಲ್ಲಿ ಕೂಲಿಯ ಭಾಗವನ್ನು 80ಕ್ಕೆ ಏರಿಸಲಾಗುತ್ತಿತ್ತು. ಏಕೆಂದರೆ, ಪೂರ್ಣ ಸಾಮರ್ಥ್ಯದ ಉತ್ಪಾದನೆ 100ರಲ್ಲಿ, ಎಲ್ಲ ಸಾಮಾಜಿಕ ಘಟಕಗಳ ಒಟ್ಟು ಹೂಡಿಕೆಯು 20ರಷ್ಟೇ ಇರುತ್ತಿತ್ತು. (ಈ ಅಂಶವನ್ನು ಹೇಗೆ ನಿರ್ಧರಿಸಲಾಗುತ್ತಿತ್ತು ಎಂಬುದು ಇಲ್ಲಿ ಮುಖ್ಯವಲ್ಲ). ಮೂಲ 60ರ ಬಳಕೆಯ ಪ್ರಮಾಣವನ್ನು 80ಕ್ಕೆ ಏರಿಸಲಾಗುತ್ತಿತ್ತು. ಅಂದರೆ, ಬೇಡಿಕೆಯಲ್ಲಿ ಬೀಳುವ ಕೊರತೆಯು ವಾಸ್ತವವಾಗಿ ಪ್ರಕಟಗೊಳ್ಳುವ ಮುನ್ನವೇ ಅದನ್ನು ಹೊಂದಿಸಿಕೊಳ್ಳುವ ಸಲುವಾಗಿ ಕೂಲಿಯ ಭಾಗವನ್ನು ಅಗತ್ಯ ಮಟ್ಟಕ್ಕೆ ಏರಿಸಲಾಗುತ್ತಿತ್ತು.

ಬೇಡಿಕೆಯಲ್ಲಿ ಬೀಳಬಹುದಾದ ಕೊರತೆಯನ್ನು ಸರಿಹೊಂದಿಸಿಕೊಳ್ಳುತ್ತಿದ್ದ ರೀತಿಯೂ ಸರಳವಾಗಿತ್ತು. ಕೂಲಿಗಳಲ್ಲಿ ಯಾವ ಬದಲಾವಣೆಯನ್ನೂ ಮಾಡದೆ, ಸರಕು ಸಾಮಗ್ರಿಗಳ ಬೆಲೆಗಳನ್ನು ಇಳಿಸಲಾಗುತ್ತಿತ್ತು. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ, ಉತ್ಪಾದನೆಯು ಪೂರ್ಣ ಸಾಮರ್ಥ್ಯದ ಪ್ರಮಾಣದಲ್ಲಿ ಆಗುತ್ತಿತ್ತು. ತಯಾರಾದ ವಸ್ತುಗಳು ಪೂರ್ತಿಯಾಗಿ ಖರ್ಚಾಗುವ ರೀತಿಯ ವಾಸ್ತವಿಕ ಬೇಡಿಕೆ ಉಂಟಾಗುವಂತೆ ಅವುಗಳ ಬೆಲೆಗಳಲ್ಲಿ ಹೊಂದಿಕೆ ಮಾಡಿಕೊಳ್ಳಲಾಗುತ್ತಿತ್ತು. ಬೆಲೆಗಳು ಇಳಿದಂತೆಲ್ಲಾ ನಿರ್ದಿಷ್ಟ ಕೂಲಿಯು ನೈಜ ಕೂಲಿಯಾಗುತ್ತಿತ್ತು. ಬಳಕೆ ಏರುತ್ತಿತ್ತು. ಹಾಗಾಗಿ ಬೇಡಿಕೆಯೂ ಏರುತ್ತಿತ್ತು. ಹಾಗಾಗಿ, ಸರಕು–ಸಾಮಗ್ರಿಗಳ ಬೆಲೆಗಳು ಯಾವ ಮಟ್ಟಕ್ಕೆ ಇಳಿದವು ಎಂದರೆ, ಬೇಡಿಕೆ 100ರ ಮಟ್ಟಕ್ಕೆ ತಲುಪುವವರೆಗೂ ಇಳಿದವು. ಸಮಾಜವಾದಿ ಅರ್ಥವ್ಯವಸ್ಥೆಯು ಈ ರೀತಿಯಾಗಿ, ನೈಜ ಕೂಲಿ ಮಟ್ಟ ಕಾಪಾಡುವ ಮೂಲಕ, ಪೂರ್ಣ ಪ್ರಮಾಣದ ಉತ್ಪಾದನೆ ಮತ್ತು ಅದಕ್ಕೆ ಸಮನಾದ ಬೇಡಿಕೆ ಉಂಟಾಗುವಂತೆ ನೋಡಿಕೊಂಡಿತು.

ಇಲ್ಲೊಂದು ರೀತಿಯ ಅಣಕವೂ ಇದೆ. ಬೆಲೆಗಳ ಏರಿಳಿಕೆಗಳ ಮೂಲಕ ಮಾರುಕಟ್ಟೆಯಲ್ಲಿರುವ ಎಲ್ಲ ಸರಕುಗಳೂ ಖರ್ಚಾಗುವಂತೆ ಬಂಡವಾಳಶಾಹಿ ಅರ್ಥವ್ಯವಸ್ಥೆಯು ನೋಡಿಕೊಳ್ಳುತ್ತದೆ ಎಂಬುದಾಗಿ ಆದಂ ಸ್ಮಿತ್‌ರವರ ಕಾಲದಿಂದಲೂ ಹೇಳಲಾಗಿದೆ. ವಾಸ್ತವವಾಗಿ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಅಂತದ್ದೇನೂ ಇಲ್ಲ. ಮಾರುಕಟ್ಟೆಯು ಕೆಲವೇ ಮಂದಿಯ ಹಿಡಿತದಲ್ಲಿರುವ ಪರಿಸ್ಥಿತಿಗಳಲ್ಲಿ (ಬಹಳ ಕಾಲದಿಂದಲೂ ಇರುವುದು ಇದೇ ಪರಿಸ್ಥಿತಿಯೇ) ಕೂಲಿಗಳ ಒಂದು ನಿರ್ದಿಷ್ಟ ಮಟ್ಟದಲ್ಲಿ, ಬೆಲೆಗಳು ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವ ಸ್ವಭಾವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇಲ್ಲವೇ ಇಲ್ಲ. ಅತ್ತ, ಸಮಾಜವಾದಿ ಅರ್ಥವ್ಯವಸ್ಥೆಯು ಯೋಜನಾ ಬದ್ಧವಾಗಿರುವುದರಿಂದ, ಬೆಲೆಗಳು ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳಲು ಬಿಡುವುದಿಲ್ಲ ಎಂದು ನಂಬಲಾಗಿದೆ. ಆದರೆ ಹಳೆಯ ಸಮಾಜವಾದಿ ಅರ್ಥವ್ಯವಸ್ಥೆಗಳು, ಕೂಲಿಗಳನ್ನು ಒಂದು ನಿರ್ದಿಷ್ಟ ಮಟ್ಟದಲ್ಲಿ ಕಾಪಾಡಿಕೊಂಡು ಅತಿ–ಉತ್ಪಾದನೆಯ ಬಿಕ್ಕಟ್ಟುಗಳಿಂದ ವ್ಯವಸ್ಥಿತವಾಗಿ ತಪ್ಪಿಸಿಕೊಂಡದ್ದು ನಿರ್ದಿಷ್ಟ ಕೂಲಿ ಹಣಗಳಿಗೆ ಬೆಲೆಗಳನ್ನು ಹೊಂದಿಸಿದ್ದರಿಂದಲೇ. ಇದನ್ನು ಕಾಣದಿರುವುದು ಸಮಾಜವಾದಿ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಬಳಸುವ ಬೌದ್ಧಿಕ ರೂಢಮಾದರಿಗಳ ದಾರಿದ್ರ್ಯವನ್ನು ಎತ್ತಿ ತೋರುತ್ತದೆ.

ಸಮಾಜವಾದಿ ಯೋಜನೆಯ ಮುನ್ನಡೆಯಲ್ಲಿ, ಸಮಾಜವಾದಿ ಅರ್ಥವ್ಯವಸ್ಥೆಗಳನ್ನು ನಿರ್ವಹಿಸುವ ಕಾರ್ಯಾಚರಣೆಯ ಹೊಸ ವಿಧಾನಗಳು ಬರುತ್ತವೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಇವೆಲ್ಲವೂ, ಹಳೆಯ ಸಮಾಜವಾದದ ಕನಿಷ್ಟ ಎರಡು ಪ್ರಮುಖ ಗುಣಲಕ್ಷಣಗಳನ್ನು ಒಳಗೊಳ್ಳಲೇ ಬೇಕು: ಒಂದು, ಪೂರ್ಣ ಉದ್ಯೋಗ ಒದಗಿಸುವುದು, ಇನ್ನೊಂದು, ಅತಿ–ಉತ್ಪಾದನಾ ಬಿಕ್ಕಟ್ಟಿನಿಂದ ತಪ್ಪಿಸಿಕೊಳ್ಳುವುದು. ಈ ಎರಡರಲ್ಲಿ ಒಂದನ್ನಾದರೂ ನೆರವೇರಿಸುವುದು ಯಾವುದೇ ಬಂಡವಾಳಶಾಹಿ ಅರ್ಥವ್ಯವಸ್ಥೆಗೆ ಈ ವರೆಗೂ ಸಾಧ್ಯವಾಗಿಲ್ಲ; ಮುಂದೆಯೂ ಸಾಧ್ಯವಿಲ್ಲ.

ನಿಫಾ ಹತೋಟಿ: ಕೇರಳ ಎಲ್‌ಡಿಎಫ್ ಸರಕಾರಕ್ಕೆ ಅಂತರ‍್ರಾಷ್ಟ್ರೀಯ ಪ್ರಶಸ್ತಿ ಗೌರವ

ಇತ್ತೀಚೆಗೆ ಮೇ ತಿಂಗಳಲ್ಲಿ ಕೇರಳದ ಕೊಝಿಕೋಡ್ ಪ್ರದೇಶದಲ್ಲಿ ಮಾರಣಾಂತಿಕ ನಿಫಾ ವೈರಸ್ ಭೀತಿ ಹರಡಿದಾಗ ಅದನ್ನು ತಡೆಯಲು ಕಾರ್ಯೋನ್ಮುಖ ಗೊಂಡು ಕೆಲವೇ ದಿನಗಳಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರುವಲ್ಲಿ ಕೇರಳ ಎಲ್‌ಡಿಎಫ್ ಸರಕಾರ ಯಶಸ್ವಿಯಾಯಿತು.(ನೋಡಿ, ಕೇರಳದಲ್ಲಿ ನಿಫಾ ಹತೋಟಿ ಹೇಗೆ ಸಾಧ್ಯವಾಯಿತು–ಡಾ.ಪ್ರಕಾಶ ಸಿ.ರಾವ್, ಜನಶಕ್ತಿ, ಸಂಚಿಕೆ 24, ಜೂನ್ 11–17, 2018, ಪುಟ 16).



ಕೇರಳದ ಸರಕಾರ ಕೈಗೊಂಡ ಪರಿಣಾಮಕಾರಿ ಕ್ರಮಗಳು 'ಈಗ ಅಂತರ‍್ರಾಷ್ಟ್ರೀಯ ಗಮನವನ್ನು ಸೆಳೆದಿವೆ. ಬಾಲ್ಟಿಮೋರ್‌ನ ಇನ್ಸ್‌ಟಿಟ್ಯೂಟ್ ಫಾರ್ ಹ್ಯೂಮನ್ ವೈರಾಲಜಿ ಎಲ್‌ಡಿಎಫ್ ಸರಕಾರದ ಈ ಸಾಧನೆಗಾಗಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಆರೋಗ್ಯಮಂತ್ರಿ ಕೆ.ಕೆ.ಶೈಲಜಾ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಹೆಚ್‌ಐವಿ ಪತ್ತೆ ಹಚ್ಚಿದ ವಿಜ್ಞಾನಿಗಳ ತಂಡದಲ್ಲಿದ್ದ ಪ್ರಸಿದ್ಧ ಜೈವಿಕ–ವೈದ್ಯಕೀಯ ವಿಜ್ಞಾನಿ ಡಾ.ರಾಬರ್ಟ್ ಸಿ ಗಲ್ಲೊ ಈ ಪ್ರಶಸ್ತಿಗಳನ್ನು ನೀಡಿದರು.

ಈ ಜಗತ್ಪ್ರಸಿದ್ಧ ಸಂಶೋಧನಾ ಸಂಸ್ಥೆ ಜನತಾ ಪ್ರತಿನಿಧಿಗಳನ್ನು ಈ ರೀತಿ ಸನ್ಮಾನಿಸಿದ್ದು ಇದೇ ಮೊದಲು ಎಂದು ಹೇಳಲಾಗಿದೆ. ನಿಫಾ ವೈರಸ್‌ನ್ನು ಹತೋಟಿಗೆ ತರುವಲ್ಲಿ ಕೇರಳ ಸರಕಾರ ಕೈಗೊಂಡ ಕ್ರಮಗಳ ವಿವರವಾದ ಅಧ್ಯಯನದ ನಂತರ ಈ ಪ್ರಶಸ್ತಿ ನೀಡಲು ಅದು ನಿರ್ಧರಿಸಿತು ಎಂದು ವರದಿಯಾಗಿದೆ.

ಡಾ. ರಾಬರ್ಟ್ ಗೆಲ್ಲೊ ಪ್ರಶಸ್ತಿ ಪ್ರದಾನದ ನಂತರ ತಮ್ಮ ಸಹಯೋಗಿ ವಿಜ್ಞಾನಿಗಳ ಜತೆಗೆ ಕೇರಳದ ನಿಯೋಗದೊಂದಿಗೆ ಮಾತುಕತೆ ನಡೆಸಿ ಕೇರಳದೊಂದಿಗೆ ವೈರಾಣು ಸಂಶೋಧನೆಯಲ್ಲಿ ಕೈಜೋಡಿಸುವ ಬಗ್ಗೆ ಚರ್ಚಿಸಿದರು. ಇಗಾಗಲೇ ಕೇರಳದ ರಾಜಧಾನಿ ತಿರುವನಂತಪುರದಲ್ಲಿ ಅಂತರಾಷ್ಟ್ರೀಯ ವೈರಾಣು ಸಂಸ್ಥೆ ಪ್ರಾರಂಭವಾಗಲಿದೆ.

ಈ ಸಂದರ್ಭದಲ್ಲಿ ಮಾತಾಡುತ್ತ ಮುಖ್ಯಮಂತ್ರಿಗಳು ನಿಫಾ ವೈರಸ್‌ನಿಂದ ಬಾಧಿತ ರೋಗಿಯನ್ನು ಗುರುತಿಸಿದ ಕೂಡಲೇ ಹೇಗೆ ಇದರ ವಿರುದ್ಧ ಯುದ್ಧವನ್ನೇ ಸಾರಲಾಯಿತು ಎಂದು ವಿವರಿಸಿದರು. ರಾಜ್ಯದಲ್ಲಿ ಆರೋಗ್ಯಪಾಲನೆಯನ್ನು ಅಂತರ‍್ರಾಷ್ಟ್ರೀಯ ಮಟ್ಟಕ್ಕೆ ತಲುಪಿಸುವ ಪ್ರಯತ್ನಗಳ ಬಗ್ಗೆ ಹೇಳಿದರು.

ಕೇರಳದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಏರಿಕೆ



ಸರಕಾರೀ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಳಿಯುತ್ತಿದೆ. ಅದರಿಂದಾಗಿ ಹಲವು ಶಾಲೆಗಳನ್ನು ಮುಚ್ಚಬೇಕಾಗುತ್ತದೆ–ಇದು ಕರ್ನಾಟಕವೂ ಸೇರಿದಂತೆ ಇತ್ತೀಚೆಗೆ ಭಾರತದ ಹೆಚ್ಚಿನ ರಾಜ್ಯಗಳಿಂದ ಕೇಳುವ ಮಾತು. ರಾಜಸ್ತಾನದಲ್ಲಿ ಇಂತಹ ಶಾಲೆಗಳನ್ನು ಪಿಪಿಪಿ ಹೆಸರಲ್ಲಿ ಖಾಸಗಿಯವರಿಗೆ ವಹಿಸಿ ಕೊಡಲಾಗುತ್ತಿರುವುದನ್ನು ಅಲ್ಲಿಯ ಶಿಕ್ಷಕರು ಪ್ರತಿಭಟಿಸುತ್ತಿದ್ದಾರೆ.

ಇಂತಹ ಸಂದರ್ಭದಲ್ಲಿ ಕಳೆದ ವಾರ ಕೇರಳದಿಂದ ತದ್ವಿರುದ್ಧವಾದ ಸುದ್ದಿ ಬಂದಿದೆ. ಈ ವರ್ಷ ಅಲ್ಲಿ 1ರಿಂದ 9ನೇ ತರಗತಿಗಳಿಗೆ ಸೇರಿರುವ ವಿದ್ಯಾರ್ಥಿಗಳ ಸಂಖ್ಯೆ ಕಳೆದ ವರ್ಷದ 1.4 ಲಕ್ಷದಿಂದ 1.8ಲಕ್ಷಕ್ಕೆ ಏರಿದೆ. ಇದು ಎಲ್‌ಡಿಎಫ್ ಸರಕಾರದ ಇನ್ನೊಂದು ಗಮನಾರ್ಹ ಸಾಧನೆ.

"ಇದೊಂದು ತೆರನ ದಾಖಲೆ. ಕಳೆದ 25ವರ್ಷಗಳಲ್ಲಿ ಮೊದಲ ಬಾರಿಗೆ ದಾಖಲಾತಿ ಹಿಂದಿನ ವರ್ಷಕ್ಕಿಂತ ಹೆಚ್ಚಿದೆ. ಸಾಮಾನ್ಯ ಶಿಕ್ಷಣ ರಕ್ಷಣಾ ಪ್ರಚಾರಂದೋಲನದ ಫಲಗಳು ಕಾಣುತ್ತಿವೆ" ಎಂದು ರಾಜ್ಯ ಸಾರ್ವಜನಿಕ ಶಿಕ್ಷಣದ ನಿರ್ದೇಶಕರು (ಡಿಪಿಐ)ಹೇಳಿದ್ದಾರೆ.

2016ರಲ್ಲಿ ಎಲ್‌ಡಿಎಫ್ ಅಧಿಕಾರಕ್ಕೆ ಬಂದಾಗ 5715 ಶಾಲೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿರಲಿಲ್ಲ. ಆದರೆ ಎಲ್‌ಡಿಎಫ್ ಸರಕಾರ ಕಳೆದ ವರ್ಷ ಗಣತಂತ್ರ ದಿನದ ಮರುದಿನ ಜನಗಳ ಭಾಗವಹಿಸುವಿಕೆಯೊಂದಿಗೆ ಆರಂಭಿಸಿದ ಪ್ರಚಾರಾಂದೋಲನ ಜನಗಳ ಗಮನ ಸೆಳೆದಿದೆ. ಸರಕಾರ ಈ ಶಾಲೆಗಳ ಮೂಲ ಸೌಕರ್ಯಗಳನ್ನು ಉತ್ತಮಪಡಿಸಲು ಹಣ ಒದಗಿಸಿತು, ಸಾರ್ವಜನಿಕರು ತಮ್ಮ ಊರು–ಕೇರಿಯ ಸಾರ್ವಜನಿಕ ಶಿಕ್ಷಣ ಸಂಸ್ಥೆಯನ್ನು ಉಳಿಸುವ ಪಣ ತೊಟ್ಟರು. ಹಲವು ಶಾಲೆಗಳನ್ನು ಮಾದರಿ ಶಾಲೆಗಳಾಗಿ ಬೆಳೆಸಲಾಯಿತು. ಈ ಆಂದೋಲನದ ಭಾಗವಾಗಿ ಶಿಕ್ಷಣ ಇಲಾಖೆ 45000 ಹೈಟೆಕ್ ತರಗತಿಗಳನ್ನು ರೂಪಿಸಿತು. ಇದರಲ್ಲಿ ಡಿಜಿಟಲ್ ಪ್ರೊಜೆಕ್ಟರ್, ಪ್ರೊಜೆಕ್ಷನ್ ಪರದೆ, ಲ್ಯಾಪ್‌ಟಾಪ್ ಮತ್ತು ಇಂಟರ್ನೆಟ್ ಸಂಪರ್ಕ ಕಲ್ಪಿಸಲಾಯಿತು. ಈ ಎಲ್ಲ ಕ್ರಮಗಳು ಪಾಲಕರು ಮತ್ತು ವಿದ್ಯಾರ್ಥಿಗಳನ್ನು ಖಾಸಗಿ ಶಾಲೆಗಳಿಂದ ಸಾರ್ವಜನಿಕ ಶಾಲೆಗಳತ್ತ ಸೆಳೆದಿವೆ ಎಂದು ಡಿಪಿಐ ಹೇಳಿದ್ದಾರೆ.

ಕೇರಳದಲ್ಲಿ ಸರಕಾರಿ ಮತ್ತು ಅನುದಾನಿತ ಶಾಲೆಗಳು ಉನ್ನತ ಶಿಕ್ಷಣ ಮಟ್ಟ ಹೊಂದಿವೆ. ಸರಕಾರಿ ಶಾಲೆಗಳಲ್ಲಿ ಕಲಿಯುವುದೊಂದು ಮಜಾ, ಖಾಸಗಿ ಶಾಲೆಗಳಲ್ಲಿ ಅದೊಂದು ಸಜಾ' ಎಂದೊಬ್ಬ ಪಾಲಕರು ಹೇಳಿರುವುದಾಗಿ ವರದಿಯಾಗಿದೆ.

ಝಾರ್ಖಂಡ್‌ನಲ್ಲಿ ಭೂಸ್ವಾಧೀನ ತಿದ್ದುಪಡಿ ವಿರುದ್ಧ ರಾಜ್ಯ ಬಂದ್: 19,000 ಕಾರ್ಯಕರ್ತರ ಬಂಧನ



ಮೋದಿ ಸರಕಾರದ ರೈತ–ವಿರೋಧಿ ಮುಖವನ್ನು ಆರಂಭದಲ್ಲೇ ಭೂಸ್ವಾಧೀನ ತಿದ್ದುಪಡಿ ವಿರೋಧಿ ರೈತರ ದೇಶವ್ಯಾಪಿ ಐಕ್ಯ ರೈತ ಹೋರಾಟ ಬಯಲಿಗೆಳೆಯಿತು. ಆದರೂ ತಮ್ಮ ಬಂಡವಾಳಶಾಹಿ–ಪರ ನಿಲುವನ್ನು ಬದಲಿಸದ ಬಿಜೆಪಿ ಪರೋಕ್ಷವಾಗಿ ತನ್ನ ರಾಜ್ಯ ಸರಕಾರಗಳ ಮೂಲಕ ಇದನ್ನು ಸಾಧಿಸಲು ಹೊರಟಿದೆ. ಇದರ ಭಾಗವಾಗಿಯೇ ಜಾರ್ಖಂಡ್ ಬಿಜೆಪಿ ಸರಕಾರ ಭೂಸ್ವಾಧೀನದಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ, ಮರುವಸತಿ ಮತ್ತು ಮರು ಇತ್ಯರ್ಥ ಕಾಯ್ದೆ , 2013ನ್ನು ತಿದ್ದುಪಡಿ ಮಾಡಿತು. ಇದರ ವಿರುದ್ಧ ರೈತರ ಹೋರಾಟ ನಡೆಯುತ್ತಿದ್ದು ಜುಲೈ 5ರಂದು ಎಡಪಕ್ಷಗಳು ಮತ್ತು ಇತರ ವಿರೋಧ ಪಕ್ಷಗಳು ರಾಜ್ಯವ್ಯಾಪಿ ಬಂದ್‌ಗೆ ಕರೆ ನೀಡಿದವು.

ದಮನ ಕ್ರಮಕ್ಕಿಳಿದ ಬಿಜೆಪಿ ಸರಕಾರ 19 ಸಾವಿರ ಕಾರ್ಯಕರ್ತರನ್ನು ಅದು ಬಂಧಿಸಿತು. ಆದರೂ ಬಂದ್ ನಡೆಯುವುದನ್ನು ತಡೆಯಲಾಗಲಿಲ್ಲ.

ರಾಜ್ಯಗಳ ಸುತ್ತ

ಕಾಶ್ಮೀರದ ಜನಗಳನ್ನು ಹಿಗ್ಗಾಮುಗ್ಗಾ ಸಾಯಿಸುವುದನ್ನು ನಿಲ್ಲಿಸಿ–ತರಿಗಾಮಿ

ಜೂನ್ 20 ರಂದು ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜ್ಯಪಾಲರ ಆಳ್ವಿಕೆಯನ್ನು ಹೇರಲಾಯಿತು. ನಂತರ ಕೆಲವು ದಿನ ಹಿಂಸಾಚಾರ ಹಾಗೂ ನಾಗರಿಕರ ಸಾವುಗಳು ಕಡಿಮೆಯಾದವು. ಆದರೆ ನಂತರ ಅವು ಮತ್ತೆ ಏರಿವೆ.

ಹವೂರಾದಲ್ಲಿ ಇಬ್ಬರು ಹುಡುಗರು ಮತ್ತು ಒಬ್ಬ ಹದಿಹರೆಯದ ಹುಡುಗಿ ಪೋಲಿಸ್ ಬುಲೆಟ್‌ಗಳಿಗೆ ಬಲಿಯಾಗಿರುವುದು ಕಾಶ್ಮೀರಿಗಳಲ್ಲಿ ಮತ್ತೆ ಆಕ್ರೋಶ ಉಂಟುಮಾಡಿದೆ.

ಇದಕ್ಕೆ ಪ್ರತಿಕ್ರಿಯಿಸುತ್ತ ಜಮ್ಮು ಮತ್ತು ಕಾಶ್ಮೀರದ ಹಿರಿಯ ಸಿಪಿಐ(ಎಂ) ಮುಖಂಡ ಮತ್ತು ಶಾಸಕ ಮಹಮ್ಮದ್ ಯುಸುಫ್ ತರಿಗಾಮಿಯವರು ಇಂತಹ ಘಟನೆಗಳು ಈಗಾಗಲೇ ಹದಗೆಟ್ಟಿರುವ ಪರಿಸ್ಥಿತಿಯನ್ನು ಮತ್ತಷ್ಟು ಅಪಾಯಕಾರಿಯಾಗಿ ಮಾಡುತ್ತವೆ ಎಂದು ಎಚ್ಚರಿಸಿದ್ದಾರೆ.

ಕಾಶ್ಮೀರಿಗಳ ರಕ್ತ ಅಷ್ಟೊಂದು ಅಗ್ಗವಾಗಿದೆಯೇ? ಅಮೂಲ್ಯ ಮಾನವ ಜೀವಗಳ ನಷ್ಟ ಪರಿಸ್ಥಿತಿಗಳಿಗೆ ಕಿಚ್ಚು ಹಚ್ಚುತ್ತವೆ. ಇದನ್ನು ತಕ್ಷಣ ನಿಲ್ಲಿಸಬೇಕು, ಭದ್ರತಾ ಪಡೆಗಳಿಗೆ ಕೊಟ್ಟಿರುವ ಅಭಯ ರಕ್ಷೆಯನ್ನು ತಕ್ಷಣವೇ ಕೊನೆಗೊಳಿಸಬೇಕು ಎಂದು ತರಿಗಾಮಿ ಆಗ್ರಹಿಸಿದ್ದಾರೆ.

ಗುಜರಾತ್ ಮಾದರಿ 1

ಮೂರು ದಶಕಗಳ ನಂತರವೂ ಪರಿಹಾರ ಕೊಡದ ಸರಕಾರದ ಕಾರ್, ಪೀಠೋಪಕರಣಗಳ ಜಪ್ತಿ

ಗುಜರಾತ್ ಸರಕಾರ 199–91 ರಲ್ಲಿ ಥೇಬಿ ಆಣೆಕಟ್ಟು ಮತ್ತು ವಡಿಯ ಆಣೆಕಟ್ಟಿಗೆ ರೈತರ ಜಮೀನನ್ನು ಸ್ವಾಧೀನ ಮಾಡಿಕೊಂಡಿತ್ತು. ಆದರೆ ಅದಕ್ಕೆ ತಕ್ಕ ಬೆಲೆಯನ್ನು ತೆರಲಿಲ್ಲ. ರೈತರು ಕೋರ್ಟಿಗೆ ಹೋದಾಗ ಕೋರ್ಟ್ 9 ರೈತರಿಗೆ ಹೆಚ್ಚಿನ ಪರಿಹಾರ ಕೊಡಬೇಕು ಎಂದು ಆದೇಶ ನಿಡಿತು. ಆದರೆ ಸರಕಾರ ಅದನ್ನು ಪಾಲಿಸಲಿಲ್ಲ. ಆದ್ದರಿಂದ ಜುಲೈ 5ರಂದು ಕೋರ್ಟ್ ಗುಜರಾತ್ ಸರಕಾರದ ನೀರಾವರಿ ಇಲಾಖೆ ಕಾರ್‌ಗಳನ್ನು ಮತ್ತು ಪೀಠೋಪಕರಣಗಳನ್ನು ಜಪ್ತಿ ಮಾಡಿಸಿದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ. (ಜುಲೈ 8)

ಸರಕಾರ ಈ ಆದೇಶದ ವಿರುದ್ಧ ಅಪೀಲು ಹೋಗಬೇಕೆಂದು ನಿರ್ಧರಿಸಿದ್ದರಿಂದ ಅದನ್ನು ಪಾಲಿಸಿರಲಿಲ್ಲ ಎಂದು ನೀರಾವರಿ ಇಲಾಖೆಯ ಕಾರ್ಯಕಾರಿ ಇಂಜಿನಿಯರ್ ಸಮಜಾಯಿಷಿ ನೀಡಿದ್ದಾರಂತೆ.

ಗುಜರಾತ್ ಮಾದರಿ 2

ಮೀನುಗಾರರು, ರೈತರಿಗೆ ಮುಳುವಾದ ನೀರು ರಾಜಕೀಯ

ಇತ್ತೀಚೆಗೆ ಗುಜರಾತ್ ಚುನಾವಣೆಗಳ ವೇಳೆಯಲ್ಲಿ ನರ್ಮದಾ ಹತೋಟಿ ಪ್ರಾಧಿಕಾರದ ಎಚ್ಚರಿಕೆಯನ್ನೂ ಕಡೆಗಣಿಸಿ ಸರ್ದಾರ್ ಸರೋವರ ಆಣೆಕಟ್ಟಿನಿಂದ ನೀರನ್ನು ಸೌರಾಷ್ಟ್ರ ಮತ್ತು ಭುಜ್‌ನ ಜಲಾಶಯಗಳು ತುಂಬಿ ತುಳುಕುವಂತೆ ಹರಿಸಲಾಯಿತು– ಅಲ್ಲಿ ಜನಗಳಿಗೆ ಆಳುವ ಪಕ್ಷದ ಸಾಧನೆಗಳನ್ನು ಪ್ರದರ್ಶಿಸಲು. ಆದರೆ ಅದನ್ನೆಲ್ಲ ಅಲ್ಲಿ ಸಂಗ್ರಹಿಸಲಾಗಲಿಲ್ಲ. ಅದನ್ನು ಹೊರಬಿಡಲಾಯಿತು.

ಈಗ ಸರ್ದಾರ್ ಸರೋವರ್ ಆಣೆಕಟ್ಟಿನಲ್ಲಿ ನೀರಿನ ಮಟ್ಟ ಬಹಳ ಕೆಳಕ್ಕಿಳಿದಿದೆ. ಮಾನ್ಸೂನ್ ನಿರೀಕ್ಷಿತ ಮಳೆಯನ್ನು ತಂದಿಲ್ಲ. ಆದರೂ ಕೈಗಾರಿಕೆಗಳಲ್ಲಿ ನೀರಿನ ಬರವಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆ. ಇವೆಲ್ಲದರ ದುಷ್ಪರಿಣಾಮಗಳನ್ನು ಅಲ್ಲಿಯ ರೈತರೊಂದಿಗೆ ಮೀನುಗಾರರೂ ಮೀನಿನ ಕ್ಷಾಮದ ಮೂಲಕ ಎದುರಿಸುತ್ತಿದ್ದಾರೆ ಎಂದು ವರದಿಯಾಗಿದೆ.

(ಔಟ್‌ಲುಕ್ ಇಂಡಿಯಾ, ಜುಲೈ 16)

ಟರ್ಕಿ : ಅಧ್ಯಕ್ಷರಾಗಿ ಎರ್ಡೋಗಾನ್ ಪುನರಾಯ್ಕೆ



ರೆಸೆಪ್ ತಯಿಪ್ ಎರ್ಡೋಗಾನ್ ಟರ್ಕಿಯ ಅಧ್ಯಕ್ಷೀಯ ಸ್ಥಾನಕ್ಕೆ ನಡೆದ ಮರು ಚುನಾವಣೆಯಲ್ಲಿ ಎರಡನೇ ಬಾರಿಗೆ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಎರ್ಡೋಗಾನ್ ತನ್ನ ಹದಿನೈದು ವರ್ಷಗಳ ಆಡಳಿತವನ್ನು ಈ ಅಧ್ಯಕ್ಷೀಯ ಗೆಲುವಿನೊಂದಿಗೆ ಮತ್ತಷ್ಟು ಕಾಲ ವಿಸ್ತರಿಸಿ ಕೊಂಡಿದ್ದಾರೆ. 2017 ರಲ್ಲಿ ನಡೆದ ಸಾಂವಿಧಾನಿಕ ತಿದ್ದುಪಡಿಗಳನ್ನು ಸರಳ ಬಹುಮತದಿಂದ (ಶೇಕಡಾ 51 ರಷ್ಟು) ಜನಾಭಿಪ್ರಾಯ ಸಂಗ್ರಹಣೆಯ ಮೂಲಕ ಅಂಗೀಕರಿಸಿದ ನಂತರ ನಡೆದ ಮೊದಲ ಅಧ್ಯಕ್ಷೀಯ ಚುನಾವಣೆ ಇದಾಗಿತ್ತು. ಅಧ್ಯಕ್ಷರಿಗೆ ವ್ಯಾಪಕ ಕಾರ್ಯಕಾರಿ ಅಧಿಕಾರವನ್ನು ಈ ತಿದ್ದುಪಡಿ ಮಾಡಿದ ಸಂವಿಧಾನವು ಒದಗಿಸಿದೆ. ಇದರಿಂದಾಗಿ ಅಧ್ಯಕ್ಷ ಎರ್ಡೋಗಾನ್ ಆಡಳಿತಾತ್ಮಕವಾಗಿ ಎಲ್ಲಾ ಸಂಸ್ಥೆಗಳನ್ನು ತನ್ನ ನೇರ ಹಿಡಿತದಲ್ಲಿ ಇಟ್ಟುಕೊಳ್ಳುವ ಸಂಭವ ಹೆಚ್ಚಾಗಿದೆ. ಇಲ್ಲಿಯವರೆಗೂ ಮೂರು ಬಾರಿ ಪ್ರಧಾನಿ ಅಗಿದ್ದ ಎರ್ಡೋಗಾನ್ ರವರು, ಪ್ರಧಾನಿಯ ಹುದ್ದೆಯನ್ನು ಇದೀಗ ರದ್ದು ಮಾಡಿ, ಸಂಸತ್ತನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವ ಅಧಿಕಾರವನ್ನು ಹೊಂದಿದ್ದಾರೆ.

ತುರ್ತು ಪರಿಸ್ಥಿತಿಯಲ್ಲೇ ನಡೆದ ಚುನಾವಣೆ !

2016 ರಲ್ಲಿನ ವ್ಯಾಪಕ ಮಿಲಿಟರಿ ಕಾರ್ಯಾಚರಣೆಯ ನಂತರ ಘೋಷಿಸಲ್ಪಟ್ಟ ತುರ್ತುಪರಿಸ್ಥಿತಿಯಲ್ಲೇ ನಡೆದ ಚುನಾವಣೆ ಇದಾಗಿತ್ತು. ಈ ಚುನಾವಣೆ ಯಲ್ಲಿ ಎರ್ಡೋಗನ್ ರ ಎಕೆಪಿ ಪಕ್ಷ (ಜಸ್ಟೀಸ್ ಅಂಡ್ ಡೆವೆಲಪಮೆಂಟ್,), ಮೊದಲ ಸ್ಥಾನ ಪಡೆದು ಶೇ.52.5 ರಷ್ಟು ಮತ ಪಡೆದು, ತಮ್ಮ ಪ್ರತಿಸ್ಪರ್ಧಿ ಹತ್ತಿರದ ರಿಪಬ್ಲಿಕನ್ ಪೀಪಲ್ಸ್ ಪಕ್ಷದ ಅಭ್ಯರ್ಥಿ ಮಹರಂ ಇನ್ಸ್ ರವರ ವಿರುದ್ಧ ಗೆಲುವು ಸಾಧಿಸಿದ್ದಾರೆ. ಶೇ. 38.8 ರಷ್ಟು ಮತ ಪಡೆದು ಮಹರಂ ಎರಡನೇ ಸ್ಥಾನ ಪಡೆದಿದ್ದಾರೆ. ಕುರ್ದೀಶ್ ಜನರ ಪರವಾದ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷ (ಹೆಚ್.ಡಿ.ಪಿ) ಯ, ಅಭ್ಯರ್ಥಿ ಸೆಲ್ಲಾ ಹಟ್ಟಿನ್ ಡೆಮಿರ್ಟಾಗಳು, ಜೈಲಿನಲ್ಲಿ ಇದ್ದುಕೊಂಡೆ ಚುನಾವಣೆಯನ್ನು ಎದುರಿಸಿ, ಶೇ. 8 ರಷ್ಟು ಮತಗಳೊಂದಿಗೆ, ಮೂರನೇ ಸ್ಥಾನ ಪಡೆದಿದ್ದಾರೆ.



ಮತ್ತು ರಾಷ್ಟ್ರೀಯತಾವಾದಿ ಗುಡ್ (ಐ.ವೈ.ಐ) ಪಕ್ಷದ ಅಭ್ಯರ್ಥಿ ಮೆರಾಲ್ ಅಕ್ಸೆನರ್ ಶೇ. 7 ರಷ್ಟು ಪಡೆದು ಕೊನೆಯ ಸ್ಥಾನ ಪಡೆದಿದ್ದಾರೆ.

ನವೆಂಬರ್ 2019 ರಲ್ಲಿ ನಡೆಯಬೇಕಾಗಿದ್ದ ಚುನಾವಣೆಗಳನ್ನು ಮುಂಚಿತವಾಗಿಯೇ ನಡೆಸಲು ಎರ್ಡೋಗಾನ್ ರವರೇ ತೀರ್ಮಾನಿಸಿದ್ದರು. ಸಿರಿಯಾದೊಳಗಿನ ಪ್ರದೇಶಗಳಲ್ಲಿ ಟರ್ಕಿಯ ಮಿಲಿಟರಿ ಕಾರ್ಯಾಚರಣೆಗಳು ಮತ್ತು ಭದ್ರತಾ ಸವಾಲುಗಳ ಕಳವಳ ಇದಕ್ಕೆ ಅವರು ಕೊಟ್ಟ ಸಮರ್ಥನೆ ಯಾಗಿತ್ತು. ಅಧ್ಯಕ್ಷೀಯ ಚುನಾವಣೆಯೊಂದಿಗೆ, ಪಾರ್ಲಿಮೆಂಟ್ ಗೂ ಏಕಕಾಲದಲ್ಲಿ ಚುನಾವಣೆ ನಡೆಸಲು ಎರ್ಡೋಗಾನ್ ನಿರ್ಣಯಿಸಿದ್ದರು. ಸಂಸತ್ ಗೆ ನಡೆದ ಚುನಾವಣೆಯಲ್ಲಿ ಎಕೆಪಿ (ಜಸ್ಟೀಸ್ ಮತ್ತು ಡೆವಲಪ್ಮೆಂಟ್) ಎರ್ಡೋಗಾನ್ ಪಕ್ಷವು ಶೇ.42 ರಷ್ಟು ಮತ ಪಡೆದು, ಅತ್ಯಂತ ದೊಡ್ಡ ಪಕ್ಷವಾಗಿ ಹೊರ ಬಂದಿದೆ. ಬಲ ಪಂಥೀಯ ಪ್ರತಿಗಾಮಿ ನ್ಯಾಷನಲ್ ಮೂವ್ಮೆಂಟ್ ಪಕ್ಷ (ಎಮ್.ಹೆಚ್.ಪಿ) ಜತೆ ಎಕೆಪಿಯ ಇವರ ಮೈತ್ರಿ ಕೂಟ, ಶೇ. 11.5 ರಷ್ಟು ಮತ ಪಡೆದು, ಒಟ್ಟು ಶೇ.53.5 ರಷ್ಟು ಪಡೆದು ಈ ಮೈತ್ರಿ ಕೂಟವು ಪಾರ್ಲಿಮೆಂಟ್‌ನಲ್ಲಿ ಬಹುಮತ ಪಡೆದು ಅಧಿಕಾರ ಹಿಡಿದಿದೆ. ಕುರ್ದೀಶ್ ಪರವಾದ ಹೆಚ್.ಡಿ.ಪಿ ಪಕ್ಷವು ಶೇ.11.5. ರಷ್ಟು ಮತ ಪಡೆದು, ಸಂಸತ್ತು ಪ್ರವೇಶಿಸಲು ಅಗತ್ಯವಿರುವ ಶೇ. 10ರ ಮಿತಿಯನ್ನು ಮೀರಿ 67 ಸ್ಥಾನವನ್ನು ಪಡೆದು ಪ್ರತಿ ಪಕ್ಷವಾಗಿ ತನ್ನ ಕಾರ್ಯ ನಿರ್ವಹಿಸಲು ಸಿದ್ದವಾಗಿದೆ.

ಸಾಂವಿಧಾನಿಕ ಸರ್ವಾಧಿಕಾರಿ

ಸಾಂವಿಧಾನಿಕ ತಿದ್ದುಪಡಿಗಳ ನಂತರದ ಹೊಸ ವ್ಯವಸ್ಥೆಯಡಿಯಲ್ಲಿ ಪಾರ್ಲಿಮೆಂಟಿನ ಅಧಿಕಾರವನ್ನು ತೀವ್ರವಾಗಿ ಕಡಿತಗೊಳಿಸಲಾಗಿದ್ದು ನಿರ್ಣಾಯಕ ಪಾತ್ರವನ್ನು ಅಧ್ಯಕ್ಷರೇ ನಿರ್ವಹಿಸಬಹುದು. ಪ್ರಧಾನಿ ಹುದ್ದೆಯನ್ನು ರದ್ದು ಗೊಳಿಸಲಾಗಿದೆ. ಅಧ್ಯಕ್ಷರು ತಮಗೆ ಬೇಕಾದಂತಹವರನ್ನು ನ್ಯಾಯಾಧೀಶರಾಗಿ ನೇಮಿಸಬಹುದು. ಸಚಿವ ಸಂಪುಟಕ್ಕೆ ಬೇಕಾದವರನ್ನು ಪಾರ್ಲಿಮೆಂಟಿನ ಹೊರಗಿನಿಂದಲೂ ನೇಮಿಸಲು ಅಧ್ಯಕ್ಷರಿಗೆ ಎಲ್ಲಾ ಅಧಿಕಾರವಿರುತ್ತದೆ. ಅಸಾಮಾನ್ಯವಾದ ನಿರ್ಣಯಗಳನ್ನು ಅದರಲ್ಲಿಯೂ, ತುರ್ತು ಪರಿಸ್ಥಿತಿ ಘೋಷಣೆ ಹಾಗೂ ಸಾರ್ವತ್ರಿಕ ಚುನಾವಣೆಗಳನ್ನು ಕೂಡ ಘೋಷಿಸಬಹುದಾದ ಅಧಿಕಾರವನ್ನು ಅಧ್ಯಕ್ಷ ಎರ್ಡೋಗಾನ್ ಇದೀಗ ಹೊಂದಿರುತ್ತಾರೆ. ಅವರು ಒಂದು ರೀತಿಯ 'ಸಾಂವಿಧಾನಿಕ ಸರ್ವಾಧಿಕಾರಿ' ಆಗಿದ್ದಾರೆ. ಮೋದಿ ಮತ್ತು ಬಿಜೆಪಿ–ಆರೆಸ್ಸೆಸ್ ಇದೇ ರೀತಿಯ 'ಸಾಂವಿಧಾನಿಕ ಸರ್ವಾಧಿಕಾರ' ಸ್ಥಾಪಿಸಲು ಪ್ರಯತ್ನಿಸುತ್ತಿದೆ ಎಂದು ಗಮನಿಸಬಹುದು.

2016 ರಲ್ಲಿನ ಕ್ಷಿಪ್ರಕ್ರಾಂತಿಯನ್ನು ಮಾಜಿ ಮಿತ್ರ ಫೆತುಲ್ಲಾ ಗುಲೆನ್ರ ರ ಮೇಲೆ ಗೂಬೆ ಕೂರಿಸುವ ಪ್ರಯತ್ನ ವನ್ನು ಎರ್ಡೋಗಾನ್ ಮಾಡಿ, ದಂಗೆಗಳಿಗೆ, ಹಿಂಸಾತ್ಮಕ ಮತ್ತು ಘರ್ಷಣೆಗಳಿಗೆ ಫೆತುಲ್ಲಾರೆ ಕಾರಣರೆಂದು ಆರೋಪ ಹೊರಿಸಿದ್ದಾರೆ. ಗುಲೆನ್ರರ ಬೆಂಬಲಿಗರಾದ ಸುಮಾರು 1.60 ಲಕ್ಷ ಜನರನ್ನು ಬಂಧಿಸಲಾಗಿದೆ. ಅವರಲ್ಲಿ ಸಾವಿರಾರು ಸರ್ಕಾರಿ ಉದ್ಯೋಗಿಗಳು ಹಾಗೂ ಸೈನಿಕರು ಸೇರಿದ್ದು, ಕೆಲಸದಿಂದ ವಜಾ ಮಾಡಲಾಗಿದೆ. ಹೆಚ್.ಡಿ.ಪಿ ಯ ಸೆಲ್ಲಾ ಹಟ್ಟಿನ್ ಡೆಮಿರ್ಟಾ ಜೈಲಿನಿಂದಲೇ ಚುನಾವಣಾ ಅಭಿಯಾನ ನಡೆಸಿದರು. ಅವರನ್ನು ಭಯೋತ್ಪಾದನೆಯ ಆರೋಪಗಳ ಮೇಲೆ ಸೆರೆಮನೆಗೆ ನೂಕಲಾಗಿದೆ.

ಎರ್ಡೋಗಾನ್ ಆಡಳಿತದಲ್ಲಿ ಟರ್ಕಿಯ ಆರ್ಥಿಕತೆಯು ಅಧೋಗತಿಗೆ ತಲುಪಿದೆ. ಟರ್ಕಿಯ ನಾಣ್ಯ ಲಿರಾ ಡಾಲರ್ ಎದುರು ಶೇ.20 ರಷ್ಟು ಮೌಲ್ಯವನ್ನು ಕಳೆದುಕೊಂಡಿತ್ತು, ಹಣದುಬ್ಬರವು ಎರಡಂಕಿ ದಾಟಿತ್ತು. ಅಗತ್ಯ ವಸ್ತುಗಳ ಲ್ಲಿ ಪ್ರಮುಖವಾಗಿ, ಆಲೂಗಡ್ಡೆ ಮತ್ತು ಈರುಳ್ಳಿಯ ಬೆಲೆಗಳು ವಿಪರೀತ ಹೆಚ್ಚಾದ ಕಾರಣ ಜನರು ಕಳವಳಗೊಂಡು ಟರ್ಕಿಯ ಕಮ್ಯೂನಿಸ್ಟ್ ಪಕ್ಷದ (ಟಿ.ಕೆ.ಪಿ) ನೇತೃತ್ವದಲ್ಲಿ ಹೋರಾಟದ ಹಾದಿ ಹಿಡಿದಾಗ, ಅದರ ಪ್ರಧಾನ ಕಾರ್ಯದರ್ಶಿ ಕೆಮಾಲ್ ಒಕುಯಾನ್ ಹಾಗೂ ಸಾವಿರಾರು ಜನರನ್ನು ಸೆರೆಮನೆಗೆ ದಬ್ಬಿ ಇಲ್ಲ ಸಲ್ಲದ ಆರೋಪಗಳ ಪಟ್ಟಿ ಹೊರೆಸಿ ಚುನಾವಣೆಯಲ್ಲಿ ಭಾಗವಹಿಸದ ಹಾಗೆ ಮಾಡಲಾಗಿದೆ. ಇದೀಗ ಹೊಸದಾಗಿ ರೂಪುಗೊಂಡ ಸಾಂವಿಧಾನಿಕ ವ್ಯವಸ್ಥೆಯಲ್ಲಿ, ಎರ್ಡೋಗಾನ್ ಸರ್ವಾಧಿಕಾರಿ ಪ್ರವೃತ್ತಿ ಯಾವ ಮಟ್ಟ ತಲುಪುವುದೋ ಕಾದುನೋಡಬೇಕು. ●



ರಾಜ್ಯಾದ್ಯಂತ ಮೊಳಗಿದ 'ICDS ಉಳಿಸಿ'

ಪ್ರಶಾಂತ ಹಟ್ಟಿ

ICDS ಕಾರ್ಯಕ್ರಮವನ್ನು ಮುಚ್ಚಲು ಹೋರಟಿರುವ, 'ತಾಯಿ ಮತು ಮಗುವಿನ ಆಹಾರದ ಹಕ್ಕು'ಗಕನ್ನು ಕಸಿಯಲು ಮುಂದಾಗಿರುವ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಜುಲೈ 10 ರಂದು 'ICDS ಉಳಿಸಿ' ಮತ್ತು ನೌಕರರ ಹಲವು ಬೇಡಿಕೆಗಳಿಗಾಗಿ ಒತ್ತಾಯಿಸಿ ದೇಶವ್ಯಾಪಿ ಮುಷ್ಕರ ಹಮ್ಮಿಕೊಳ್ಳಲಾಗಿತ್ತು. ಅದರ ಭಾಗವಾಗಿ ಸಿ.ಐ.ಟಿ.ಯು ಸಂಯೋಜಿತ ಅಂಗನವಾಡಿ ನೌಕರರ ಸಂಘ ರಾಜ್ಯದ 27 ಜಿಲ್ಲಾ ಕೇಂದ್ರಗಳಲ್ಲಿ, 123 ತಾಲೂಕು ಕೇಂದ್ರಗಳಲ್ಲಿ ವಿವಿಧ ಕಾರ್ಯಾಚರಣೆಗಳನ್ನು ಸಂಘಟಿಸಿದೆ. ಇವುಗಳಲ್ಲಿ 114 ತಾಲೂಕುಗಳಲ್ಲಿ ಮುಷ್ಕರ ಪೂರ್ಣವಾಗಿದ್ದು ಎಲ್ಲಾ ಅಂಗನವಾಡಿ ಕೇಂದ್ರಗಳು ಮುಚ್ಚಿದ್ದವು. ಉಳಿದ ತಾಲೂಕುಗಳಲ್ಲಿ ಭಾಗಶಃ ಮುಷ್ಕರ ನಡೆದಿದೆ. 40 ಸಾವಿರಕ್ಕೂ ಕ್ಕೂ ಹೆಚ್ಚು ಜನರು ಮುಷ್ಕರ, ಮೆರವಣಿಗೆ, ಜಿಲ್ಲಾಧಿಕಾರಿ ಮುತ್ತಿಗೆ ಮುಂತಾದ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ್ದರು, ಎಂದು ತಿಳಿದು ಬಂದಿದೆ. ಕೇವಲ ಮೂರು ಜಿಲ್ಲೆಗಳಲ್ಲಿ ಮಾತ್ರ ವಿಪರೀತ ಮಳೆ (ದ.ಕ, ಕೊಡಗು) ಮತ್ತು ಕೆಲವು ದಿನಗಳ ಹಿಂದೆ ಪ್ರತಿಭಟನೆ ನಡೆದಿರುವುದರಿಂದ (ಕಲಬುರಗಿ) ಮನವಿ ಪತ್ರ ಸಲ್ಲಿಕೆಗೆ ಸೀಮಿತವಾಗಿತ್ತು.

ಬೀದರ: ನಗರದ ಗಣೇಶ ಮೈದಾನದಿಂದ ಜಿಲ್ಲಾಧಿಕಾರಿ ಕಚೇರಿವರೆಗೂ ಮೆರವಣಿಗೆ ಮೂಲಕ ಬಂದು ಜಿಲ್ಲಾ ಕಛೇರಿ ಮುಂದೆ ಪ್ರತಿಭಟನೆ ಮಾಡಲಾಯಿತು.

ಚಾಮರಾಜನಗರ: ನಗರದ ಚಾಮರಾಜೇಶ್ವರಿ ದೇವಸ್ಥಾನದಿಂದ ಭುವನೇಶ್ವರಿ ವೃತ್ತ, ಬಿ ರಾಚಯ್ಯ ಮೋಡಿ ರಸ್ತಯ ಮೂಲಕ ಜಿಲ್ಲಾಡಳಿತ ಭವನಕ್ಕೆ ಮೆರವಣಿಗೆ ಮೂಲಕ ತೆರಳಿ ಧರಣಿ ಸತ್ಯಾಗ್ರಹ ಮಾಡಿದರು. ನಂತರ ಜಿಲ್ಲಾಧಿಕಾರಿ ಬಿ.ಬಿ ಕಾವೇರಿ ಅವರಿಗೆ ಮನವಿ ಸಲ್ಲಿಸಿದರು.

ವಿಜಯಪುರ: ಅಂಗನವಾಡಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷೆ ಭಾರತಿ ವಾಲಿ ಹಾಗೂ ರೈತ ಸಂಘದ ಭೀಮಶಿ ಕಲಾದಗಿ ನೇತೃತ್ವದಲ್ಲಿ ನಗರದ ಸಿದ್ದೇಶ್ವರ ದೇವಸ್ಥಾನದಿಂದ ಬೃಹತ್ ಮೆರವಣಿಗೆಯೊಂದಿಗೆ ನಗರದ ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ತೆರಳಿ, ಜಿಲ್ಲಾಧಿಕಾರಿ ಎಸ್.ಬಿ.ಶೆಟ್ಟೆಣ್ಣವರ ಕಚೇರಿಗೆ ಮನವಿ ಸಲ್ಲಿಸಿದರು.

ಹಾವೇರಿ: ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಬಳ್ಳಾರಿ: ನಗರದ ನಾರಯಣ ಉದ್ಯಾನವನದಿಂದ ಮೆರವಣಿಗೆ ಆರಂಭಿಸಿ ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಅಂಗನವಾಡಿ ನೌಕರರ ಸಂಘದ ಗೌರವ ಅಧ್ಯಕ್ಷೆ ನಾಗರತ್ನಮ್ಮ ಕೆ. ಮಾತನಾಡಿದರು.

ಬಾಗಲಕೋಟೆ: ನಗರದಲ್ಲಿ ಸುರಿದ ಜಿಟಿ ಜಿಟಿ ಮಳೆಗೂ ಜಗ್ಗದೇ ಹಲವು ಬೇಡಿಕೆಗಳನ್ನು ಇಟ್ಟುಕೊಂಡು ನಗರದ ಉದ್ಯಾನದಿಂದ ಮಂಗಳವಾರ ಜಿಲ್ಲಾಡಳಿತ ಭವನದವರೆಗೂ ಸಾವಿರಾರು ನೌಕರರು ಮೆರವಣಿಗೆ ಯಲ್ಲಿ ಬಂದು, ಜಿಲ್ಲಾ ಕಛೇರಿ ಮುಂದೆ ಪ್ರತಿಭಟನೆಗೆ ಕೂತರು. ನಂತರ ಜಿಲ್ಲಾಧಿಕಾರಿ ಕೆ.ಜಿ. ಶಾಂತರಾಮ ಅವರಿಗೆ ಮನವಿ ಸಲ್ಲಿಸಲಾಯಿತು.

ತುಮುಕೂರು: ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಛೇರಿ ಮುಂದೆ ಸೇರಿ ಪ್ರತಿಭಟನೆ ಮಾಡಿ ಮನವಿ ಸಲ್ಲಿಸಲಾಯಿತು. ಜಿಲ್ಲಾಧಿಕಾರಿಗಳು ಮನವಿ ಸ್ವಿಕರಿಸಿ ಸಮಸ್ಯೆಗಳನ್ನು ಬಗೆ ಹರಿಸಲು ಒಂದು ವಾರದೊಳಗೆ ಸಭೆ ಕರೆಯುವುದಾಗಿ ತಿಳಿಸಿದರು.

ಉತ್ತರಕರ್ನಾಟಕ: ಧಾರಕಾರ ಮಳೆಯ ಮಧ್ಯೆ ಸಾವಿರಾರು ಕಾರ್ಯಕರ್ತೆ ನೌಕರರು ಛತ್ರಿ ಹಿಡಿದು ಜಿಲ್ಲಾಧಿಕಾರಿ ಕಛೇರಿಗೆ ಮೆರವಣಿಗೆ ಮೂಲಕ ಹೋಗಿ ಮನವಿ ಸಲ್ಲಿಸಲಾಯಿತು. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಮುಷ್ಕರ ಯಶಸ್ವಿಯಾಗಿದೆ ಎಂದು ತಿಳಿದು ಬಂದಿದೆ.

ಮೈಸೂರು: ಗನ್‌ಹೌಸ್ ನಿಂದ ರ್‍ಯಾಲಿ ಮೂಲಕ 2300 ಜನರು ನೌಕರರು ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಲು ಹೋರಟಾಗ ಪೋಲೀಸರು ಬಾರಿಕೇಡ್ ಹಾಕಿ ನೌಕರರು ಮುಂದೆ ಹೋಗದಂತೆ ತಡೆಯಲಾಯಿತು. ಬಾರಿಕೇಡ್ ಜಿಗಿದು ಹೋಗಲು ಮುಂದಾದಾಗ ಜಿಲ್ಲಾಧಿಕಾರಿ ಬಂದು ಮನವಿ ಸ್ವೀಕರಿಸಿ ಸಭೆ ಕರೆಯುವುದಾಗಿ ಭರವಸೆ ನೀಡಿದರು.

ಮಂಡ್ಯ: ಜಿಲ್ಲಾಧಿಕಾರಿ ಕಛೇರಿಗೆ ಮೆರವಣಿಗೆ ಮೂಲಕ ಬಂದ ನೌಕರರು ಜಿಲ್ಲಾ ಕಛೇರಿ ತಲುಪಿ ಪ್ರತಿಭಟನೆ ಮಾಡಿದರು. ಜಿಲ್ಲಾಧಿಕಾರಿಯಾದ ಎನ್. ಮಂಜುಶ್ರಿಯವರಿಗೆ ಮನವಿ ಸಲ್ಲಿಸಿದರು.

ಚಿಕ್ಕಬಳ್ಳಾಪುರ: ನಗರದಲ್ಲಿ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಕಛೇರಿಗೆ ತಲುಪಿ ಮುತ್ತಿಗೆ ಹಾಕಿ ಪ್ರತಿಭಟಿಸಲಾಯಿತು, ನಂತರ ಜಿಲ್ಲಾಧಿಕಾರಿಗಳು ಮನವಿ ಸ್ವೀಕರಿಸಿ ಸಿ.ಇ.ಓ ಅವರ ಅಧ್ಯಕ್ಷತೆಯಲ್ಲಿ ಕುಂದುಕೊರತೆಗಳನ್ನು ಚರ್ಚಿಸಲು ಜುಲೈ 17 ರಂದು ಸಭೆ ನಿಗಧಿ ಮಾಡಲಾಯಿತು.

ಹಾಸನ: ನಗರದ ಮಹಾರಾಜ ಪಾರ್ಕ್‌ನಿಂದ ಮೆರವಣಿಗೆ ಪ್ರಾರಂಭಿಸಿ ಎನ್.ಆರ್ ಸರ್ಕಲ್ ಮೂಲಕ ಜಿಲ್ಲಾ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಉಡುಪಿ: ಜಿಲ್ಲಾಧಿಕಾರಿ ಕಛೇರಿಗೆ ಮೆರವಣಿಗೆಯಲ್ಲಿ ಬಂದು ಪ್ರತಿಭಟನೆ ನಡೆಸಲಾಯಿತು. ●

JANASHAKTHI KANNADA VARA PATRIKE JULY 16-22, 2018 Price: Rs. 10/- Date of Publication: 13 JULY 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283


ಗದಗ


ಮೈಸೂರು

ರಾಜ್ಯಾದ್ಯಂತ ಮೊಳಗಿದ 'ICDS ಉಳಿಸಿ'

ವರದಿ ಪುಟ 15 ರಲ್ಲಿ


ಉಡುಪಿ


ಹಾಸನ


ಕೋಲಾರ


ಚಿಕ್ಕಬಳ್ಳಾಪುರ


ಕಾರವಾರ


ಬಳ್ಳಾರಿ


ಬೀದರ್


ಮಂಡ್ಯ


ವಿಜಯಪುರ


ಚಾಮರಾಜನಗರ

JANASHAKTHI KANNADA VARA PATRIKE: Printed, Published by **G.V. SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**